ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ 46 । ನವೆಂಬರ್ 9–15, 2020 । ಪುಟ 16 । ರೂ. 10


https://janashakthi.wordpress.com e-mail : js_weekly@yahoo.com



ಕೋವಿಡ್–ಹಿಂಜರಿತ ಕಾಲದಲ್ಲಿ ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿ



ಉದ್ಯೋಗಕ್ಕಾಗಿ ಹೋರಾಟ



ಬೈಡನ್ ಅಮೆರಿಕ ಅಧ್ಯಕ್ಷ ಪಟ್ಟದತ್ತ





100 ವರ್ಷಗಳ ಹೋರಾಟ ತ್ಯಾಗಗಳ ಪರಂಪರೆಯಲ್ಲಿ

CITU 1970-2020
Continuing the legacy of 100 years of struggles and sacrifices
50 years of fight for class unity

ಡಿಸೆಂಬರ್ 10 ರಿಂದ 18: ಮಾನವಹಕ್ಕುಗಳು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ವಾರಾಚರಣೆ

ಜನವರಿ 26, 2021 – ಸಂವಿಧಾನ ರಕ್ಷಣಾ ದಿನ–ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ನವಂಬರ್ 26 ರಂದ ಜನವರಿ 26: ಪ್ರಜಾಪ್ರಭುತ್ವದ ರಕ್ಷಣೆಗೆ ವಿಶಾಲ ರಂಗದ ರಚನೆ

ಪ್ರಜಾಪ್ರಭುತ್ವದ ರಕ್ಷಣೆಗೆ ಬಾಧಕವಾಗಿರುವ ವಿವಿಧ ಪ್ರಶ್ನೆಗಳ ಮೇಲೆ ನವಂಬರ್ 26 ರಿಂದ ಜನವರಿ 26 ರ ನಡುವೆ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಪಕ್ಷಗಳು, ಜನತಾ ಆಂದೋಲನಗಳು, ಚಿಂತಕರು ಮತ್ತು ಇತರ ಪ್ರತಿಷ್ಠಿತ ವ್ಯಕ್ತಿಗಳ ಒಂದು ವಿಶಾಲ ರಂಗವನ್ನು ರಚಿಸಬೇಕು, ಈ ಮೂಲಕ 2021ರ ಗಣತಂತ್ರ ದಿನವನ್ನು 'ಸಂವಿಧಾನ ರಕ್ಷಣಾ ದಿನ'ವಾಗಿ ಆಚರಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.


ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಸಮಿತಿಯ ನಿರ್ಣಯಗಳನ್ನು ತಿಳಿಸುತ್ತಿರುವ ಪಕ್ಷದ ಪ್ರಧಾನ ಕಾರ್ಯದರ್ಶಿಗಳು

ಡಿಸೆಂಬರ್ 10 ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ದಿನ ಮತ್ತು ಡಿಸೆಂಬರ್ 18 ಅಂತರ್ರಾಷ್ಟ್ರೀಯ ಅಲ್ಪಸಂಖ್ಯಾತರ ಹಕ್ಕುಗಳ ದಿನ. ಡಿಸೆಂಬರ್ 10ರಿಂದ 18 ನಡುವಿನ ಅವಧಿಯಲ್ಲಿ ದೇಶಾದ್ಯಂತ ಮಾನವ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ವಾರಾಚರಣೆ ನಡೆಸಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಅದು ನವಂಬರ್ 26 ರ ಕಾರ್ಮಿಕರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಮತ್ತು ನವಂಬರ್26–27ರಂದು ರೈತರ ಪ್ರತಿಭಟನಾ ಕಾರ್ಯಾಚರಣೆಗೆ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಅಕ್ಟೋಬರ್ 30 ಮತ್ತು 31ರಂದು ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಆನ್‌ಲೈನ್ ಸಭೆಯ ನಂತರ ನೀಡಿರುವ ಹೇಳಿಕೆಯಲ್ಲಿ ಈ ಕರೆಗಳನ್ನು ನೀಡಲಾಗಿದೆ, ನಿರ್ಧಾರಗಳನ್ನು ಪ್ರಕಟಿಸಲಾಗಿದೆ.

ಸಭೆಯ ನಂತರ ಪ್ರಕಟಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ಹೇಳಿಕೆಯ ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:

ಕೊವಿಡ್–19 ಮಹಾಸೋಂಕಿನ ಸ್ಥಿತಿ–ಗತಿ

ಅಮರಿಕ ಸಂಯುಕ್ತ ಸಂಸ್ಥಾನಗಳು, ಭಾರತ ಮತ್ತು ಬ್ರೆಝಿಲ್ ನಲ್ಲಿ ಅತಿ ಹೆಚ್ಚು ಪ್ರಕರಣಗಳು ಮತ್ತು ಸಾವುಗಳು ವರದಿಯಾಗಿವೆ.

ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿಗಳು ಈ ಸಾಂಕ್ರಾಮಿಕವನ್ನು ತಡೆದಿಡುವ ತಮ್ಮ ಜವಾಬ್ದಾರಿಯನ್ನು ತೊರೆದೇ ಬಿಟ್ಟಿದ್ದಾರೆ. ಇನ್ನೂ ಕೆಡುಕಿನ ಸಂಗತಿಯೆಂದರೆ ಕೋಟ್ಯಂತರ ಜನತೆ ಸಾಂಕ್ರಾಮಿಕದ ಹೊಡೆತ ಮತ್ತು ಆಳಗೊಳ್ಳುತ್ತಿರುವ ಆರ್ಥಿಕ ಹಿಂಜರಿತದ ಇಕ್ಕುಳದಲ್ಲಿ ಸಿಲುಕಿಕೊಂಡಿದ್ದಾರೆ. ಪ್ರಧಾನ ಮಂತ್ರಿ ಮೋದಿ, ಮಾರ್ಚ್ 25ರಂದು ರಾಷ್ಟ್ರೀಯ ಲಾಕ್‌ಡೌನ್ ಹೇರಿದಂದಿನಿಂದ ಸಿಪಿಐ(ಎಂ) ಆಗ್ರಹಿಸುತ್ತಿರುವಂತೆ ನಗದು ವರ್ಗಾವಣೆ ಮತ್ತು ಆಹಾರಧಾನ್ಯಗಳ ಉಚಿತ ವಿತರಣೆಯ ಬಗ್ಗೆ ಪ್ರಕಟಿಸಲು ನಿರಾಕರಿಸುತ್ತಿದ್ದಾರೆ. ಜನಗಳ ಹೆಚ್ಚುತ್ತಿರುವ ಸಂಕಟಗಳಿಗೆ, ನಾಗಾಲೋಟ ಹೂಡಿರುವ ನಿರುದ್ಯೋಗಕ್ಕೆ ಮತ್ತು ಹೆಚ್ಚುತ್ತಿರುವ ಹಸಿವಿಗೆ ಯಾವುದೇ ಪರಿಹಾರವನ್ನು ಒದಗಿಸುತ್ತಿಲ್ಲ.

ಚುಚ್ಚುಮದ್ದು: ಚುಚ್ಚುಮದ್ದು ಸಾರ್ವತ್ರಿಕವಾಗಿ ಎಲ್ಲ ಜನರಿಗೆ ಉಚಿತವಾಗಿ ಲಭ್ಯವಾಗಬೇಕು ಎಂಬುದು ಸದಾ ಪಕ್ಷದ ನಿಲುವು. ಸ್ವತಂತ್ರ ಭಾರತದಲ್ಲಿ ಆರಂಭದಿಂದಲೂ ಇದೇ ಪದ್ಧತಿಯಾಗಿದೆ– ಸಿಡುಬಿನ ನಿರ್ಮೂಲನೆಯ ಪ್ರಚಾರದಿಂದ ಹಿಡಿದು ಇತ್ತೀಚಿನ ಪೋಲಿಯೋ ನಿರ್ಮೂಲನದ ವರೆಗೆ ಹೀಗೇ ನಡೆದುಕೊಂಡು ಬರಲಾಗಿದೆ. ಇದು ಕೇಂದ್ರ ಸರಕಾರದ ಪ್ರಾಥಮಿಕ ಹೊಣೆಯಾಗಿದ್ದು , ಅದು ಸದಾ ಜನಗಳು ಚುಚ್ಚುಮದ್ದು ಹಾಕಿಸಿಕೊಳ್ಳುವಂತೆ ಜಾಗೃತಿ ಪ್ರಚಾರಗಳನ್ನು ನಡೆಸಿಕೊಂಡು ಬಂದಿದೆ.

ಕೊವಿಡ್–19 ಚುಚ್ಚುಮದ್ದಿನ ವಿಷಯದಲ್ಲೂ ಹಾಗೆಯೇ ಆಗಬೇಕು. ಈ ಚುಚ್ಚುಮದ್ದು ಬೇಗನೇ ಲಭ್ಯವಾಗುತ್ತದೆ ಎಂದು ಆಶಿಸೋಣ. ಆದರೆ, ಕೇಂದ್ರ ಸರಕಾರ ಈ ವಿಷಯದಲ್ಲೂ ತನ್ನ ಜವಾಬ್ದಾರಿಯನ್ನು ತೊರೆಯುತ್ತಿರುವಂತೆ ಕಾಣುತ್ತದೆ, ಈ ಬಗ್ಗೆ ನಿರ್ಧರಿಸಲಾಗುವುದು ಎನ್ನುತ್ತ ಅದನ್ನು ರಾಜ್ಯ ಸರಕಾರಗಳಿಗೆ ದಾಟಿಸುವಂತೆ ಕಾಣುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಕೇಂದ್ರ ಸರಕಾರ ಇದನ್ನೊಂದು ರಾಷ್ಟ್ರೀಯ ಪ್ರಚಾರಾಂದೋಲನವಾಗಿ ಮಾಡಬೇಕು ಮತ್ತು ಸಾರ್ವತ್ರಿಕವಾಗಿ ಇದು ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯವಾಗುವಂತೆ ಖಾತ್ರಿಪಡಿಸಬೇಕು.

'ಕ್ವಾಡ್'(QUAD)

ಕೇಂದ್ರ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿ ನೇತೃತ್ವದ ಮಿಲಿಟರಿ ಸಖ್ಯತೆಯನ್ನು ಗಟ್ಟಿಗೊಳಿಸಿದೆ. ಇದು ಸಮಯದ ಒರೆಗಲ್ಲಿನಲ್ಲಿ ಸಾಬೀತಾಗಿರುವ ಭಾರತದ ವಿದೇಶಾಂಗ ಧೋರಣೆಯ ಸಂಪೂರ್ಣ ನಿರಾಕರಣೆಯಾಗಿದೆ. ಈ ಧೋರಣೆ ಯಾವುದೇ ಮಿಲಿಟರಿ ಸಖ್ಯತೆಯ ಭಾಗವಾಗದೇ, ಅಮರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ವ್ಯೂಹಾತ್ಮಕ ಸಖ್ಯತೆ ಇಲ್ಲದೆ ನಮ್ಮ ದೇಶದ ಹಿತದೃಷ್ಟಿಯಿಂದ ಸ್ವತಂತ್ರವಾಗಿ ನಿಲುವು ತೆಗೆದುಕೊಳ್ಳುವುದನ್ನು ಆಧರಿಸಿತ್ತು. ಮೊತ್ತಮೊದಲ ಬಾರಿಗೆ, 'ಕ್ವಾಡ್'(ಚತುರ್ರಾಷ್ಟ್ರ) ಜಂಟಿ ಮಿಲಿಟರಿ ಸಮರಾಭ್ಯಾಸ, ಮಲಬಾರ್ ನಾವಿಕ ಸಮರಾಭ್ಯಾಸ 2020 ನ್ನು ನಡೆಸಲಿದೆ.

ಆರ್ಥಿಕ ಹಿಂಜರಿತ

ರಿಝರ್ವ್ ಬ್ಯಾಂಕ್ 2020–21 ರ ಹಣಕಾಸು ವರ್ಷದಲ್ಲಿ (–)9.5 ಶೇ. ಕುಗ್ಗುವಿಕೆ ಸಂಭವಿಸಬಹುದು ಎಂದು ಅಂದಾಜು ಮಾಡಿದೆ. ನಂತರ ಐಎಂಎ??? ಇದು (–)10.3 ಎಂದು ಲೆಕ್ಕ ಹಾಕಿದೆ. ಈ ಕುಗ್ಗುವಿಕೆ 2016–17ರಿಂದ ಜಿಡಿಪಿ ಬೆಳವಣಿಗೆ ದರದಲ್ಲಿ ಆಗುತ್ತಿರುವ ಸತತ ಇಳಿಕೆಯ ಮೇಲೆ ಉಂಟಾಗುತ್ತಿದೆ. ಜಿಡಿಪಿ ಬೆಳವಣಿಗೆ ದರ 2016–17ರಲ್ಲಿ 8.3ಶೇ. ಇತ್ತು, 2017–18ರಲ್ಲಿ 7 ಶೇ.ಕ್ಕೆ, 2018–19ರಲ್ಲಿ 6.1ಶೇ.ಕ್ಕೆ, 2019–20ರಲ್ಲಿ 4.ಶೇ.ಕ್ಕೆ ಇಳಿದಿದೆ; 2020–21ರಲ್ಲಿ (–)9.5ಶೇ. ಕ್ಕೆ ಇಳಿಯಲಿದೆ. ಅಂದರೆ, ಕಳೆದ ಐದು ವರ್ಷಗಳಲ್ಲಿ ಅರ್ಥವ್ಯವಸ್ಥೆ ಸತತ ಅವನತಿ ಕಾಣುತ್ತಿದೆ ಎಂಬುದು ಸ್ಪಷ್ಟ.

ಜನಗಳ ಮೇಲೆ ಇನ್ನಷ್ಟು ಸಂಕಟಗಳ ಹೇರಿಕೆ: ಈ ಆರ್ಥಿಕ ಅವನತಿ ನಿರುದ್ಯೋಗದ ಮೇಲೆ ಬಹಳ ತೀವ್ರವಾದ ಪರಿಣಾಮವನ್ನು ಬೀರಿದೆ. ಶ್ರಮ ಭಾಗವಹಿಸುವಿಕೆಯ ದರ ತೀವ್ರವಾಗಿ ಇಳಿದಿದೆ ಮತ್ತು ಸುಮಾರು 15 ಕೋಟಿ ಮಂದಿ ಜೀವನಾಧಾರಗಳನ್ನು ಕಳಕೊಂಡಿದ್ದಾರೆ.

ಹೆಚ್ಚುತ್ತಿರುವ ಹಸಿವು: ಜಾಗತಿಕ ಹಸಿವು ಸೂಚ್ಯಂಕ ಭಾರತವನ್ನು 107 ದೇಶಗಳ ಪೈಕಿ 94ನೇ ಸ್ಥಾನದಲ್ಲಿಟ್ಟಿದೆ. ಇದೀಗ ಬಿಜೆಪಿ ಸರಕಾರದ ಧೋರಣೆಗಳ ಶೋಚನೀಯ ನಿರ್ವಹಣೆ. ನಮ್ಮ ಎಲ್ಲ ನೆರೆ ದೇಶಗಳು– ಶ್ರೀಲಂಕ, ನೇಪಾಳ, ಬಾಂಗ್ಲಾದೇಶ, ಮ್ಯಾನ್ಮರ್ ಮತ್ತು ಪಾಕಿಸ್ತಾನ ಈ ಸೂಚ್ಯಂಕದಲ್ಲಿ ಭಾರತಕ್ಕಿಂತ ಉತ್ತಮ ಸ್ಥಿತಿಯಲ್ಲಿವೆ.

ನಮ್ಮ ಜನಗಳಲ್ಲಿ ಒಂದು ದೊಡ್ಡ ಸಂಖ್ಯೆಯನ್ನು ಹಸಿವು ಕಾಡುತ್ತಿದೆ ಎಂಬುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರೀಯ ಗೋದಾಮುಗಳಲ್ಲಿ ಹಲವು ಕೋಟಿ ಟನ್ ಆಹಾರಧಾನ್ಯಗಳು ಕೊಳೆಯುತ್ತ ಬಿದ್ದಿವೆ. ಉಚಿತ ಆಹಾರವನ್ನು ಒದಗಿಸಲು ಇದನ್ನು ಬಳಸಿಕೊಳ್ಳಬೇಕು.

ಇದಕ್ಕೆ ವ್ಯತಿರಿಕ್ತವಾಗಿ, ಭಾರತದ 50 ಅತಿ ಶ್ರೀಮಂತ ಮಂದಿಯ ಸಂಪತ್ತು 2020ರಲ್ಲಿ ಇದುವರೆಗೆ 14ಶೇ.ದಷ್ಟು ಹೆಚ್ಚಿರುವ ಹೊಲಸು ಸಂಗತಿಯನ್ನು ಕಾಣುತ್ತಿದ್ದೇವೆ.

ದುಡಿಯುವ ವರ್ಗ ಮತ್ತು ದುಡಿಯುವ ಜನಗಳ ಮೇಲೆ ಏಟುಗಳುಈಗಿರುವ 29 ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿ, ಅವುಗಳ ಜಾಗದಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು, ಸಂಸತ್ತಿನ ಮೊಟಕುಗೊಂಡ ಮಳೆಗಾಲದ ಅಧಿವೇಶನದಲ್ಲಿ ಬಲವಂತದಿಂದ ತರಲಾಗಿದೆ. ಕಾರ್ಮಿಕರ ಹಕ್ಕುಗಳು ಮತ್ತು ರಕ್ಷಣೆಗೆ ಸಂಬಂಧಪಟ್ಟ ಮತ್ತು ಮಾಲಕರ ಮೇಲೆ ಹತೋಟಿಯಿಡುವ ನಿಬಂಧನೆಗಳಿಗೆ ಸಂಬಂಧಪಟ್ಟ ಸುಮಾರಾಗಿ ಎಲ್ಲ ಪ್ರಯೋಜನಕಾರೀ ಅಂಶಗಳನ್ನು, ಒಂದೋ ದುರ್ಬಲಗೊಳಿಸಲಾಗಿದೆ, ಇಲ್ಲವೇ ತೆಗೆದೇ ಹಾಕಲಾಗಿದೆ. ಈ ಸಂಹಿತೆಗಳು ಕಾರ್ಮಿಕರನ್ನು ಗುಲಾಮರಾಗಿ ಪರಿವರ್ತಿಸಿವೆ.

ವಿನಾಶಕಾರೀ ಕೃಷಿ ಮಸೂದೆಗಳು

ಪ್ರಧಾನ ಮಂತ್ರಿ ಮೋದಿ ಸ್ವಾವಲಂಬನೆಯ ಹೆಸರಲ್ಲಿ ಅನುಸರಿಸುತ್ತಿರುವ ಆರ್ಥಿಕ ಸುಧಾರಣೆಗಳ ಇಡೀ ಕಂತೆ ನಮ್ಮ ಅರ್ಥವ್ಯವಸ್ಥೆಯನ್ನು ಖಾಸಗೀ ಲಾಭಕ್ಕೆ ಅಡಿಯಾಳಾಗಿ ಮಾಡುವಂತದ್ದು. ಕೇಂದ್ರ ಸರಕಾರ, ಅತ್ಯಂತ ಮೋಸದಿಂದ, ಭಾರತೀಯ ಸಂಸತ್ತಿನ ಹಕ್ಕುಗಳನ್ನು ನಾಚಿಕೆಯಿಲ್ಲದೆ ಮೊಟಕುಗೊಳಿಸಿ, ಕೃಷಿ ಮಸೂದೆಗಳನ್ನು ಶಾಸನಗಳಾಗಿ ಮಾಡಿದೆ. ಈ ಹೊಸ ಕಾಯ್ದೆಗಳು ಭಾರತೀಯ ಕೃಷಿಯನ್ನು, ನಮ್ಮ

ಪುಟ 14 ನೋಡಿ

ಸ್ವಂತ ಆಯ್ಕೆಯ ಒಂದು ಮದುವೆ ಕುರಿತಂತೆ ಅಲಹಾಬಾದ್ ನ್ಯಾಯಾಲಯದ ತೀರ್ಪು ಸರಿ ಕಾಣಿಸುತ್ತಿಲ್ಲ–ಎಐಡಿಡಬ್ಲ್ಯುಎ

ನ್ಯಾಯಾಲಯದಿಂದ, ಬಹುಶಃ ತಮ್ಮ ಕುಟುಂಬದವರಿಂದ ಅಥವ ಪೊಲೀಸಿನಿಂದ ರಕ್ಷಣೆ ಕೋರಿ ಬಂದ ಒಂದು ಯುವ ದಂಪತಿಯನ್ನು ಕಾಪಾಡಲು ನಿರಾಕರಿಸಿರುವ ಅಲಹಾಬಾದ್ ಹೈಕೋರ್ಟಿನ ತೀರ್ಪು ತಪ್ಪಾಗಿದೆ ಎಂದು ತನಗೆ ಬಲವಾಗಿ ಅನಿಸುವುದಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಹೇಳಿದೆ.

ಹಿಂದೂ ಪದ್ಧತಿಯಲ್ಲಿ ಮದುವೆಯಾದ ನಂತರ ಈ ದಂಪತಿಗಳು ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿದರು. ಹುಡುಗ ಒಬ್ಬ ಹಿಂದೂ, ಹಾಗೂ ಹುಡುಗಿ ಇಸ್ಲಾಮ್ ಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರ ಹೊಂದಿದವಳು. ಹುಡುಗಿ ಒಂದು ತಿಂಗಳ ಹಿಂದೆಯಷ್ಟೇ ಮತಾಂತರ ಹೊಂದಿದ್ದಾಳೆ, ಆಕೆಯ ಮತಾಂತರ ನೈಜವಲ್ಲ, ಕೇವಲ ಮದುವೆಗಾಗಿ, ಆದ್ದರಿಂದ ತಾನು ಈ ವಿಷಯದಲ್ಲಿ ಮಧ್ಯಪ್ರವೇಶಿಸ ಬಯಸುವುದಿಲ್ಲ ಎಂದು ನ್ಯಾಯಾಲಯದ ತೀರ್ಪು ಹೇಳಿದೆ. ಅಂದರೆ ನ್ಯಾಯಾಲಯ ಸ್ವಂತ ಇಚ್ಛೆಯಿಂದ ಆಯ್ದುಕೊಂಡ ಸಂಬಂಧಗಳಿಗೆ ವಿರುದ್ಧವಾಗಿದೆ, ಮತ್ತು ಮದುವೆಯಾದ ದಂಪತಿಗಳಿಗೆ ಮಾತ್ರ ರಕ್ಷಣೆಯ ಅಗತ್ಯವಿರುತ್ತದೆ ಎಂದು ನಂಬಿರುವಂತೆ ಕಾಣುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವರಿಗೆ ಹಿಂಸಾಚಾರ ಮತ್ತು ಅದನ್ನನುಸರಿಸಿ ಎಲ್ಲ ರೀತಿಗಳ ಕ್ರಿಮಿನಲ್ ಆಪಾದನೆಗಳಿಂದ ರಕ್ಷಣೆ ಒದಗಿಸುವ ಬದಲು, ಆ ವಿಷಯವನ್ನು ಎತ್ತಿಕೊಳ್ಳದೆ ಅವರ ಮದುವೆಯ ಸಿಂಧುತ್ವದ ವಿಷಯವನ್ನು ಎತ್ತಿಕೊಂಡಿದೆ. ಉತ್ತರಪ್ರದೇಶದಿಂದ ಬಂದ ಹಿಂದಿನ ತೀರ್ಪುಗಳು ಅಂತಹ ದಂಪತಿಗಳಿಗೆ ಕ್ರಿಮಿನಲ್‌ಗಳಂತೆ ಅಟ್ಟಾಡಿಸುವುದರಿಂದ ರಕ್ಷಣೆ ಒದಗಿಸಿವೆ ಮತ್ತು ತಮ್ಮ ಮದುವೆಯನ್ನು ಸಿವಿಲ್ ಕಾಯ್ದೆಗಳ ಅಡಿಯಲ್ಲಿ ನೋಂದಣಿ(ರಿಜಿಸ್ಟರ್) ಮಾಡಿಕೊಳ್ಳಿ ಎಂದು ಸಲಹೆ ಮಾಡಿವೆ. ಆದರೆ ಈ ನ್ಯಾಯಾಲಯ, ಈ ದಂಪತಿಗಳಿಗೆ ರಕ್ಷಣೆ ಕೊಡಲು ನಿರಾಕರಿಸಿದೆ ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ. ಮರ್ಯಾದೆಯ ಹೆಸರಲ್ಲಿ ಅಪರಾಧಗಳು, ಕೊಲೆಗಳು ವ್ಯಾಪಕವಾಗಿ ನಡೆಯುತ್ತಿವೆ ಎಂಬ ವಿಷಯ ಖಂಡಿತವಾಗಿಯೂ ನ್ಯಾಯಾಲಯಕ್ಕೆ ತಿಳಿದೇ ಇದೆ.

ಈ ತೀರ್ಪಿನಿಂದ ಪ್ರಯೋಜನ ಪಡೆದುಕೊಂಡಿರುವ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಮತ್ತೊಮ್ಮೆ 'ಲವ್ ಜಿಹಾದ್' ವಿರುದ್ಧ ಸಮರ ಸಾರಿದ್ದಾರೆ, ಯಾವುದೇ ಮುಸ್ಲಿಂ ಹುಡುಗ, ಹಿಂದೂ ಹುಡುಗಿಯನ್ನು ಮತಾಂತರಗೊಳಿಸಿ ಮದುವೆಯಾದರೆ ಸಾವನ್ನು ಎದುರಿಸಬೇಕಾದೀತು ಎಂದು ಬೆದರಿಸಿದ್ದಾರೆ. ಇಂತಹ ಮದುವೆಗಳ ವಿರುದ್ಧ ಒಂದು ಮಸೂದೆಯನ್ನು ತರುವುದಾಗಿಯೂ ಹೇಳಿದ್ದಾರೆ.

'ಲವ್ ಜಿಹಾದ್' ಎಂಬುದು ಒಂದು ಮಿಥ್ಯೆ, ಎನ್‌ಐಎ ತನಿಖೆಗಳಲ್ಲಾಗಲೀ, ಯಾವುದೇ ಪೋಲಿಸ್ ತನಿಖೆಗಳಲ್ಲಾಗಲೀ ಇದಕ್ಕೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ ಎಂಬುದನ್ನು ಅಧಿಕಾರಸ್ಥರೇ ಒಪ್ಪಿಕೊಂಡಿದ್ದಾರೆ. ಆದರೂ ಬಿಜೆಪಿ ಮುಖಂಡರುಗಳು ಮತ್ತು ಬಿಜೆಪಿ ಬಗ್ಗೆ ಸಹಾನುಭೂತಿ ಇರುವವರು ಹಲವಾರು ಸಂದರ್ಭಗಳಲ್ಲಿ ಇದನ್ನು ಮತ್ತೆ–ಮತ್ತೆ ಎತ್ತುತ್ತಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗ ಅಧ್ಯಕ್ಷರೂ ಕೂಡ ಅಂತರ–ಧರ್ಮೀಯ ಮದುವೆಯೊಂದನ್ನು ತೋರಿಸಿದ ಟಾಟಾ ಕಂಪನಿಯ ಜಾಹೀರಾತಿನ ವಿರುದ್ಧ ಮಾತಾಡಿದ್ದಾರೆ. ಇದರಿಂದಾಗಿ ಆ ಕಂಪನಿ ಆ ಜಾಹೀರಾತನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು ಎಂಬ ಸಂಗತಿಯತ್ತ ಗಮನ ಸೆಳೆದಿರುವ ಎಐಡಿಡಬ್ಲ್ಯುಎ, ಬಿಜೆಪಿ ಸ್ವಂತ ಆಯ್ಕೆಯ, ಅದರಲ್ಲೂ ಅಂತರ–ಜಾತಿ ಮತ್ತು ಅಂತರ–ಧರ್ಮೀಯ ಮದುವೆಗಳಿಗೆ ವಿರುದ್ಧವಾಗಿದೆ ಎಂದು ಅಭಿಪ್ರಾಯ ಪಟ್ಟಿದೆ.

ಇದು ಯುವ ದಂಪತಿಗಳಿಗೆ ಉಂಟು ಮಾಡಿರುವ, ಈಗಲೂ ಉಂಟುಮಾಡುತ್ತಿರುವ ವಿಪರೀತ ನೋವು–ಸಂಕಟಗಳ ಪ್ರಶ್ನೆಯನ್ನು ಎತ್ತಿಕೊಳ್ಳಬೇಕಾಗುತ್ತದೆ. ವಿಶೇಷ ವಿವಾಹ ಕಾಯ್ದೆಯನ್ನು ಯುವ ಜೋಡಿಗಳು ಯಾವುದೇ ವಿಳಂಬ ಮತ್ತು ಅಡೆ–ತಡೆಗಳಿಲ್ಲದೆ ವಿವಾಹವಾಗಲು ಅನುವು ಮಾಡಿಕೊಡುವಂತೆ ತಿದ್ದುಪಡಿ ಮಾಡಬೇಕಾದ ಸಮಯವೂ ಈಗ ಬಂದಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ಸ್ವಂತ ಆಯ್ಕೆಯ ಸಂಬಂಧಗಳು ಮತ್ತು ಮದುವೆಗಳಿಗೆ ಸಿಂಧುತ್ವ ಕೊಡಲು ಮತ್ತು ಇಂತಹ ಸಂಬಂಧಗಳನ್ನು ನಿಲ್ಲಿಸಲು ಕ್ರೂರ ಮತ್ತು ಅಮಾನವೀಯ ವಿಧಾನಗಳನ್ನು ಬಳಸುವವರನ್ನು ಶಿಕ್ಷಿಸಲು ಒಂದು ಕಾನೂನನ್ನು ತರುವ ಅಗತ್ಯವಿದೆ ಎಂದೂ ಎಐಡಿಡಬ್ಲ್ಯುಎ ಹೇಳಿದೆ.

ಸಂಪಾದಕೀಯ

ಮದುವೆಗಾಗಿ ಮತಾಂತರ ಅಪರಾಧವೆ?

ಅಂತರ ಧರ್ಮೀಯ ಮದುವೆಗಳನ್ನು ತಡೆಗಟ್ಟುವ ದುರುದ್ದೇಶದಿಂದ ಉತ್ತರ ಪ್ರದೇಶ, ಹರಿಯಾಣ ಮತ್ತು ಮಧ್ಯಪ್ರದೇಶದ ಬಿಜೆಪಿ ಸರ್ಕಾರಗಳು ಕಠಿಣ ಕಾನೂನು ತರಲು ಮುಂದಾಗಿದೆ. 'ಲವ್ ಜಿಹಾದ್' ಎಂದು ಕರೆಯಲಾಗುತ್ತಿರುವ ಇಂತಹ ಮದುವೆಗಳನ್ನು ಕರ್ನಾಟಕ ರಾಜ್ಯದಲ್ಲಿಯೂ ತಡೆಗಟ್ಟಬೇಕಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವರೂ, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸಿ.ಟಿ. ರವಿ ಇತ್ತೀಚೆಗೆ ಹೇಳಿದ್ದಾರೆ. ಈ ನಡುವೆ ಮಂಗಳೂರಿನಲ್ಲಿ ನಡೆದ ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ಸಭೆಯಲ್ಲೂ, ಕೋರ್ ಕಮೀಟಿ ಸಭೆಯಲ್ಲೂ ಇದೇ ನಿರ್ಣಯವನ್ನು ಕೈಗೊಳ್ಳಲಾಗಿದೆ.

ದೇಶದ ಯಾವುದೇ ಕಾನೂನಿನಲ್ಲಿ 'ಲವ್ ಜಿಹಾದ್' ಎಂಬುದರ ವ್ಯಾಖ್ಯಾನವಿಲ್ಲ. ದೇಶದ ಯಾವುದೇ ತನಿಖಾ ಸಂಸ್ಥೆಯು 'ಲವ್ ಜಿಹಾದ್' ಎಂಬ ಪ್ರಕರಣವನ್ನು ದಾಖಲಿಸಿ ತನಿಖೆ ನಡೆಸಿಲ್ಲ. ಕೇವಲ ಸಂಘ ಪರಿವಾರದ ಶಬ್ದಕೋಶದಲ್ಲಿ ಮಾತ್ರ ಅದು ಕಾಣಸಿಗಬಹುದು. ಅವರೇ ಅದರ ಜನಕರು. ಕೇವಲ ದಾರ್ಮಿಕ ಅಲ್ಪಸಂಖ್ಯಾತರಾದ ಮುಸಲ್ಮಾನರ ಮೇಲೆ ಸುಳ್ಳು ಆರೋಪ ಹೊರಿಸಿ ಅವರಿಗೆ ಕಿರುಕುಳ ಕೊಡುವ ಉದ್ದೇಶದಿಂದ ಈ ಚರ್ಚೆಯನ್ನು ಮುನ್ನೆಲೆಗೆ ತರಲಾಗಿದೆ.

ಮೊದಲನೆಯದಾಗಿ ಅಂತರ ಧರ್ಮೀಯ ವಿವಾಹ ಸಂವಿಧಾನ ವಿರೋಧಿಯಲ್ಲ ನಮ್ಮ ಸಂವಿಧಾನ ಅಂತರ ಧರ್ಮೀಯ ವಿವಾಹವನ್ನು ಪ್ರತಿಬಂಧಿಸುವುದಿಲ್ಲ. ವಿಭಿನ್ನ ಧರ್ಮಗಳಿಗೆ ಸೇರಿದ ಅಥವ ಯಾವುದೇ ದರ್ಮಕ್ಕೆ ಸೇರದ ಯುವಕ ಯುವತಿಯರು, ವಿಭಿನ್ನ ಜಾತಿಗಳಿಗೆ ಸೇರಿದ ಯುವಕ ಯುವತಿಯರು ಅಥವ ಯಾವುದೇ ಜಾತಿ ಪದ್ಧತಿಯನ್ನು ಒಪ್ಪದ ಯುವಕ ಯುವತಿಯರು ಪರಸ್ಪರ ಒಪ್ಪಿಕೊಂಡು ಸ್ವಸಂತೋಷದಿಂದ ವಿವಾಹವಾಗಬಹುದು.

ಎರಡನೆಯದಾಗಿ ಮತಾಂತರಕ್ಕಾಗಿ ಮದುವೆಯಾಗುವುದಾಗಲಿ, ಮದುವೆಯಾಗಿ ಮತಾಂತರ ಆಗುವುದಾಗಲಿ ಸಂವಿಧಾನ ವಿರೋಧಿಯಲ್ಲ. ನಮ್ಮ ಸಂವಿಧಾನದ 25ನೇ ವಿಧಿಯು ಯಾವುದೇ ಧರ್ಮವನ್ನು ಹೊಂದುವ, ಆಚರಿಸುವ ಮತ್ತು ಆ ಧರ್ಮದ ಬಗ್ಗೆ ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ನೀಡಿದೆ. ವಿವಾಹವೇ ಆಗಲಿ, ಮತಾಂತರವೇ ಆಗಲಿ ಬಲವಂತದ ಕ್ರಮವಾಗಬಾರದು. ಬಲವಂತದಿಂದ ಮಾಡುವ ಯಾವುದೇ ಕ್ರಿಯೆ ಅಪರಾಧವಾಗುತ್ತದೆ. ಈಗ ಅಸ್ಥಿತ್ವದಲ್ಲಿರುವ ಕಾನೂನುಗಳ ಪ್ರಕಾರವೇ ಅವು ಶಿಕ್ಷಾರ್ಹ ಅಪರಾಧಗಳಾಗುತ್ತದೆ.

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡರು ಈ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಅಂತರ ಧರ್ಮೀಯ ವಿವಾಹಗಳನ್ನು ತಡೆಗಟ್ಟಲು ಕಾನೂನು ತರುವ ವಿಚಾರ ಸಂಪೂರ್ಣವಾಗಿ ಸಂವಿಧಾನ ವಿರೋಧಿಯಾಗಿದೆ. ಅದು ಸಂವಿಧಾನದ ವಿಧಿ 14 ಮತ್ತು 15 ರ ಉಲ್ಲಂಘನೆಯಾಗಿದೆ. ನಮ್ಮ ಸಂವಿಧಾನವು ಯಾರಿಗೂ ಜಾತಿ, ಧರ್ಮ, ಬಣ್ಣದ ಆಧಾರದಲ್ಲಿ ತಾರತಮ್ಯ ಮಾಡುವುದನ್ನು ವಿರೋಧಿಸುತ್ತದೆ." ನ್ಯಾಯಮೂರ್ತಿ ಗೋಪಾಲಗೌಡರು ಪ್ರತಿಪಾದಿಸುವಂತೆ, ಪ್ರಾಪ್ತ ವಯಸ್ಸಿಗೆ ಬಂದ ಯಾವುದೇ ಯುವಕ ಅಥವ ಯುವತಿ ತನ್ನ ಬಾಳ ಸಂಗಾತಿಯನ್ನು ಆಯ್ಕೆ ಮಾಡಲು ಸ್ವತಂತ್ರರು.

ಅಪ್ರಾಪ್ತ ವಯಸ್ಸಿನ ಯುವಕ ಯುವತಿಯರನ್ನು ಬಲವಂತದಿಂದ ಬಾಲ್ಯವಿವಾಹಕ್ಕೆ ಒಳಪಡಿಸುತ್ತಿರುತ್ತಾರೆ. ಮಕ್ಕಳ ತಾಯಿ ತಂದೆಯರೇ ಬಲವಂತದ ವಿವಾಹ ಮಾಡಿಸುತ್ತಾರೆ. ಇದು ಸರಿಯಾ? ಒಂದೇ ಧರ್ಮದವರು ಎಂಬ ನೆಪದಲ್ಲಿ ಇಂತಹ ದೌರ್ಜನ್ಯ ನಡೆಯುತ್ತಲೇ ಇದೆ. ವಿವಾಹಗಳಲ್ಲಿ ಮುಖ್ಯವಾದದ್ದು ವಧು ವರರ ನಡುವೆ ಸ್ವತಂತ್ರ ಆಯೆ. ನಿಗದಿತ ಪ್ರಾಪ್ತ ವಯಸ್ಸಿನಲ್ಲಿ ಮಾತ್ರ ಈ ಆಯ್ಕೆ ಸಾಧ್ಯ. ವಿವಾಹಕ್ಕೆ ಪರಸ್ಪರ ಪ್ರೀತಿ, ವಿಶ್ವಾಸ ಬಹಳ ಮುಖ್ಯ. ಅವರಿಗೆ ಒಂದೇ ಜಾತಿ, ಒಂದೇ ಧರ್ಮ, ಒಂದೇ ಬಣ್ಣ, ಒಂದೇ ಭಾಷೆ ಮುಖ್ಯವಲ್ಲ. ಈ ಪ್ರೀತಿ, ಈ ಪ್ರೇಮ ಹಟ್ಟಿಯಲ್ಲಿ ಹುಟ್ಟಿ ಮೊಹಲ್ಲಾಕ್ಕೆ ವಿಸ್ತರಿಸಬಹುದು. ಯಾರಿಂದಲೂ ಅದನ್ನು ತಡೆಯಲು ಸಾಧ್ಯವಿಲ್ಲ, ತಡೆಯಬಾರದು ಅಂತರ ಜಾತಿ, ಅಂತರ ಧರ್ಮೀಯ ವಿವಾಹಗಳನ್ನು ಸಮಾಜ ಬೆಂಬಲಿಸಬೇಕು. ಪ್ರೋತ್ಸಾಹಿಸಬೇಕು. ಅವುಗಳು ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು. ಅಂತರ್ ಜಾತಿ ಹಾಗೂ ಅಂತರ ಧರ್ಮೀಯ ಮದುವೆಯಾಗಲು ಬಯಸುವರನ್ನು ಮರ್ಯಾದಾ ಹತ್ಯೆಯಂತಹ ಬರ್ಬರ ಕೃತ್ಯಗಳಿಗೆ ಒಳ ಪಡಿಸಬಾರದು. ಇಂತಹ ಬೆದರಿಕೆಗಳಿಂದ ಭೀತಿಗೊಳಗಾದ ಯುವ ಜೋಡಿಗಳು ಅನೇಕ ಸಲ ಅನಿವಾರ್ಯವಾಗಿ ಮನೆ ಬಿಟ್ಟು ಓಡಿ ಹೋಗುತ್ತಾರೆ. ಪರಸ್ಥಳಗಳಲ್ಲಿ ಯಾತನಾಮಯ ಪರಿಸ್ಥಿತಿಗಳಲ್ಲಿ ಬದುಕುತಿರುತ್ತಾರೆ. ಇಂತಹ ಅಮಾಯಕರಿಗೆ ರಕ್ಷಣೆ ಒದಗಿಸುವ ಕಾನೂನು ತಿದ್ದುಪಡಿಗಳನ್ನು ತರಬೇಕೆ ಹೊರತು ಅವರನ್ನು ಸಮಾಜದ ಎದುರು ಅಪರಾಧಿಗಳಂತೆ ಬಿಂಬಿಸುವುದನ್ನು ತಡೆಯಬೇಕು. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಕಾನೂನು ಮಾಡುವ ಬಿಜೆಪಿಗರ ಪ್ರಯತ್ನ ನಿಷ್ಪ್ರಯೋಜಕ. ಮದುವೆಗಾಗಿ ಮತಾಂತರ ತಪ್ಪಲ್ಲ.

ಗೋದಾಮುಗಳಲ್ಲಿ ಕೊಳೆಯುತ್ತಿದೆ ಟನ್‌ಗಟ್ಟಲೇ ಆಹಾರ ಧಾನ್ಯ

ಇಂದಿನ ಪ್ರಮುಖ ಕನ್ನಡ ದಿನಪತ್ರಿಕೆಯ ಮುಖಪುಟದ ಮುಖ್ಯ ಸುದ್ದಿಯ ಶೀರ್ಷಿಕೆ. ಜೊತೆಯೇ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಜೂನ್ ನಿಂದ ಅಕ್ಟೋಬರ್ ವರೆಗೆ ಮಧ್ಯಾಹ್ನ ಉಪಹಾರ ಯೋಜನೆಯ ಅನುಷ್ಠಾನಕ್ಕೆ ಅನುದಾನ ಬಿಡುಗಡೆಯಾಗಿದ್ದು ಆಹಾರ ಧಾನ್ಯ ವಿತರಿಸಲು ಕ್ರಮಕೈಗೊಳ್ಳಲಾಗುವುದು ಎಂದ ಹೇಳಿಕೆಯೂ ಅವರ ಭಾವಚಿತ್ರದೊಂದಿಗೆ ಪ್ರಕಟಗೊಂಡಿದೆ.

43,258 ಟನ್ ಅಕ್ಕಿ, 1594 ಕಿಲೋ ಹಾಲಿನಪುಡಿ, 12046 ಟನ್ ತೊಗರಿ ಬೇಳೆ ಮತ್ತು ಗೋಧಿ, ಖಾದ್ಯ ತೈಲ್ಯಗಳೂ ಮಳೆಯ ತೇವ ಹೀರಿ ಬಳಕೆಗೆ ಯೋಗ್ಯವಾಗಿಲ್ಲದಿರಬಹುದೆಂಬ ಅನುಮಾನವನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳೇ ವ್ಯಕ್ತಪಡಿಸಿದ್ದಾರೆ. ಈ ಖಂಡನೀಯ ಸಂಗತಿಗೆ ಕರುಳಿಲ್ಲದ ಸರಕಾರ ಮತ್ತು ಮೆದುಳಿಲ್ಲದ ಇಲಾಖಾ ಅಧಿಕಾರಿಗಳು ನೇರ ಹೊಣೆಗಾರರೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ಕೊವಿಡ್ ಸಾಂಕ್ರಾಮಿಕದ ಬಾಧೆ, ಲಾಕ್ ಡೌನ್ ತಂದಿತ್ತ ಸಂಕಷ್ಟಗಳಲ್ಲಿ ರಾಜ್ಯದ ಜನ ತತ್ತರಿಸುತ್ತಿರುವಾಗ ಅವರ ಆರೋಗ್ಯ ಆಹಾರದ ವ್ಯವಸ್ಥೆಯನ್ನು ನೋಡಿಕೊಳ್ಳುವುದು ಯಾವುದೆ ಜವಾಬ್ದಾರಿಯುತ ಸರಕಾರದ ಹೊಣೆಯಾಗಿದೆ. ಆದರೆ ಸರಕಾರದ ತೀವ್ರ ವೈಫಲ್ಯ ಈ ಎರಡೂ ಕ್ಷೇತ್ರಗಳಲ್ಲಿ ಕಣ್ಣಿಗೆ ರಾಚುತ್ತಿದ್ದು ಕೊವಿಡ್ ಲಾಕ್ ಡೌನ್ ಸಂದರ್ಭದಲ್ಲಿ ದುಡಿದು ತಿನ್ನುವ ಜನ ಎರಡು ಹೊತ್ತಿನ ಕೂಳಿಗೆ ಪರದಾಡಿದರು. ಶಾಲೆ ಅಂಗನವಾಡಿಗಳು ಮುಚ್ಚಿರುವಾಗ ಪಕ್ಕದ ಕೇರಳ ರಾಜ್ಯ ಸರಕಾರ ಮನೆ ಮನೆಗೆ ಧಾನ್ಯ ಪೂರೈಸಿ ಪೋಷಕಾಂಶಗಳ ಕೊರತೆಯುಂಟಾಗದಂತೆ ಎಚ್ಚರಿಕೆ ವಹಿಸಿದರೆ ನಮ್ಮ ರಾಜ್ಯದಲ್ಲಿ ಕಾರ್ಮಿಕರಿಗೆಂದು ಇಲಾಖೆ ಪೂರೈಸಿದ ದಿನಸಿ ಸಾಮಗ್ರಿಗಳನ್ನು ಸಚಿವರುಗಳು ರಾಜಾರೋಷವಾಗಿ ಸಾಗಿಸಿದ್ದು ಜಗಜ್ಜಾಹಿರವಾಗಿದೆ.

ಮಧ್ಯಾಹ್ನದ ಬಿಸಿಯೂಟದ ಯೋಜನೆ ಸ್ಥಗಿತಗೊಳಿಸಲು ರಾಜ್ಯದ ಆರ್ಥಿಕ ಇಲಾಖೆಯ ಸೂಚನೆ ನೀಡಿದೆ ಎಂದು ಪತ್ರಿಕೆ ವರದಿ ಮಾಡಿದ್ದು ಅದಕ್ಕೆ ಕಾರಣ ಪಿ.ಡಿ.ಎಸ್ ಮತ್ತು ಪಿ.ಎಂ.ಜಿ.ಕೆ.ವೈ ಅಡಿ ಸಾಕಷ್ಟು ಧಾನ್ಯ ವಿತರಣೆಯಾಗುತ್ತಿದೆ ಎಂಬುದಂತೆ! ಗೋದಾಮುಗಳಲ್ಲಿ ಧಾನ್ಯಗಳಿಗೆ ಹುಳು ಹಿಡಿಸುವ ಈ ತೀರ್ಮಾನದ ಬದಲು ಹಸಿದ ಕುಟುಂಬಗಳಿಗೆ ಅಗತ್ಯ ಧಾನ್ಯ ವಿತರಿಸಿದ್ದರೆ ಇಲಾಖೆಗೇನು ತೊಂದರೆಯಾಗಿತ್ತು ಎಂದು ಸಂಘಟನೆ ಪ್ರಶ್ನಿಸುತ್ತದೆ.

ಮಾತೃ ಮತ್ತು ಶಿಶು ಮರಣ ಪ್ರಮಾಣಕ್ಕೂ ಅಪೌಷ್ಟಿಕತೆಗೂ ನೇರ ಸಂಬಂಧವಿದೆ ಎಂದು ಹಲವು ಕಾಲದಿಂದ ತಜ್ಞರು ಹೇಳುತ್ತಲೇ ಬಂದಿದ್ದಾರೆ, ಮತ್ತು ಅದು ಕಣ್ಣಿಗೆ ಕಾಣುವ ಸತ್ಯ ಕೂಡಾ. ರಾಜ್ಯದಲ್ಲಿ ಮಾತೃಮರಣ ಒಂದು ಲಕ್ಷ ಹೆರಿಗೆಗೆ 133 ಮತ್ತು ಶಿಶು ಮರಣ 1000 ಕ್ಕೆ 19 ಎಂದು ವರದಿ ಹೇಳುತ್ತಿದೆ. ಆರ್ಥಿಕ ಇಲಾಖೆಗಾಗಲಿ ಸರಕಾರಕ್ಕಾಗಲಿ ಈ ಬಗ್ಗೆ ಮಾಹಿತಿಗಳಿವೆಯೇ, ಇದ್ದೂ ಈ ತೆರನ ನಿರ್ಲಕ್ಷ ಧೋರಣೆಯನ್ನು ತಾಳುವುದೆಂದರೆ ಮನುಷ್ಯತ್ವದಿಂದ ದೂರ ಇರುವುದು ಎಂಬುದಕ್ಕೆ ಬೇರೇನೂ ಸಾಕ್ಷಿಗಳೇ ಬೇಡ.

* ಉಪಯೋಗಕ್ಕೆ ಬಳಸಬಹುದಾದ ಧಾನ್ಯಗಳನ್ನು ಅಗತ್ಯವಿರುವವರಿಗೆ ಹೆಚ್ಚುವರಿಯಾಗಿ ನೀಡಬೇಕು.
* ತಕ್ಷಣವೇ ಕೇರಳದ ಮಾದರಿಯಲ್ಲಿ ಮಧ್ಯಾಹ್ನದ ಬಿಸಿಯೂಟದ ಎಲ್ಲ ಫಲಾನುಭವಿಗಳಿಗೂ ತಾರತಮ್ಯವಿಲ್ಲದೇ ಹಂಚಬೇಕು,
* ಘೋಷಣೆಗೆ ಮತ್ತು ಪ್ರಚಾರಕ್ಕೆ ಕೆಲವೆಡೆ ಹಂಚಿ ಕೈಬಿಟ್ಟ ಹಿಂದಿನ ಅನುಭವ ಮರುಕಳಿಸದಂತೆ ಎಚ್ಚರ ವಹಿಸಬೇಕು.
* ಮಾನ್ಯ ಶಿಕ್ಷಣ ಸಚಿವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಘಟನೆ ಆಗ್ರಹಪೂರ್ವಕವಾಗಿ ಒತ್ತಾಯಿಸಿದೆ. ●

ವಿದ್ಯುತ್ ಹಾಗೂ ಸಾರಿಗೆ ದರಗಳ ಏರಿಕೆ ಮತ್ತು ರೈತ ವಿರೋಧಿ ಭೂಸುಧಾರಣಾ ಎರಡನೇ ತಿದ್ದುಪಡಿ ಸುಗ್ರೀವಾಜ್ಞೆಗಳಿಗೆ – ಸಿಪಿಐಎಂ ಖಂಡನೆ

ವಿಧಾನ ಪರಿಷತ್ ಚುನಾವಣೆಗಳು ಹಾಗೂ ವಿಧಾನ ಸಭಾ ಉಪ ಚುನಾವಣೆಗಳು ಮುಕ್ತಾಯವಾಗುತ್ತಿದ್ದಂತೆ, ಕರ್ನಾಟಕ ಸರಕಾರ ತನ್ನ ಕಡು ಜನ ವಿರೋಧಿ ನೀತಿಯನ್ನು ಮತ್ತೊಮ್ಮೆ ಈ ಮೂಲಕ ಬಯಲುಗೊಳಿಸಿದೆ.

ಜನತೆ ಕೋವಿಡ್ 19 ರ ಸಂಕಷ್ಟದಲ್ಲಿರುವಾಗ ಮತ್ತು ಉದ್ಯೋಗದ ಗಂಭೀರ ಸಮಸ್ಯೆಗಳನ್ನೆದುರಿಸುತ್ತಿರುವಾಗ, ಎರಡು ಚುನಾವಣೆಗಳ ಕಡೆ ಗಮನ ಹರಿಸಿರುವಾಗ, ಅವರಿಗೆ ನೆರವಾಗುವ ಬದಲು ಈ ದಿನಗಳಲ್ಲಿಯೇ ಕೆಎಸ್‌ಆರ್‌ಟಿಸಿ ಬಸ್ ದರಗಳನ್ನು ಶೇ 10 ಕ್ಕೂ ಅಧಿಕವಾಗಿ ಒಳಗಿಂದೊಳಗೆ ಏರಿಸಿದೆ. ಬಿಎಂಟಿಸಿ ಖಾಸಗೀಕರಣಕ್ಕೆ ಕುತಂತ್ರ ನಡೆಸಿದೆ.

ಅದೇ ರೀತಿ, ರೈತರ ತೀವ್ರ ವಿರೋಧದ ನಡುವೆಯೂ, ಭೂ ಸುಧಾರಣೆ ಎರಡನೇ ತಿದ್ದುಪಡಿ ಸುಗ್ರೀವಾಜ್ಞೆ – 2020 ನ್ನು ಪ್ರಕಟಿಸಿದೆ. ನೆನ್ನೆ ದಿನ ನವೆಂಬರ್ ನಿಂದಲೇ ಜಾರಿಗೆ ಬರುವಂತೆ ವಿದ್ಯುತ್ ದರಗಳನ್ನು ಪ್ರತಿ ಯುನಿಟ್ಗೆ 40 ಪೈಸೆಯಂತೆ ಏರಿಸಲು ಕ್ರಮ ವಹಿಸಿದೆ.

ಇದೆಲ್ಲವೂ ಸಂಕಷ್ಟದಲ್ಲಿರುವ ಜನತೆಗೆ ಗಾಯದ ಮೇಲೆ ಮತ್ತೆ ಮತ್ತೆ ಬರೆ ಎಳೆದಂತಹ ಪರಿಣಾಮ ಉಂಟು ಮಾಡಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಸರಕಾರದ ಜನತೆಯ ಮೇಲಿನ ಕ್ರೂರ ಧಾಳಿ ಹಾಗೂ ಈ ಜನ ವಿರೋಧಿ ಕ್ರಮಗಳನ್ನು ಬಲವಾಗಿ ಖಂಡಿಸುತ್ತದೆ ಮತ್ತು ಕೂಡಲೇ ಅವುಗಳನ್ನು ವಾಪಾಸು ಪಡೆಯುವಂತೆ ಒತ್ತಾಯಿಸುತ್ತದೆ.

ವಿದ್ಯುತ್ ದರಗಳ ಏರಿಕೆಯ ಜೊತೆ ವಿದ್ಯುತ್ ಕಂಪನಿಗಳು ತಿಂಗಳಿಗೆ ಸರಿಯಾಗಿ ಬಿಲ್ ನೀಡದೇ ದುರುದ್ದೇಶದಿಂದಲೇ ಕೆಲ ದಿನಗಳ ಕಾಲ ತಡವಾಗಿ ಬಿಲ್ ಗಳನ್ನು ನೀಡುವ ಮೂಲಕ ಸ್ಲಾಬ್ ದರ ಹೆಚ್ಚಳಗೊಳ್ಳುವಂತೆ ಮಾಡಿ ಹೆಚ್ಚುವರಿಯಾಗಿ ವಸೂಲಿ ಮಾಡಲಾಗುತ್ತಿರುವುದು ಬೆಳಕಿಗೆ ಬಂದಿದೆ. ಅದೇ ರೀತಿ, ಕಡಿಮೆ ಬೆಲೆಯ ವಿದ್ಯುತ್ ಉತ್ಪಾದಿಸುವ ಕೆಪಿಸಿಎಲ್ ಸಾರ್ವಜನಿಕ ಸಂಸ್ಥೆಯ ಉತ್ಪಾದನೆಯನ್ನು ಆಗಾಗ್ಗೆ ನಿಲ್ಲಿಸಿ, ಭ್ರಷ್ಠಾಚಾರದ ಮೂಲಕ ದುಬಾರಿ ಬೆಲೆಯ ಖಾಸಗೀ ಕಂಪನಿಗಳ ವಿದ್ಯುತ್ ಖರೀದಿಸಿ ಗ್ರಾಹಕರ ಮೇಲೆ ಹೊರೆಯನ್ನು ಹೇರಲಾಗುತ್ತಿರುವುದು ಅಕ್ಷಮ್ಯವಾಗಿದೆ. ವಿದ್ಯುತ್ ಸರಬರಾಜನಲ್ಲಿರುವ ದೋಷಗಳನ್ನು ಸರಿ ಪಡಿಸ ಬೇಕಾಗಿದೆ. ಕೆಲವು ದೊಡ್ಡ ಕಂಪನಿಗಳ ವಿದ್ಯುತ್ ಕಳ್ಳತನವನ್ನು ತಡೆಯ ಬೇಕಾಗಿದೆ.

ಈ ಕುರಿತು ಅಗತ್ಯ ಕ್ರಮವಹಿಸಿ ಗ್ರಾಹಕರ ಲೂಟಿಯನ್ನು ತಡೆಯಲು ಸಿಪಿಐಎಂ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸಿದೆ. ●

ವರದಿ: ವಾ.ಉ.

ಮೂಡುಬಿದಿರೆಗೆ ತಾಲೂಕು ಆಸ್ಪತ್ರೆಗಾಗಿ ಆಗ್ರಹಿಸಿ ಧರಣಿ

ತಾಲೂಕಾಗಿರುವ ಮೂಡಬಿದರೆಯಲ್ಲಿ ಸರಕಾರಿ ಆಸ್ಪತ್ರೆಗಳ ಬಲವರ್ಧನೆ ಹಾಗೂ ಖಾಸಗಿ ಆಸ್ಪತ್ರೆಗಳ ನಿಯಂತ್ರಣಕ್ಕಾಗಿ ತಾಲೂಕು ಆಸ್ಪತ್ರೆ ಶೀಘ್ರ ಮಂಜೂರು ಆಗಬೇಕೆಂದು ಒತ್ತಾಯಿಸಿ ಮೂಡಬಿದರೆ ವಿಧಾನಸಭಾ ಕ್ಷೇತ್ರ ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯು ಸೋಮವಾರ ತಹಶೀಲ್ದಾರ್ ಕಚೇರಿ ಮತ್ತು ಶಾಸಕರ ಕಚೇರಿ ಸೇವಕದ ಎದುರು ನವಂಬರ್ 2 ರಂದು ಸಾಮೂಹಿಕ ಧರಣಿ ನಡೆಯಿತು.

ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯ ಆಶ್ರಯದಲ್ಲಿ ಈ ಧರಣಿ ನಡೆದಿದ್ದು ದ.ಕ.ಜಿಲ್ಲಾ ಮಟ್ಟದ ಸಮಿತಿಯು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಶಾಸಕರ ಕಚೇರಿ ಎದುರು ಧರಣಿ ನಡೆಸುತ್ತಿದೆ. ಧರಣಿಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಹೋರಾಟ ಸಮಿತಿಯ ಪ್ರಮುಖರಾದ ಯಾದವ ಶೆಟ್ಟಿ, ಸುಭಾಶ್ಚಂದ್ರ ಪಡಿವಾಳ್, ರಮಣಿ, ಆಲ್ವಿನ್ ಮಿನೇಜಸ್ ಮಾತನಾಡಿದರು. ಸುಂದರ ಶೆಟ್ಟಿ, ಲಿಯೋ ನಜರತ್, ರಾಧಾ, ಗಿರಿಜಾ, ಕೃಷ್ಣಪ್ಪ ಕೊಣಾಜೆ ಮತ್ತಿತರರು ಉಪಸ್ಥಿತರಿದ್ದರು.



ಎಂಡೋಪೀಡಿತರಿಗೆ ಪುನರ್ವಸತಿ ಒದಗಿಸಲು ಆಗ್ರಹಿಸಿ ಉಡುಪಿಯಲ್ಲಿ ಧರಣಿ:

ಜಿಲ್ಲಾ ಎಂಡೋಸಲ್ಫಾನ್ ಸಮಿತಿಯ ನಿರ್ಣಯದಂತೆ 2017 ರಲ್ಲಿ ಕುಂದಾಪುರ ತಾಲೂಕಿನ ನಾಡಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಐದು ಎಕರೆ ಜಾಗದಲ್ಲಿ ಎಂಡೋ ಪೀಡಿತರ ಪುನರ್ವಸತಿ ಕೇಂದ್ರ ನಿರ್ಮಿಸಲು ಸರಕಾರ ತಕ್ಷಣ ಅನುದಾನ ಮಂಜೂರು ಮಾಡಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಗೌರವಾಧ್ಯಕ್ಷ ವೆಂಕಟೇಶ್ ಕೋಣಿ ಒತ್ತಾಯಿಸಿದ್ದಾರೆ.

ಎಂಡೋಸಲ್ಫಾನ್ ಪೀಡಿತರ ಮತ್ತು ಇತರ ವಿಕಲಚೇತನರ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಬುಧವಾರ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಳ್ಳಲಾದ ಧರಣಿಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಎಂಡೋಸಲ್ಫಾನ್ ಪೀಡಿತರಿಗೆ ನೀಡುವ ಮಾಸಾಶನವನ್ನು ಕ್ರಮವಾಗಿ 1500 ರೂ.ನಿಂದ 3000 ರೂ.ಗೆ, 3000ದಿಂದ 6000 ರೂ.ಗೆ ಹೆಚ್ಚಿಸಬೇಕು. ತೀವ್ರತರದ ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥ ವಿಕಲಚೇತನರನ್ನು ನೋಡಿಕೊಳ್ಳುವ ಪಾಲಕರಿಗೆ ಮಾಸಿಕ ಕನಿಷ್ಠ 3000 ರೂ.ನೀಡಬೇಕು ಮತ್ತು ಈ ಹಿಂದಿನಂತೆ ವಿಮಾ ಸೌಲಭ್ಯ ಮುಂದುವರಿಸಬೇಕು. ಶಾಸಕರ ಅನುದಾನದಲ್ಲಿ ಒದಗಿಸುವ ಸೌಲಭ್ಯವನ್ನು ಎಲ್ಲ 21 ರೀತಿಯ ವಿಕಲಚೇತನರಿಗೂ ಒದಗಿಸಬೇಕು. ಜಿಲ್ಲಾಧಿಕಾರಿಗಳ ಜಿಲ್ಲಾ ಮಟ್ಟದ ಸಮಿತಿಗೆ ವಿಕಲಚೇತನರ ಪಾಲಕರನ್ನು ಸೇರಿಸಿಕೊಳ್ಳಬೇಕು ಮತ್ತು ಸಮಿತಿಯ ಸದಸ್ಯರನ್ನು ಅವಧಿಯ ನಂತರ ಕಾಲಕಾಲಕ್ಕೆ ಬದಲಾವಣೆ ಮಾಡಬೇಕು. ನಿವೇಶನ ರಹಿತ ಅಂಗವಿಕಲರಿಗೆ ನಿವೇಶನ ನೀಡುವ ಯೋಜನೆ ರೂಪಿಸಬೇಕು ಎಂದು ಅವರು ಒತ್ತಾಯಿಸಿದರು.

ಈ ಕುರಿತ ಮನವಿಯನ್ನು ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಒಗೆ ಸಲ್ಲಿಸಲಾಯಿತು. ಧರಣಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಕೃಷ್ಣ ಪೂಜಾರಿ, ಜೊತೆ ಕಾರ್ಯದರ್ಶಿ ನಾರಾಯಣ ಶೇರಿಗಾರ, ಕೋಶಾಧಿಕಾರಿ ಬಾಬು ದೇವಾಡಿಗ ಪಾಲಕರ ಪ್ರತಿನಿಧಿ ಇಂದಿರಾ ಹೆಗ್ಡೆ, ಗಣಪತಿ ಪೂಜಾರಿ, ಅನಿತಾ, ರಾಧಾಕೃಷ್ಣ, ಜಗದೀಶ್ ಭಟ್, ಕೃಷ್ಣ ಬ್ರಹ್ಮಾವರ ಮತ್ತಿತರರ ಉಪಸ್ಥಿತರಿದ್ದರು.

ವಾಹನ ಸಂಚಾರಕ್ಕೆ ಅಡಚಣೆಯಾದ ಗಿಡಗಂಟಿ, ಪೊದೆ ಸ್ವಚ್ಛಗೊಳಿಸಲು ಪಡುಕೋಣೆ ಡಿವೈಎಫ್ಐ ಆಗ್ರಹ



ಬೈಂದೂರು ತಾಲೂಕು ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆಗಳ ಚರಂಡಿ ಬದಿಯಲ್ಲಿ ಗಿಡಗಂಟಿ, ಪೊದೆ ಬೆಳೆದು ನಿಂತಿದ್ದು, ಜನ, ವಾಹನ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿರುವುದನ್ನು ಈ ಕೂಡಲೆ ತೆರವುಗೊಳಿಸಿ ಸ್ವಚ್ಛಗೊಳಿಸಬೇಕು ಎಂದು ಆಗ್ರಹಿಸಿ ಪಡುಕೋಣೆ ಡಿವೈಎಫ್ಐ ನೇತೃತ್ವದಲ್ಲಿ ಸ್ಥಳೀಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹರೀಶ್ ಇವರಿಗೆ ಮನವಿ ನೀಡಿತು. ನಾಡಾ ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಡಾ, ಹಡವು, ಬಡಾಕೆರೆ, ಸೇನಾಪುರ ಗ್ರಾಮಗಳ ಮುಖ್ಯ ರಸ್ತೆಗಳಾದ ನಾಡಾದ ಚರ್ಚ್‌ನಿಂದ ಗುಡ್ಡೆ ಹೋಟೆಲ್ ತನಕ, ಕೊಡಗುಂಜಿ ಕಳಿನ್ ಬಾಗಿಲು ರಸ್ತೆ, ಸಿದ್ದು ಕ್ರಾಸ್ ನಿಂದ ಬಡಾಕೆರೆ, ರಾಮನಗರದಿಂದ ಕೆಂಬೈಲ್ ಕಟ್ಟು ಹಾಗೂ ಗುಳ್ಕೋಣ್ ತನಕ, ವಿಜಯ ಬ್ಯಾಂಕ್ ಬಳಿಯಿಂದ ಕಡಿಕೆ ರಸ್ತೆ ಹಾಗೂ ಬಡಾಕೆರೆ ನೀರು ಟ್ಯಾಂಕ್ ತನಕ, ಸೇನಾಪುರ ಮುಖ್ಯ ರಸ್ತೆಯಿಂದ ಬಂಟ್ವಾಡಿ ತನಕ, ಹಡವು ಮಹಾವಿಷ್ಣು ದೇವಸ್ಥಾನದಿಂದ ಅತ್ತಿಕೋಣೆ ತನಕ ರಸ್ತೆ ಬದಿಯ ಕಳೆಗಿಡಗಳನ್ನು ತೆರವುಗೊಳಿಸಿ, ಸ್ವಚ್ಛ ಗೊಳಿಸುವಂತೆ ಮನವಿಯಲ್ಲಿ ಸಲ್ಲಿಸಿತು. ನಿಯೋಗದಲ್ಲಿ ಸ್ಥಳೀಯ ಯುವಜನ ಮುಖಂಡರಾದ ಕಿರಣ್ ಗಾಣಿಗ, ನಿತೀಶ್ ರಾಮನಗರ, ವಾಸು ಗುಡ್ಡೆಯಂಗಡಿ, ರಾಜೇಶ್ ಆಚಾರ್ ಪಡುಕೋಣೆ, ಮಂಜುನಾಥ ದೇವಾಡಿಗ ನಾಡಾ, ಉದಯ ಕಾಂಚನ್ ನಾಡಾ ಹಾಗೂ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ರಾಜೀವ ಪಡುಕೋಣೆ, ರಾಜೇಶ್ ಪಡುಕೋಣೆ ಮುಂತಾದವರಿದ್ದರು.

ಬಳ್ಳಾರಿ ವಿ.ವಿ ಸ್ನಾತಕೋತ್ತರ ಪದವಿ ಶುಲ್ಕ ಹೆಚ್ಚಳ – ಎಸ್‌ಎಫ್ಐ ವಿರೋಧ

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಎಂ.ಎ., ಪ್ರಥಮ ವರ್ಷ ಹಾಗು ದ್ವಿತೀಯ ವರ್ಷದ, ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಎಂ.ಎಸ್ಸಿ, ಎಂ.ಕಾಂ. ಇತ್ಯಾದಿ ಕೋರ್ಸ್‌ಗಳಿಗೆ ಈ ತಿಂಗಳಲ್ಲಿ ಪ್ರವೇಶ ಮತ್ತು ದಾಖಲಾತಿಗಳನ್ನು ಪ್ರಾರಂಭ ಮಾಡಿದ್ದು, ಕರೋನ್ ಇರುವುದರಿಂದ ಈ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಶುಲ್ಕಗಳನ್ನು ಹೆಚ್ಚಳ ಮಾಡುಬಾರದು ಕಳೆದು ವರ್ಷ ಇರವು ಶುಲ್ಕವನ್ನು ಈ ವರ್ಷ ಮುಂದವರಿಸಬೇಕು ಎಂದು ಸ್ಪಷ್ಟವಾಗಿ ರಾಜ್ಯ ಸರಕಾರ ಆದೇಶ ಮಾಡಿದೆ.

ಆದರೆ ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸರ್ಕಾರದ ಈ ಆದೇಶವನ್ನು ಗಾಳಿಗೆ ತೂರಿ ಕರೋನ ವೈರಸ್ ನಿಂದ ರಾಜ್ಯದ ಜನತೆ ತತ್ತರಿಸಿದೆ, ಆರ್ಥಿಕ ಪರಿಸ್ಥಿತಿ ಕೂಡ ಸಂಪೂರ್ಣವಾಗಿ ನೆಲಕಚ್ಚಿದೆ, ಜನರ ಕೈಯಲ್ಲಿ ಕೆಲಸ ಇಲ್ಲ, ಹಣ ಇಲ್ಲ, ಹಣದುಬ್ಬರದಿಂದ ಜನರು ಕಂಗಾಲು ಆಗಿದ್ದಾರೆ.

ಇದರ ಮಧ್ಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ, ಸ್ನಾತಕೋತ್ತರ ಪದವಿ ದಾಖಲಾತಿಗೆ ಕಳೆದ ವರ್ಷಕ್ಕಿಂತ ವರ್ಷ 1475 ರೂಪಾಯಿ ಹಣ್ಣ ಹೆಚ್ಚಳಾ ಮಾಡಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್ಐ) ಸಂಘಟನೆಯು ಖಂಡಿಸಿದೆ.



ಹೆಚ್ಚವರಿ ಶುಲ್ಕದ ಆದೇಶ ವಾಪಸ್ ಪಡೆದು ಕಳೆದ ವರ್ಷ ಇರುವ ಶುಲ್ಕವನ್ನು ಮಾತ್ರ ಪಡೆಯಬೇಕು ಎಂದು ಆಗ್ರಹಿಸಿದೆ. ಕಳೆದ ವರ್ಷ ವಿಶ್ವವಿದ್ಯಾಲಯ ಶುಲ್ಕ 2025 ರೂಪಾಯಿ ಇದಿದ್ದು ಈ ವರ್ಷ 3500 ಮಾಡಿದೆ. ಒಟ್ಟು ಸ್ನಾತಕೋತ್ತರ ಪದವಿ ದಾಖಲಾತಿ ಶುಲ್ಕ ಶೈಕ್ಷಣಿಕ ವರ್ಷದಲ್ಲಿ ಜಿಎಂ ವಿದ್ಯಾರ್ಥಿಗಳಿಗೆ 13190, OBC ವಿದ್ಯಾರ್ಥಿಗಳಿಗೆ 5090, SC/ST ವಿದ್ಯಾರ್ಥಿಗಳಿಗೆ 1240 ರೂಪಾಯಿ ಆಗುತ್ತದೆ. ಕಳೆದ ವರ್ಷ G.M ವಿದ್ಯಾರ್ಥಿಗಳಿಗೆ 4502 ರೂಪಾಯಿ ಹಾಗು OBC ವಿದ್ಯಾರ್ಥಿಗಳಿಗೆ 3557 ರೂಪಾಯಿ ಮಾತ್ರ ಇತ್ತು. ಆದ್ದರಿಂದ ಕಳೆದ ವರ್ಷ ಇದ್ದ ಶುಲ್ಕವನ್ನು ಮುಂದುವರಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್ಐ)) ಸಂಘಟನೆಯು ಒತ್ತಾಯ ಮಾಡಿದೆ. ●

ಮರ್ಯಾದೆಗೇಡು ಹತ್ಯೆ: ಆರೋಪಿಗಳ ಬಂಧನಕ್ಕೆ ಒತ್ತಾಯ

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ತಿರುಮಲಾಪುರ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಮರ್ಯಾದೆಗೇಡು ಹತ್ಯೆ ಪ್ರಕರಣದ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.



ದಲಿತ ಸಂಘರ್ಷ ಸಮಿತಿ ಒಕ್ಕೂಟ, ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಪೊಲೀಸರ ವಿರುದ್ಧ ದಿಕ್ಕಾರ ಕೂಗಿದರು. ಗಂಭೀರ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿಲ್ಲ. ಇಲ್ಲಿಯವರೆಗೂ ಯಾವೊಬ್ಬ ಆರೋಪಿಯನ್ನು ಬಂಧಿಸಿಲ್ಲ. ಹತ್ಯೆಗೀಡಾದ ಯುವತಿಯ ತಾಯಿಯನ್ನೇ ಪ್ರಶ್ನೆ ಮಾಡುತ್ತಿರುವ ಪೊಲೀಸರು ಆರೋಪಿಗಳಿಗೆ ರಕ್ಷಣೆ ನೀಡಿದ್ದಾರೆ. ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮಳವಳ್ಳಿ ತಾಲ್ಲೂಕಿನ ನಂಜೇಗೌಡನದೊಡ್ಡಿ ಗ್ರಾಮದ ಮಹಾದೇವಮ್ಮ ಅವರ ಪುತ್ರಿ ಹಾಗೂ ತಿರುಮಲಾಪುರ ಗ್ರಾಮದ ಟಿ.ಕೆ.ಸ್ವಾಮಿ ಬೆಂಗಳೂರಿನಲ್ಲಿದ್ದಾಗ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಮದುವೆಯಾದ ಕೆಲವೇ ದಿನಗಳಲ್ಲಿ ಯುವತಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾಳೆ. ಇದು ಮರ್ಯಾದೆಗೇಡು ಹತ್ಯೆಯಾಗಿದ್ದು ಇದಕ್ಕೆ ಸಾಕ್ಷ್ಯಗಳಿದ್ದರೂ ಪೊಲೀಸರು ಅವುಗಳನ್ನು ಪರಿಗಣಿಸಿಲ್ಲ. ಡಿವೈಎಸ್‌ಪಿ ಅವರು ಯುವತಿಯ ತಾಯಿಗೆ ಸಮಾಧಾನ ಹೇಳಿ ನ್ಯಾಯ ಕೊಡಿಸುವ ಭರವಸೆ ನೀಡಿಲ್ಲ. ಮಹಾದೇವಮ್ಮ ಅವರನ್ನೇ ಆರೋಪಿಯಂತೆ ನೋಡುತ್ತಿದ್ದಾರೆ ಎಂದು ಆರೋಪಿಸಿದರು.

ಘಟನೆಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವಹಿಸಿರುವ ಡಿವೈಎಸ್‌ಪಿಯನ್ನು ಬದಲಾವಣೆ ಮಾಡಿ ಸಮರ್ಥ ಪೊಲೀಸ್ ಅಧಿಕಾರಿಯೊಬ್ಬರನ್ನು ನೇಮಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಣ್ಗಾವಲಿನಲ್ಲೇ ಸೂಕ್ತ ತನಿಖೆ ನಡೆಸಬೇಕು. ಜಾತಿ ಕಾರಣಕ್ಕೆ ಯುವತಿಯನ್ನು ಕೊಲೆ ಮಾಡಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ ಜಿಲ್ಲೆಯಾದ್ಯಂತ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಮರ್ಯಾದೆಗೇಡು ಹತ್ಯೆಗಳು ಮರುಕಳಿಸುತ್ತಿವೆ. ಇದಕ್ಕೆ ಪೊಲೀಸರು ಸೂಕ್ತ ರೀತಿಯಲ್ಲಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದಿರುವುದೇ ಕಾರಣವಾಗಿದೆ. ಹಲವು ಪ್ರಕರಣಗಳಲ್ಲಿ ಆರೋಪಿಗಳು ಕೆಲವೇ ದಿನಗಳಲ್ಲಿ ಕಾರಗೃಹದಿಂದ ಹೊರಬಂದಿದ್ದಾರೆ. ಈ ಪ್ರಕರಣ ಕೂಡ ಅದೇ ಹಾದಿ ಹಿಡಿಯುತ್ತಿದೆ. ಮಗಳನ್ನು ಕಳೆದುಕೊಂಡಿರುವ ಮಹಾದೇವಮ್ಮ ಅವರಿಗೆ ಪೊಲೀಸರು ನ್ಯಾಯ ಕೊಡಿಸಬೇಕು. ಮುಗ್ಧ ಯುವತಿಯ ಸಾವಿನ ವಿರುದ್ಧದ ಹೋರಾಟಕ್ಕೆ ಜಿಲ್ಲೆಯ ಜನರು ಕೈಗೂಡಿಸಲಿದ್ದಾರೆ ಎಂದರು.

ಯುವತಿಯ ತಾಯಿ ಮಹದೇವಮ್ಮ ಮಾತನಾಡಿ 'ಮಗಳು ಪ್ರೀತಿಸಿ ಮದುವೆಯಾದ ನಂತರ ಆಕೆಯ ಬಗ್ಗೆ ಮಾಹಿತಿ ಇರಲಿಲ್ಲ. ಎಲ್ಲೋ ಬದುಕಲಿ ಎಂದು ಸುಮ್ಮನಾಗಿದ್ದೆ. ಆದರೆ ಆಕೆ ಮೃತಪಟ್ಟಿದ್ದಾಳೆ ಎಂಬ ವಿಚಾರ ತಿಳಿದ ನಂತರ ತಡೆಯಲು ಸಾಧ್ಯವಾಗಲಿಲ್ಲ. ತಿರುಮಲಾಪುರ ಗ್ರಾಮಕ್ಕೆ ಭೇಟಿ ನೀಡಿದಾಗ ಆಕೆಯನ್ನು ಗಂಡನ ಮನೆಯವರೇ ಕೊಲೆ ಮಾಡಿದ್ದಾರೆ ಎಂಬ ಗ್ರಾಮಸ್ಥರು ತಿಳಿಸಿದರು. ಪೊಲೀಸ್ ಠಾಣೆಗೆ ದೂರು ಕೊಡಲು ಹೋದರೆ ಇಲ್ಲಸಲ್ಲದ ಪ್ರಶ್ನೆ ಕೇಳಿ ಭಯ ಹುಟ್ಟಿಸುತ್ತಿದ್ದಾರೆ' ಎಂದು ಆರೋಪಿಸಿದರು. ಮಗಳ ಭಾವಚಿತ್ರ ತೋರಿಸಿ ಅವರು ಕಣ್ಣೀರಿಟ್ಟರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷೆ ದೇವಿ, ದಸಂಸ ರಾಜ್ಯ ಘಟಕದ ಸಂಚಾಲಕ ಗುರುಪ್ರಸಾದ್ ಕೆರಗೋಡು, ಕೆಂಪಯ್ಯ ರಮಾನಂದ, ಹುರುಗಲವಾಡಿ ರಾಮಯ್ಯ, ಶೋಭಾ, ಸುಶೀಲಾ, ಮಂಜುಳಾ, ದೇವರಾಜು, ಪೂರ್ಣಿಮಾ, ಆರ್. ಕೃಷ್ಣ ಇದ್ದರು.

ಇಎಸ್‌ಐ ಸ್ಥಗಿತ: ಸಿಐಟಿಯು ಖಂಡನೆ

ರಾಜ್ಯ ಸರಕಾರವು ಕಾರ್ಮಿಕರ ಇಎಸ್‌ಐ ಹಣದ ಪಾಲನ್ನು ಮಣಿಪಾಲ ಆಸ್ಪತ್ರೆಗೆ ನೀಡದೇ ಬಾಕಿ ಇಟ್ಟುಕೊಂಡು ಕಾರ್ಮಿಕರ ಜೀವದ ಜೊತೆ ಚಲ್ಲಾಟವಾಡುತ್ತಿರುವುದನ್ನು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಉಡುಪಿ ಜಿಲ್ಲಾ ಸಮಿತಿ ಖಂಡಿಸಿದೆ.

ಮಣಿಪಾಲ ಆಸ್ಪತ್ರೆಯ ಹೇಳಿಕೆ ಪ್ರಕಾರ ಈಗಾಗಲೇ ಚಿಕಿತ್ಸೆ ಪಡೆದ ಕಾರ್ಮಿಕರ 10 ಕೋಟಿ ಹಣ ಬಾಕಿ ಇರಿಸಿಕೊಂಡಿದೆ ಎಂಬುವುದು ಆಘಾತಕಾರಿಯಾಗಿದೆ. ಕಾರ್ಮಿಕರು ಕರೋನ ಸಂಕಷ್ಟದಲ್ಲಿರುವ ವೇಳೆಯಲ್ಲಿ ಸರಕಾರದ ನಡೆ ಕಾರ್ಮಿಕ ವಿರೋಧಿಯಾಗಿದೆ. ನಮ್ಮ ಹಲವಾರು ಕಾರ್ಮಿಕರು ಈಗಾಗಲೇ ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಆತಂಕದಲ್ಲಿದ್ದಾರೆ. ಆದ್ದರಿಂದ ಜನಪ್ರತಿನಿಧಿಗಳು, ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ಇಲ್ಲವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾ ಅಧ್ಯಕ್ಷರಾದ ಕೆ. ಶಂಕರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಆಗ್ರಹಿಸಿದ್ದಾರೆ.

ವಿದ್ಯುತ್ ದರ ಏರಿಕೆ ಸಿಪಿಐ(ಎಂ) ಖಂಡನೆ

ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುತ್ ಚಕ್ತಿ ನಿಯಂತ್ರಣ ಆಯೋಗಕ್ಕೆ (KERC) ವಿದ್ಯುತ್ ದರಗಳನ್ನು ಪ್ರತಿ ಯೂನಿಟ್ ಗೆ ರೂ.1.26 ರಂತೆ ಏರಿಕೆ ಮಾಡಲು ಕೋರಿದ್ದ ಕಾರಣ ಪ್ರಸ್ತುತ ವಿದ್ಯುತ್ ದರಗಳನ್ನು ಪ್ರತಿ ಯೂನಿಟ್ ಗೆ ಸರಾಸರಿ 40 ಪೈಸೆ ಏರಿಕೆ ಮಾಡಲು KERC ಅನುಮತಿಸಿದೆ. ರಾಜ್ಯ ಸರ್ಕಾರವು 2020 ಏಪ್ರಿಲ್ ನಿಂದಲೇ ಹೆಚ್ಚಿಸಬೇಕೆಂದಿದ್ದ ವಿದ್ಯುತ್ ದರಗಳನ್ನು ಕೋವಿಡ್ ಕಾರಣದಿಂದಾಗಿ KERC ಯು ನವೆಂಬರ್ 01 ರಿಂದ ಏರಿಕೆ ಮಾಡಲು ಅನುಮತಿಸಿದೆ. ರಾಜ್ಯ ಸರ್ಕಾರವು ವಿದ್ಯುತ್ ದರ ಏರಿಕೆಗೆ ಅನುಮತಿ ಕೋರಿದ ಕಾರಣ ಪ್ರಸ್ತುತ ವಿದ್ಯುತ್ ದರ ಏರಿಕೆಯ ಹೊರೆಯು ಜನತೆಯ ಮೇಲೆ ಬಂದೊದಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಜನತೆಯ ಮೇಲೆ ಹೊರೆ ಹೊರಿಸುವ ರಾಜ್ಯ ಬಿಜೆಪಿ ಸರ್ಕಾರದ ದಾಳಿಯ ಚಾಳಿಯ ಪರಿಣಾಮವಾಗಿ ಎಲ್ಲಾ ವಿದ್ಯುತ್ ಬಳಕೆದಾರರು ಸದರಿ ದರ ಏರಿಕೆಯನ್ನು ಅನುಭವಿಸಬೇಕಾಗಿ ಬಂದಿದೆ. ಕೋವಿಡ್ ಲಾಕ್ಡೌನ್ ನಿಂದಾಗಿ ಆರ್ಥಿಕ ಪುನಶ್ಚೇತನ ಪೂರ್ಣ ಪ್ರಮಾಣದಲ್ಲಿ ಆಗದೇ ಇರುವಾಗ ಜನತೆಯ ಉದ್ಯೋಗ ಮತ್ತು ಗಳಿಕೆಯು ತೀವ್ರ ಸಂಕಷ್ಟದಲ್ಲಿರುವಾಗ ಇಂತಹ ವಿದ್ಯುತ್ ದರ ಏರಿಕೆಯು ಜನತೆಯ ಕಷ್ಟವನ್ನು ಅರಿಯದ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಯ ಭಾಗವಾಗಿದೆ.

ರಾಜ್ಯ ಬಿಜೆಪಿ ಸರ್ಕಾರವು ವಿದ್ಯುತ್ ದರ ಏರಿಕೆಗೆ ಮುಂದಾದರೆ ಕೇಂದ್ರ ಬಿಜೆಪಿ ಸರ್ಕಾರವು ಪೆಟ್ರೋಲ್–ಡೀಸೆಲ್ ದರ ಏರಿಕೆಗಳಿಗೆ ಕಾರಣವಾಗಿದೆ. ಒಟ್ಟಾರೆ ಬಿಜೆಪಿ ಸರ್ಕಾರಗಳು ಜನತೆಗೆ ಸಂಕಷ್ಟದಲ್ಲಿ ನೆರವಾಗುವ ಬದಲು ಜನತೆಯ ಸಂಕಷ್ಟಗಳನ್ನು ಹೆಚ್ಚಿಸುವ ಕೆಲಸದಲ್ಲಿ ನಿರತವಾಗಿವೆ. ಬಿಜೆಪಿ ಸರ್ಕಾರಗಳ ಇಂತಹ ನೀತಿಗಳು ಬಿಜೆಪಿಯು ಜನತೆಯ ಬದುಕಿಗೆ ಮಾರಕ ಎಂಬುದನ್ನು ಪ್ರತಿ ಹಂತದಲ್ಲೂ ತೋರುತ್ತಾ ಬಂದಿವೆ.

ಎಂ.ಎಲ್.ಸಿ ಚುನಾವಣೆ ಮತ್ತು ಉಪಚುನಾವಣೆಗಳು ಮುಗಿಯುವವರೆಗೆ ಕಾದು ಹೊಂಚಿ ಹಾಕಿ ಕುಳಿತಿದ್ದ ಬಿಜೆಪಿ ಸರ್ಕಾರವು ಚುನಾವಣೆ ಮುಗಿದ ಮರುದಿನವೇ ಇಂತಹ ದರ ಏರಿಕೆ ಮಾಡಿರುವುದು ಬಿಜೆಪಿ ಸರ್ಕಾರದ ನಯವಂಚಕ ಕ್ರಮಗಳ ಪ್ರತೀಕವಾಗಿದೆ.

ಕೂಡಲೇ ಈ ದರ ಏರಿಕೆಯನ್ನು ಹಿಂಪಡೆದು ರಾಷ್ಟದ ಹಾಗೂ ರಾಜ್ಯದ ಜನತೆ ಒತ್ತಾಯಿಸುತ್ತಿರುವಂತೆ ರೂ. 7,500 ನೇರ ನಗದು ವರ್ಗಾವಣೆ ಮತ್ತು ತಲಾ 10 ಕೆ.ಜಿ. ಉಚಿತ ರೇಷನ್ ವಿತರಣೆಗೆ ಹಾಗೂ ಉದ್ಯೋಗ ಖಾತರಿ ಕೆಲಸವನ್ನು ರೂ. 600 ಕನಿಷ್ಟ ವೇತನದೊಂದಿಗೆ 200 ದಿನಗಳಿಗೆ ಹೆಚ್ಚಿಸಿ ನಗರ ಪ್ರದೇಶಕ್ಕೂ ವಿಸ್ತರಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಬಿಜೆಪಿ ಸರ್ಕಾರದ ಇಂತಹ ನಯವಂಚಕ ಜನವಿರೋಧಿ ಕ್ರಮಗಳನ್ನು ಹಿಮ್ಮೆಟ್ಟಿಸಲು ಹಾಗೂ ಬೆಲೆ ಏರಿಕೆ ನಿಯಂತ್ರಿಸಲು ಒತ್ತಾಯಿಸಿ ನಡೆಯುವ ಹೋರಾಟಗಳನ್ನು ಬೆಂಬಲಿಸಿ ಯಶಸ್ವಿಗೊಳಿಸಲು ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ. ●

ಮಸಣ ಕಾರ್ಮಿಕರ ಗಣತಿಗೆ ಸೂಕ್ತ ಕ್ರಮ ವಹಿಸಲು ಮನವಿ

ಮಾನ್ಯ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,

ಕಳೆದ ಒಂದು ದಶಕದಿಂದ ನಾವು ರಾಜ್ಯದ ಮಸಣ ಕಾರ್ಮಿಕರನ್ನು ಗಣತಿ ಮಾಡಲು ಮತ್ತು ಅಗತ್ಯ ಹಕ್ಕೊತ್ತಾಯಗಳನ್ನು ಪರಿಹರಿಸಲು ಕೋರುತ್ತಾ ಬಂದಿದ್ದೇವೆ.

ಈಚೆಗೆ ತಾವು ಕಳೆದ ಜುಲೈ 23, 2020 ರಂದು ಸುತ್ತೋಲೆ ಹೊರಡಿಸಿ ನಗರ, ಪಟ್ಟಣ ಮತ್ತು ಗ್ರಾಮಗಳಲ್ಲಿನ ಮಸಣ ಕಾರ್ಮಿಕರ ಕುರಿತು ಮಾಹಿತಿ ನೀಡುವಂತೆ ಕೋರಿರುತ್ತೀರಿ. ಇದೊಂದು ನಮಗೆ ಆಶಾದಾಯಕ ಬೆಳವಣಿಗೆಯಾಗಿತ್ತು. ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದೆವು. ಇದಕ್ಕಾಗಿ ತಮಗೆ ಅಭಿನಂದನೆಗಳು.

ಆದರೇ, ನಿರಾಶಾದಾಯಕ ವಿಚಾರವೆಂದರೇ, ಬಹುತೇಕ ಗ್ರಾಮ ಹಾಗೂ ಪಟ್ಟಣ ಪಂಚಾಯತ್ ಗಳು ಮತ್ತು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಮಸಣ ಕಾರ್ಮಿಕರು ಇಲ್ಲವೆಂದು ವರದಿ ನೀಡಿರುವುದು ಖೇದಕರ ವಿಚಾರವಾಗಿದೆ. ಇದು ಅವರು ಸರಿಯಾಗಿ ಪರಿಶೀಲಿಸದೇ ಮಾಡಿದ ಪ್ರಮಾದವಾಗಿದೆ.

ರಾಜ್ಯದಾದ್ಯಂತ ಸಾರ್ವಜನಿಕ ಮಸಣಗಳು ಮಾತ್ರವಲ್ಲಾ, ಸಮುದಾಯಗಳು ರೂಪಿಸಿಕೊಂಡಿರುವ ಕಬರ್ ಸ್ಥಾನ, ವೀರಶೈವರ ರುದ್ರಭೂಮಿ, ಬ್ರಾಹ್ಮಣ ರ ಮತ್ತು ಕ್ರೈಸ್ತ ರ ಮಸಣಗಳಲ್ಲೂ ಕಾರ್ಯ ನಿರ್ವಹಿಸುವ ಸಾವಿರಾರು ಕಾರ್ಮಿಕರಿದ್ದಾರೆ. ಈ ಕುರಿತು ಗ್ರಾಮ ಹಾಗೂ ಪಟ್ಟಣ ಮತ್ತು ನಗರವಾರು ಮಾಹಿತಿಯನ್ನು ಸಂಬಂದಿಸಿದ ಸ್ಥಳೀಯ ಸಂಸ್ಥೆಗಳಿಗೆ ನಮ್ಮ ಸಂಘಟನೆಯ ಘಟಕಗಳಿಂದಲೇ ಗುರುತಿಸಿ ಅವರ ಪಟ್ಟಿಯನ್ನು ನೀಡುವ ಕೆಲಸ ನಡೆಸಿ ಅವರ ಗಮನಕ್ಕೆ ತರುವ ಕೆಲಸ ಮುಂದುವರೆಸಿದ್ದೇವೆ.

ಆದ್ದರಿಂದ, ಸದರಿ ಕಾರ್ಮಿಕರನ್ನು ಗುರುತಿಸಲು ಕ್ರಮಬದ್ಧವಾದ ಮತ್ತು ವೈಜ್ಞಾನಿಕವಾದ ಹಾಗೂ ದೇವದಾಸಿ ಮಹಿಳೆಯರನ್ನು ಗಣತಿ ಮಾಡಿದ ಮಾದರಿಯಲ್ಲಿ ಗಣತಿ ಮಾಡಿ ನೊಂದಾಯಿಸಲು ಅಗತ್ಯ ಕ್ರಮವಹಿಸಲು ವಿನಂತಿಸುವೆವು.

ಕಲ್ಲಡ್ಕ ಪ್ರಭಾಕರ ಭಟ್ ಹೇಳಿಕೆ ಖಂಡನೀಯ

ಉಳ್ಳಾಲದಲ್ಲಿ ಪಾಕಿಸ್ತಾನ ನಿರ್ಮಾಣ ಆಗಿದೆ " ಮತ್ತಿತರ ಕೋಮು ಭಾವನೆ ಕೆರಳಿಸುವ ಹೇಳಿಕೆ ನೀಡಿರುವ, ಆರ್.ಎಸ್.ಎಸ್. ಮುಖ್ಯಸ್ಥ ಕಲ್ಲಡ್ಕ ಪ್ರಭಾಕರ ಭಟ್ ಅವರ ಹೇಳಿಕೆಯನ್ನು ಸಿಪಿಐಎಂ ಉಡುಪಿ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ.


ಪಂಚಾಯತ್ ಮಟ್ಟದಿಂದ ಕೇಂದ್ರ ಸರಕಾರದ ವರೆಗೆ ಅಧಿಕಾರದಲ್ಲಿ ಇದ್ದರೂ ಜನರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗದ ಬಿಜೆಪಿ ಮತ್ತು ಆರ್.ಎಸ್.ಎಸ್. ಕೋಮು ಭಾವನೆ ಕೆರಳಿಸಿ ಜನರ ನಡುವೆ ಅಶಾಂತಿ ಹುಟ್ಟು ಹಾಕುವ ಪ್ರಯತ್ನ ಮಾಡುತ್ತಿದೆ. ಜನರು ಇಂತಹ ಹೇಳಿಕೆಯನ್ನು ತಿರಸ್ಕರಿಸಿ, ಶಾಂತಿಯನ್ನು ಕಾಪಾಡಿ ಐಕ್ಯತೆ ಪ್ರದರ್ಶಿಸಬೇಕಿದೆ. ಅದೇ ಕಲ್ಲಡ್ಕ ಭಟ್ಟರಿಗೆ ನೀಡುವ ನಿಜವಾದ ಉತ್ತರ ಎಂದು ಸಿಪಿಐಎಂ ಭಾವಿಸುತ್ತದೆ.

ಚುನಾವಣಾ ರಾಜಕೀಯದ ಮೂಲಾಧಾರವೇ ಭ್ರಷ್ಟಾಚಾರವಾಗಿದೆ. ಅನೈತಿಕ ಆಯ್ಕೆಯ ಮೂಲಕ ನಮ್ಮ ಪ್ರತಿನಿಧಿಗಳಾಗುವ ಶಾಸಕರು, ಸಂಸದರು ನಮ್ಮ ಸಂವಿಧಾನಾತ್ಮಕ ಮತ್ತು ಮಾನವೀಯ ಹಕ್ಕುಗಳ ಶತ್ರುಗಳಾಗುತ್ತಾರೆ! ಇದೊಂದು ವಿಷಚಕ್ರದ ಹಾಗಿದೆ. ಪ್ರಾಯಶಃ ಇದೇ ಪ್ರವೃತ್ತಿಗಳು ಮುಂದುವರೆದರೆ ಚುನಾವಣೆಗಳು ಅಪ್ರಸ್ತುತವಾಗಿ ಬಿಡಬಹುದು. ಅಂದರೆ ಮುಂದಿನ ಹಂತದ ಫ್ಯಾಸಿಜಂ, ಚುನಾವಣೆಗಳ ಬೆಂಬಲವನ್ನೂ ಕೇಳದೇ ತನ್ನನ್ನು ಪ್ರತಿಷ್ಠಾಪಿಸಿಕೊಳ್ಳಬಹುದು. ಆ ಸ್ಥಿತಿಯೂ ತುಂಬಾ ದೂರವಿಲ್ಲವೆಂದು ಕಾಣುತ್ತದೆ.



ಪ್ರೊ. ರಾಜೇಂದ್ರ ಚೆನ್ನಿ

ಅನೈತಿಕ 'ಚುನಾವಣಾ ಪ್ರಜಾಪ್ರಭುತ್ವ'ದಿಂದ ಫ್ಯಾಸಿಜಂ ಗೆ ತುಂಬಾ ದೂರವಿಲ್ಲ



ಇತ್ತೀಚಿನ ದಶಕಗಳಲ್ಲಿ ಪ್ರಜಾಪ್ರಭುತ್ವದ ಸಂಸ್ಥೆಗಳು ನಿರಂತರವಾಗಿ ಆಕ್ರಮಣಗಳಿಗೆ ಒಳಗಾಗಿ ಅವನತಿಯನ್ನು ತಲುಪಿವೆ. ಅವು ನಿಷ್ಕ್ರಿಯವಾಗಿವೆ ಅಥವಾ ಪ್ರಭುತ್ವದೊಂದಿಗೆ ನಿರ್ಲಜ್ಜವಾಗಿ ಶಾಮೀಲಾಗಿವೆ. ಬಲಪಂಥೀಯ ರಾಜಕೀಯದ ಏಕಮಾತ್ರ ಸಾಧನೆಯೆಂದರೆ ಪ್ರಜಾಪ್ರಭುತ್ವವಾದಿ ಸಂಸ್ಕೃತಿಯನ್ನು ನಾಶಮಾಡಿ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಬೆಳೆಸುವುದು. ಇಲ್ಲಿ ಪ್ರಜಾಪ್ರಭುತ್ವವಾದಿ ಸಂಸ್ಕೃತಿಯೆಂದರೆ ಡಾ. ಬಿ.ಆರ್. ಅಂಬೇಡ್ಕರ್ ಅವರು ವಿವರಿಸಿದ ಬಗೆಯದು. ಅದರ ಮುಖ್ಯ ಆಧಾರವಾಗಿರುವುದು 'ಸಂವಿಧಾನಬದ್ಧ ನೈತಿಕತೆ' ಎನ್ನುವುದು. ಅದಿರದಿದ್ದರೆ ಪ್ರಜಾಪ್ರಭುತ್ವವು ಕೇವಲ ಚುನಾವಣಾ ಪ್ರಜಾಪ್ರಭುತ್ವವಾಗಿ (Electoral democracy) ಬಿಡುತ್ತದೆ. ನಾವು ಈಗ ಎದುರಿಸುತ್ತಿರುವ ಬಹುದೊಡ್ಡ ಅಪಾಯವೆಂದರೆ ಒಂದು ಸಾಮಾಜಿಕ ಪ್ರಜಾಪ್ರಭುತ್ವವಾಗುವ ಬದಲು ನಮ್ಮ ವ್ಯವಸ್ಥೆಯು ಚುನಾವಣಾ ಪ್ರಜಾಪ್ರಭುತ್ವವಾಗಿದೆ.

ದೇಶದ ಮಾನ್ಯ ಪ್ರಧಾನಮಂತ್ರಿಗಳು ತಮ್ಮನ್ನು ಮತ್ತು ತಮ್ಮ ಪಕ್ಷವನ್ನು ಕೇವಲ ಚುನಾವಣೆ ಗೆಲ್ಲುವ ಯಂತ್ರಗಳನ್ನಾಗಿಸಿದ್ದಾರೆ. ರಾಷ್ಟ್ರದ ಬಹುದೊಡ್ಡ ಸಮಸ್ಯೆಗಳಾದ ಕುಸಿಯುತ್ತಿರುವ ಆರ್ಥಿಕತೆ, ಭಯಾನಕವಾಗುತ್ತಿರುವ ನಿರುದ್ಯೋಗ ಇತ್ಯಾದಿಗಳ ಬಗ್ಗೆ ಸಂಸತ್ತಿನಲ್ಲಿಯೂ ಮಾತನಾಡಲು ಲಭ್ಯವಿಲ್ಲದ ಅವರು ಚುನಾವಣೆಗಳಲ್ಲಿ ಮಾತ್ರ 24x7 ದುಡಿಯುತ್ತಾರೆ. ಯಾವ ರಾಜ್ಯದ ಚುನಾವಣೆಗಳು ನಡೆದರೂ ಅವು ಒಕ್ಕೂಟವ್ಯವಸ್ಥೆಯ ಅಡಿಯಲ್ಲಿ ನಡೆಯುತ್ತವೆ ಎನ್ನುವ ಪ್ರಾಥಮಿಕ ಕಲ್ಪನೆಯು ಇಲ್ಲದಂತೆ ಪ್ರಧಾನಿಯವರು ಸೇರಿದಂತೆ ಎಲ್ಲಾ ಪಕ್ಷಗಳು ಇನ್ನೊಂದು ಪಕ್ಷವೊಂದನ್ನು ಮುಗಿಸುವ ಮಾತನ್ನು ಆಡುತ್ತಿವೆ. ಹೀಗಾದರೆ ಒಕ್ಕೂಟ ವ್ಯವಸ್ಥೆಯು ದುರ್ಬಲವಾಗುತ್ತದೆ. ಏಕೆಂದರೆ ಪರಸ್ಪರ ದ್ವೇಷವೇ ರಾಜಕೀಯದ ಕೇಂದ್ರವಾಗಿ ಬಿಟ್ಟರೆ ಒಕ್ಕೂಟದ ಪರಿಕಲ್ಪನೆಯೆ ಉಳಿಯಲಾರದು. ಅಂಬೇಡ್ಕರ್ ಅವರು ಪ್ರಸಿದ್ಧ ವಿದ್ವಾಂಸರ ಅಭಿಪ್ರಾಯಗಳನ್ನು ತಿಳಿಸುತ್ತಾ ಪ್ರಜಾಪ್ರಭುತ್ವದ ಜೀವಾಳವೆಂದರೆ ವಿರೋಧ ಮತ್ತು ವಿರೋದ 'ಪಕ್ಷವೆಂದು ಗುರುತಿಸುತ್ತಾರೆ. ರಾಜಕೀಯದ ಆರೋಗ್ಯಕ್ಕೆ ಇವು ಮುಖ್ಯವೆಂದು ಹೇಳುತ್ತಾ ಆ ಕಾಲದಲ್ಲಿ ಕಾಂಗ್ರೆಸ್ ಪಕ್ಷವು ಅತಿ ಹೆಚ್ಚಿನ ಬಹುಮತವನ್ನು ಪಡೆದು ವಿರೋಧ ಪಕ್ಷವೇ ಇಲ್ಲದಂತಾಗಿದ್ದು ಅಪಾಯಕಾರಿ ಎಂದು ವಿಶ್ಲೇಷಿಸುತ್ತಾರೆ.

ಆದರೆ ಇಂದಿನ ರಾಜಕೀಯದಲ್ಲಿ ತಮ್ಮ ಪಕ್ಷದ ವಿರೋಧಿಗಳು ದೇಶದ್ರೋಹಿಗಳು ಎನ್ನುವ ನುಡಿಗಟ್ಟು ಪ್ರಬಲವಾಗಿ ಬೆಳೆದಿದೆ. ಇವೆಲ್ಲವು ಅಧಿಕಾರದ ಅತಿಯಾದ ಕೇಂದ್ರೀಕರಣ, ಪ್ರಜಾಪ್ರಭುತ್ವವಾದಿ ಮೌಲ್ಯಗಳಾದ ಸಂವಾದ, ತರ್ಕಬದ್ಧ ವಾದಮಂಡನೆ, ಚಿಂತನೆ ಇವುಗಳ ಅಂತ್ಯದ ಲಕ್ಷಣಗಳಾಗಿವೆ. ಪರಿಸ್ಥಿತಿಯ ದುರಂತ ವ್ಯಂಗ್ಯವೆಂದರೆ ಭಾರತದ ರಾಜಕೀಯ ಚರಿತ್ರೆಯಲ್ಲಿಯೆ ಈ ಪರಿಯಾಗಿ ಮತದಾರ ಪ್ರಜೆಗಳನ್ನು ಓಲೈಸಿದ, ಮತಕ್ಕಾಗಿ ಪೀಡಿಸಿದ ಉದಾಹರಣೆಗಳೇ ಇಲ್ಲ. ಪ್ರತಿಯೊಂದು ಉಪಚುನಾವಣೆಯೂ 'ಪ್ರತಿಷ್ಠೆಯ' ಕಾಳವಾಗುವುದು ಏಕೆ? ಪ್ರತಿಯೊಂದು ಚುನಾವಣೆಗೂ ಕೋಟಿಗಟ್ಟಲೆ ಹಣ, ನೇತಾರರ ಓಡಾಟ, ಮಾಧ್ಯಮಗಳ ಭರಾಟೆ ಇವೆಲ್ಲ ಬೇಕೆ? ಒಟ್ಟು ರಾಜ್ಯದ ಬದುಕೆಂದರೆ ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಎನ್ನುವಂತೆ ಏಕಾಗಬೇಕು?

ಇನ್ನೊಂದು ವಿಷಯವನ್ನು ಗಮನಿಸಿ. ಚುನಾವಣೆಯ ನಂತರ ಯಾವ ಅಭ್ಯರ್ಥಿಯು ಗೆದ್ದರೂ ಹೆಚ್ಚಿನ ಬದಲಾವಣೆಗಳಾಗುವುದಿಲ್ಲ. ಕರ್ನಾಟಕದಲ್ಲಿಯಂತೂ ರಾಜಕೀಯ ತಿಳುವಳಿಕೆ, ನಾಯಕತ್ವ ಇರುವ ಜನಪ್ರತಿನಿಧಿಗಳೇ ಇಲ್ಲ. ಸೈದ್ಧಾಂತಿಕ ತಯಾರಿಯಂತೂ ಗೊತ್ತೇ ಇಲ್ಲ. ಪ್ರಜೆಗಳಿಗೆ ಖಚಿತವಾಗಿ ಗೊತ್ತಾಗುವ ಒಂದೇ ಸಂಗತಿಯೆಂದರೆ ಅವರ ಅಪಾರವಾದ ಭ್ರಷ್ಟಾಚಾರ. ಈ ಪ್ರಮಾಣದ ಭ್ರಷ್ಟಾಚಾರವು ನಮ್ಮ ಕಲ್ಪನಾಶಕ್ತಿಯನ್ನೂ ಮೀರಿದ್ದು. ಹಾಗೆಯೆ ಈ ಜನಪ್ರತಿನಿಧಿಗಳ ಆಸ್ತಿ–ಪಾಸ್ತಿಗಳು. ಅಂದರೆ ಚುನಾವಣಾ ರಾಜಕೀಯದ ಮೂಲಾಧಾರವೇ ಭ್ರಷ್ಟಾಚಾರವಾಗಿದೆ. ಹಾಗಿದ್ದರೆ ಇಂಥ ಚುನಾವಣೆಗಳ ಮೂಲಕ ಸೃಷ್ಟಿಯಾಗುವ ರಾಜಕೀಯ ಪ್ರತಿನಿಧಿತ್ವಕ್ಕೆ ನಾವು ಕೊಡಬೇಕಾದ ಬೆಲೆ ಏನು? ಅದನ್ನು ಜನರ 'ಪವಿತ್ರ' ಆಯ್ಕೆಯೆಂದು ಯಾಕೆ ನೋಡಬೇಕು? ಅದು ವಿವಿಧ ಬಗೆಯಲ್ಲಿ, ಸಂಪೂರ್ಣವಾಗಿ manipulate ಆಗಿ ಬಂದಿರುವ ಆಯ್ಕೆಯಲ್ಲವೆ? ಇಷ್ಟು ಮಾತ್ರವಲ್ಲ. ಇಂಥ ಅನೈತಿಕ ಆಯ್ಕೆಯ ಮೂಲಕ ನಮ್ಮ ಪ್ರತಿನಿಧಿಗಳಾಗುವ ಶಾಸಕರು, ಸಂಸದರು ನಮ್ಮ ಸಂವಿಧಾನಾತ್ಮಕ ಮತ್ತು ಮಾನವೀಯ ಹಕ್ಕುಗಳ ಶತ್ರುಗಳಾಗುತ್ತಾರೆ! ಇದೊಂದು ವಿಷಚಕ್ರದ ಹಾಗಿದೆ.

ಇಂಡಿಯನ್ ಕಲ್ಚರಲ್ ಫೋರಮ್‌ನ "ಗುಫ್ತಗೂ" ಪತ್ರಿಕೆಯಲ್ಲಿ ಒಂದು ಸಂಶೋಧನಾ ವರದಿ ಪ್ರಕಟವಾಗಿದೆ. ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಂಥ ವೇದಿಕೆಗಳನ್ನು ಬಳಸಿಕೊಂಡು ಅನೇಕ ಬಲಪಂಥೀಯ ವ್ಯಕ್ತಿಗಳು ಅಪಾರ ಸಂಖ್ಯೆಯ ಹಿಂಬಾಲಕರನ್ನು ಸಂಪಾದಿಸಿಕೊಂಡು ವಿಕೃತವಾದ, ಸಂವಿಧಾನ ವಿರೋಧಿಯಾದ ಅಭಿಪ್ರಾಯಗಳನ್ನು ಹರಡಿಸುವುದನ್ನು ಈ ವರದಿ ವಿಶ್ಲೇಷಿಸುತ್ತದೆ. ಇಂಥ ಒಂದು ಜಾಲವು ಅದೆಷ್ಟು ವ್ಯಾಪಕವಾಗಿ ಬೆಳೆದಿದೆ ಮತ್ತು ಮೊಫುಸಲ್ ಹಾಗೂ ಗ್ರಾಮೀಣ ಪ್ರದೇಶಗಳಿಗೆ ತಲುಪಿದೆಯೆನ್ನುವುದು ಗಾಬರಿ ಹುಟ್ಟಿಸುವಂತಿದೆ. ಅಂದರೆ ಜನಸಾಮಾನ್ಯರಿಂದ ವಿವೇಕ ಹಾಗೂ ತರ್ಕಬದ್ಧ (rational) ಚಿಂತನೆಯನ್ನೇ ದೋಚಿಕೊಳ್ಳುವ ಈ ಜಾಲದಿಂದಾಗಿ ಪ್ರಜಾಪ್ರಭುತ್ವಕ್ಕೆ ಅವಶ್ಯಕವಾದ ಸಂವಾದವು ಅಸಾಧ್ಯವಾಗಿ ಬಿಡುತ್ತದೆ. ಬದಲಾಗಿ ಕೋಮುದ್ವೇಷ, ಅಸಹನೆ ಇವುಗಳೇ ತುಂಬಿಕೊಳ್ಳುತ್ತವೆ. ಹಾಗಾದರೆ ಪ್ರಜಾಪ್ರಭುತ್ವಕ್ಕೆ ಇನ್ನೆಲ್ಲಿಂದ ಬೆಂಬಲ ಸಿಗಬಲ್ಲದು?

ಪ್ರಾಯಶಃ ಇದೇ ಪ್ರವೃತ್ತಿಗಳು ಮುಂದುವರೆದರೆ ಚುನಾವಣೆಗಳು ಅಪ್ರಸ್ತುತವಾಗಿ ಬಿಡಬಹುದು. ಅಂದರೆ ಮುಂದಿನ ಹಂತದ ಫ್ಯಾಸಿಜಂ ಚುನಾವಣೆಗಳ ಬೆಂಬಲವನ್ನೂ ಕೇಳದೇ ತನ್ನನ್ನು ಪ್ರತಿಷ್ಠಾಪಿಸಿಕೊಳ್ಳಬಹುದು. ಆ ಸ್ಥಿತಿಯೂ ತುಂಬಾ ದೂರವಿಲ್ಲವೆಂದು ಕಾಣುತ್ತದೆ. ■


ಬೈಡನ್ ಏಕೆ ಭಾರೀ ಅಂತರದಿಂದ ಗೆಲ್ಲಲಿಲ್ಲ?

ಟ್ರಂಪ್ ಸೋತರೆ ಅದರಷ್ಟಕ್ಕೆ ಅದು ಒಂದು ಮಹತ್ವದ ರಾಜಕೀಯ ಬೆಳವಣಿಗೆಯೇ. ಜಾಗತಿಕವಾಗಿ ಅಪಾಯಕಾರಿಯಾಗಿ ಫ್ಯಾಸಿಸ್ಟ್ ದಿಕ್ಕಿನಲ್ಲಿ ಬೆಳೆಯುತ್ತಿರುವ ಉಗ್ರ ಬಲಪಂಥೀಯ ರಾಜಕಾರಣಕ್ಕೆ ಒಂದು ಹಿನ್ನಡೆಯೇ. ಟ್ರಂಪ್ ಸೋಲು ಸಂತೋಷಕರ ಬೆಳವಣಿಗೆಯೇ. ಆದರೆ ಬೈಡನ್ ಜಯದ ಬಗ್ಗೆ ಹಿಗ್ಗುವ ಪರಿಸ್ಥಿತಿ ಇಲ್ಲ.

ವಸಂತರಾಜ ಎನ್.ಕೆ.

ಅಧ್ಯಕ್ಷೀಯ ಚುನಾವಣೆಯಲ್ಲಿ ಬೈಡನ್ ಭಾರೀ ಅಂತರದಿಂದ ಟ್ರಂಪನ್ನು ಸೋಲಿಸುತ್ತಾರೆ ಎಂಬ ನಿರೀಕ್ಷೆ ಮತ್ತು ಚುನಾವಣಾ–ಪೂರ್ವ ಸಮೀಕ್ಷೆಗಳ 'ಭವಿಷ್ಯ' ಮತ್ತೆ ಮುಗ್ಗರಿಸಿವೆ. ಡೆಮೊಕ್ರಾಟಿಕ್ ಅಧ್ಯಕ್ಷೀಯ ಆಭ್ಯರ್ಥಿಯ ಆಯ್ಕೆಯಲ್ಲಿ ಸ್ಪಷ್ಟ ಜನಪರ ಬದಲಿ ನೀತಿಗಳನ್ನು ಪ್ರತಿಪಾದಿಸುವ ಎಡಪಂಥೀಯ ಅಭ್ಯರ್ಥಿ (ಬರ್ನಿ ಸ್ಯಾಂಡರ್ಸ್) ನಡುಪಂಥೀಯ ಮತಗಳನ್ನು ಪಡೆಯುವುದಿಲ್ಲ. ಬೈಡನ್ ಎಡ ಮತ್ತು ನಡುಪಂಥೀಯ ಎರಡೂ ಮತಗಳನ್ನು ಪಡೆದು ಗೆಲ್ಲಬಲ್ಲ 'ಸುಭದ್ರ ಅಭ್ಯರ್ಥಿ'. ಆದ್ದರಿಂದ ಟ್ರಂಪನ್ನು ಭಾರೀ ಅಂತರದಿಂದ ಸೋಲಿಸುತ್ತಾರೆ ಎಂಬ ಅಂದಾಜು ಸಹ ತಪ್ಪು ಎಂದು ಸಾಬೀತಾಗಿದೆ. ಟ್ರಂಪ್ ನ ಬೆಂಬಲಿಗರ ಸಂಘಟಿತ ವಲಯದಲ್ಲಿ ಉದ್ಯೋಗ ಕಳೆದುಕೊಂಡ ಬಿಳಿಯ ಕಾರ್ಮಿಕರ, ಬಡ ಮತ್ತು ಕೆಳ–ಮಧ್ಯಮ ವರ್ಗದ ಬಿಳಿಯರ ವಿಭಾಗವನ್ನು ಬರ್ನಿ ಸ್ಯಾಂಡರ್ಸ್ ರಂತಹ ಅಭ್ಯರ್ಥಿ ಮತ್ತು ಬದಲಿ ನೀತಿಗಳಿಂದ ಆಕರ್ಷಿಸುವ ಸಾಧ್ಯತೆ ಇತ್ತು. ಟ್ರಂಪ್ ಅವರ ಆಡಳಿತದ ಪ್ರತೀಕವಾಗಿದ್ದ ತೀವ್ರ ಕೊವಿದ್ ಆರೋಗ್ಯ ಬಿಕ್ಕಟ್ಟು ಮತ್ತು ಬಂಡವಾಳಶಾಹಿ ಧೋರಣೆಗಳ ಘೋರ ವೈಫಲ್ಯಕ್ಕೆ ಬದಲಿ ನೀಡುವ, ಬಂಡವಾಳಶಾಹಿ–ವಿರೋಧಿ ದಿಟ್ಟ ನೀತಿಗಳ ಮೂಲಕ ಟ್ರಂಪ್ ಅವರನ್ನು ಇನ್ನೂ ಸುಲಭವಾಗಿ ಮತ್ತು ನಿರ್ಣಾಯಕವಾಗಿ ಸೋಲಿಸಬಹುದಿತ್ತು ಎಂದೂ ಹೇಳಲಾಗಿದೆ.

ಅಧ್ಯಕ್ಷೀಯ ಚುನಾವಣೆಯ ಫಲಿತಾಂಶಗಳನ್ನು ವಿಶ್ಲೇಷಿಸಿದರೆ ಇದು ಸ್ಪಷ್ಟವಾಗಿ ಕಾಣುತ್ತದೆ. ಭಾರೀ ಮತದಾನದ ಪ್ರಮಾಣದಿಂದ, ದೊಡ್ಡ ಜನವಿಭಾಗಗಳು ಟ್ರಂಪ್ ನ್ನು ಸೋಲಿಸಲು ಪಣ ತೊಟ್ಟಂತೆ ಕಾಣುತ್ತದೆ. ಆದರೆ ಚುನಾವಣಾ



ಪ್ರಚಾರದಲ್ಲಿ ಬೈಡನ್ ಅವರು ಟ್ರಂಪ್ ಶೈಲಿ ಮತ್ತು ಅತಿರೇಕಗಳ ಕುರಿತು ಟೀಕಿಸಿದರೆ ವಿನಹ ಅವರ ಆರ್ಥಿಕ ಸಾಮಾಜಿಕ ನೀತಿಗಳ ಮೂಲಭೂತ ವಿಮರ್ಶೆಯನ್ನು ಮಾಡಲಿಲ್ಲ ಅಥವಾ ಅದಕ್ಕೆ ಬದಲಿ ನೀತಿಗಳನ್ನು ಜನರ ಮುಂದೆ ಇಡಲಿಲ್ಲ. ಅಮೆರಿಕದ ಕೊವಿದ್ ದುರಂತ ಕತೆ ಟ್ರಂಪ್ ತಿಕ್ಕಲುತನದಿಂದ ಇನ್ನಷ್ಟು ಭೀಕರವಾಗಿರಬಹುದು. ಆದರೆ ಅದಕ್ಕೆ ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯ ಅಭಾವ, ಕೆಳ ಮಧ್ಯಮ ಮತ್ತು ಬಡವರಿಗೆ ನಿಲುಕುವ ಆರೋಗ್ಯ ವ್ಯವಸ್ಥೆಯನ್ನು ಸ್ಥಾಪಿಸುವುದರಲ್ಲಿ ತೀವ್ರ ವೈಫಲ್ಯ, ದೈತ್ಯ ವಿಮಾ ಮತ್ತು ಔಷಧಿ ಕಂಪನಿಗಳ ಸೂಪರ್ ಲಾಭವನ್ನು ಕಾಪಾಡುವುದು ಆದ್ಯತೆಯಾಗಿರುವುದು ಮೂಲ ಕಾರಣ. ಇದನ್ನು ಆಮೂಲಾಗ್ರವಾಗಿ ಬದಲಾಯಿಸುವ ಅಥವಾ ಈ ಮಹಾಸೋಂಕಿನ ಸನ್ನಿವೇಶದಲ್ಲಿ ಬಡ ಮಧ್ಯಮ ವರ್ಗಗಳಿಗೆ ಅತ್ಯಗತ್ಯ ನೆರವು ನೀಡುವ ದಿಟ್ಟ ಯೋಜನೆಗಳು ಬರಲಿಲ್ಲ. ಅದೇ ರೀತಿ 1930ರ ಮಹಾ ಕುಸಿತದ ನಂತರದ ಅತ್ಯಂತ ಭೀಕರ ನಿರುದ್ಯೋಗ ನಿರ್ಮೂಲನಕ್ಕೆ ಮತ್ತು ಕೊವಿದ್ ಜರ್ಝರಿತ ಆರ್ಥಿಕವನ್ನು ಪುನರುತ್ತೇಜಿಸಲು ಬೇಡಿಕೆ ಹೆಚ್ಚಿಸಲು ಜನರಿಗೆ ಆದಾಯ ನೀಡುವ ದಿಟ್ಟ ಹೊಸ ಕಾರ್ಯಕ್ರಮಗಳೂ ಇರಲಿಲ್ಲ.

ಒಬಾಮ ಶಾಂತಿ ಮತ್ತು ಸಮಗ್ರ ಆರೋಗ್ಯ ವ್ಯವಸ್ಥೆ ಸ್ಥಾಪಿಸುವ (ಅದನ್ನು ಜಾರಿ ಮಾಡುವುದರಲ್ಲಿ ವಿಫಲರಾದರೂ) ಭರವಸೆ ಮೂಡಿಸಿದ್ದರಿಂಧ ಭಾರೀ ಅಂತರದಿಂದ ವಿಜಯ ಸಾಧಿಸಿದ್ದರೂ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇಂತಹ ಭರವಸೆ ಮತ್ತು ಉತ್ಸಾಹ ಸೃಷ್ಟಿಸಿದ ಬರ್ನಿ ಸ್ಯಾಂಡರ್ಸ್ ಅವರನ್ನು ಮತ್ತು ಬಂಡವಾಳಶಾಹಿ–ವಿರೋಧಿ ಟೀಕೆಯನ್ನು ಡೆಮೊಕ್ರಾಟಿಕ್ ಅಧ್ಯಕ್ಷೀಯ ಚುನಾವಣೆಯಿಂದ ವ್ಯವಸ್ಥಿತವಾಗಿ ಸುಸಂಘಟಿತವಾಗಿ ಹೊರಗೆ ಇಡಲಾಯಿತು. ಚುನಾವಣಾ ಪೂರ್ವ ಸಮೀಕ್ಷೆಯೊಂದರಲ್ಲಿ ಯುವಜನರಲ್ಲಿ ಅರ್ಧದಷ್ಟು ಜನ ನಮಗೆ ಸಮಾಜವಾದ ಬೇಕು ಎಂದಿದ್ದರು ಎಂದು ವರದಿಯಾಗಿತ್ತು. ಇದರಿಂದಾಗಿ ಆರ್ಥಿಕ–ಸಾಮಾಜಿಕ ವಿಷಯಗಳ ಬದಲು ಟ್ರಂಪ್ ಎಬ್ಬಿಸಿದ ಕೆಲವು ಭಾವನಾತ್ಮಕ (ವಲಸೆಗಾರರನನು ಹೊರಗಿಡಬೇಕು, ಅಮೆರಿಕ ಬಿಳಿಯರದ್ದು, ಕುಡುಡು ಚೀನಾ–ದ್ವೇಷ, ಉಗ್ರ

ಪುಟ 15 ಕ್ಕೆ

ನಿರುದ್ಯೋಗದ ಭೂತ ದೇಶದಲ್ಲಿ ಬೆನ್ನಟ್ಟಿದೆ. ಸಾಂಕ್ರಾಮಿಕ ಭುಗಿಲೆದ್ದ ನಂತರ ಮತ್ತು ತರಾತುರಿಯ ಲಾಕ್‌ಡೌನ್ ನಂತರ ಕೋಟ್ಯಂತರ ಮಂದಿ ಉದ್ದಿಮೆಗಳಲ್ಲಿ, ಸಣ್ಣ ವ್ಯಾಪಾರಗಳಲ್ಲಿ, ಸೇವಾ ವಲಯದಲ್ಲಿ ಮತ್ತು ಎಲ್ಲಕ್ಕೂ ಮಿಗಿಲಾಗಿ, ಅನೌಪಚಾರಿಕ ವಲಯದಲ್ಲಿ ಕೆಲಸ ಕಳಕೊಂಡಿದ್ದಾರೆ.

ಕೊವಿಡ್ ಲಾಕ್‌ಡೌನಿನ ಮೊದಲೂ ಕೂಡ, ನಿರುದ್ಯೋಗ ಅಗಾಧವಾಗಿ ಬೆಳೆದಿತ್ತು. ನೋಟುರದ್ಧತಿ ಮತ್ತು ಜಿಎಸ್‌ಟಿ ಅನುಷ್ಠಾನ ಕಿರು ಉತ್ಪಾದಕರು ಮತ್ತು ಸಣ್ಣ ಉದ್ದಿಮೆಗಳನ್ನು ತಟ್ಟಿ ನಿರುದ್ಯೋಗ ತೀವ್ರವಾಗಿ ಏರಲು ಕಾರಣವಾಗಿತ್ತು. 2017–18ರ ನಿಯತಕಾಲಿಕ ಶ್ರಮ ಶಕ್ತಿ ಸರ್ವೆ (ಪಿಎಲ್‌ಎಫ್‌ಎಸ್) ನಿರುದ್ಯೋಗ ದರ ಹಿಂದಿನ ಐದು ದಶಕಗಳಲ್ಲಿ ಕಾಣದ ಅಭೂತಪೂರ್ವ ಮಟ್ಟಕ್ಕೆ ಏರಿದ್ದನ್ನು ತೋರಿಸಿತ್ತು. ಸರಕಾರ ಈ ಸರ್ವೆಯ ದತ್ತಾಂಶಗಳನ್ನು ಮರೆಮಾಚಲು ಪ್ರಯತ್ನಿಸಿತ್ತು. 2018–19ರ ಪಿಎಲ್‌ಎಫ್‌ಎಸ್ ದತ್ತಾಂಶ ಕೂಡ ಇಂತಹುದೇ ಚಿತ್ರವನ್ನು ಕೊಟ್ಟಿತ್ತು.

2019ರಲ್ಲಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ(ಎನ್‌ಎಸ್‌ಎಸ್‌ಒ) ಕೂಡ ಒಂದು ಸಮಯ–ಬಳಕೆ ಸರ್ವೆ ನಡೆಸಿತು. ಈ ಸರ್ವೆಯ ಅಂಕೆ–ಸಂಖ್ಯೆಗಳು ಇನ್ನೂ ಕಟುವಾಗಿವೆ. 2019ರಲ್ಲಿ 15 ರಿಂದ 59 ವಯೋಗುಂಪಿನಲ್ಲಿ ಕೇವಲ 67ಶೇ. ಗ್ರಾಮೀಣ ಪುರುಷರು, 21ಶೇ. ಗ್ರಾಮೀಣ ಮಹಿಳೆಯರು, ನಗರಪ್ರದೇಶಗಳ 71ಶೇ. ಪುರುಷರು ಮತ್ತು 19ಶೇ. ಮಹಿಳೆಯರು ಪ್ರತಿಫಲ ಪಡೆದ ಕೆಲಸದಲ್ಲಿ ಭಾಗವಹಿಸಿದ್ದರು.

ನಿರುದ್ಯೋಗ ಪರಿಸ್ಥಿತಿ ಮಾರ್ಚ್ ಕೊನೇ ವಾರದಲ್ಲಿ ಹೇರಿದ ಲಾಕ್‌ಡೌನ್‌ನ ನಂತರ ಇನ್ನೂ ಹದಗೆಟ್ಟಿತು. ಲಾಕ್‌ಡೌನ್ ತೆರವು ಮಾಡಿದ ನಂತರವೂ, ಆರ್ಥಿಕ ಚಟುವಟಿಕೆಗಳ್ಲು ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡ ನಂತರವೂ, ಅದರಿಂದಾಗಿ ಕಳೆದು ಹೋದ ಉದ್ಯೋಗಗಳು ಮತ್ತೆ ಬರಲಿಲ್ಲ. ಉದ್ಯೋಗದ ಮಟ್ಟ ಕೋವಿಡ್–ಪೂರ್ವದ ಮಟ್ಟಕ್ಕಿಂತ ಬಹಳ ಕೆಳಗೇ ಇದೆ.

ಒಂದು ಖಾಸಗಿ ಸರ್ವೆ ಸಂಘಟನೆಯಾದ ಸಿ.ಎಂ.ಐ.ಇ. ಉದ್ಯೋಗ ಸ್ಥಿತಿ–ಗತಿಗಳನ್ನು ಕುರಿತಂತೆ ರಾಷ್ಟ್ರೀಯ ಸರ್ವೆಗಳನ್ನು ನಡೆಸುತ್ತದೆ. ಈ ಸರ್ವೆಗಳಲ್ಲಿ ಬಳಸುವ ಸ್ಯಾಂಪಲ್‌ಗಳಲ್ಲಿ ಅನೌಪಚಾರಿಕ ವಲಯದ ಕಾರ್ಮಿಕರ ಪ್ರಾತಿನಿಧ್ಯ ಬಹಳ ಕಡಿಮೆ ಇದೆ. ಇದರಿಂದಾಗಿ, ಸಿಎಂಐಇ ಸರ್ವೆಗಳು ನಿರುದ್ಯೋಗ ಸಮಸ್ಯೆಯನ್ನು ಕೆಳ–ಅಂದಾಜು ಮಾಡುತ್ತವೆ, ಮತ್ತು ಲಾಕ್‌ಡೌನ್ ತೆರವಿನ ನಂತರ ಚೇತರಿಕೆಯ ಮೇಲಂದಾಜು ಮಾಡುತ್ತವೆ. ಆದರೂ, ಸಿಎಂಐಇನ ಇತ್ತೀಚಿನ ಮಾಸಿಕ ದತ್ತಾಂಶ ಕೂಡ ಅಕ್ಟೋಬರ್‌ನಲ್ಲಿ ಗ್ರಾಮೀಣ ನಿರುದ್ಯೋಗ ದರ 6.9ಶೇ. ಮತ್ತು ರಾಷ್ಟ್ರೀಯ ನಿರುದ್ಯೋಗ ದರ 6.89 ಶೇ. ಎಂದು ತೋರಿಸಿದೆ. ಲಾಕ್‌ಡೌನ್ ತೆಗೆದ ನಂತರ ಮನರೇಗ ಕೆಲಸದ ದಿನಗಳಲ್ಲಿ ನಂತರ ಕಂಡ ಆರಂಭಿಕ ಏರಿಕೆ





ಬಿಹಾರ ಚುನಾವಣಾ ಪ್ರಚಾರ ಜನಗಳಿಗೆ ಉದ್ಯೋಗ ಎಷ್ಟು ಮಹತ್ವದ್ದು ಎಂಬುದನ್ನು ತೋರಿಸಿದೆ. 'ಮಹಾಗಠ್‌ಬಂಧನ್'ನ 10 ಲಕ್ಷ ಉದ್ಯೋಗಗಳ ಆಶ್ವಾಸನೆಗೆ ದೊಡ್ಡ ಸ್ಪಂದನೆ ದೊರೆತಿದೆ, ವಿಶೇಷವಾಗಿ, ಎಲ್ಲ ಜಾತಿ, ಸಮುದಾಯಗಳ ಯುವಜನರಿಂದ. ಚುನಾವಣಾ ಫಲಿತಾಂಶ ಏನೇ ಆಗಿರಲಿ, ಅಲ್ಲಿಯ ಚುನಾವಣಾ ಪ್ರಚಾರ ಉದ್ಯೋಗ ನಿರ್ಮಾಣದ ಅಗತ್ಯದತ್ತ ಗಮನ ಕೇಂದ್ರೀಕರಿಸುವಂತೆ ಮಾಡಿದೆ.
ಆದ್ದರಿಂದ ನಿರುದ್ಯೋಗದ ವಿರುದ್ಧ ಹೋರಾಟವನ್ನು ಒಂದು ಆದ್ಯತೆಯಾಗಿ ಎತ್ತಿಕೊಳ್ಳಬೇಕಾದ ಅಗತ್ಯವಿದೆ. ಇದರಲ್ಲಿ ಎಲ್ಲ ಜನವಿಭಾಗಗಳನ್ನು ಒಳಗೊಳ್ಳಬೇಕು.

ಉದ್ಯೋಗಕ್ಕಾಗಿ ಹೋರಾಟ

ಪ್ರಕಾಶ ಕಾರಟ್

ಈಗ ಇಲ್ಲವಾಗಿದೆ. ಸಪ್ಟಂಬರ್‌ನಲ್ಲಿದ್ದ 265 ಮಿಲಿಯ ವ್ಯಕ್ತಿದಿನಗಳ ಕೆಲಸದ ಪ್ರಮಾಣ ಅಕ್ಟೋಬರಿನಲ್ಲಿ 173 ಮಿಲಿಯಕ್ಕೆ ಇಳಿದಿದೆ.

ವ್ಯಾಪಕವಾದ ನಿರುದ್ಯೋಗ ಸಾವಿರಾರು ಕುಟುಂಬಗಳನ್ನು ಹೆಚ್ಚೆಚ್ಚು ಹತಾಶಗೊಳಿಸುತ್ತಿದೆ. ಒಂದು ಸ್ಥಿರ ಆದಾಯವಿಲ್ಲದೆ, ಅವರಿಗೆ ವೈದ್ಯಕೀಯ ನೆರವನ್ನು ಪಡೆಯಲಾಗುತ್ತಿಲ್ಲ, ಮಕ್ಕಳನ್ನು ಶಾಲೆಗೆ ಕಳಿಸಲಾಗುತ್ತಿಲ್ಲ, ಅಥವ ಕುಟುಂಬದ ಎರಡು ಹೊತ್ತು ಊಟದ ಖರ್ಚನ್ನೂ ನಿಭಾಯಿಸಲಾಗುತ್ತಿಲ್ಲ. ದಿನಗೂಲಿಗಳಲ್ಲಿ ಆತ್ಮಹತ್ಯೆಯ ದರ 2019ರಲ್ಲಿಯೇ ಏರಿದೆ ಎಂದು ಎನ್‌ಸಿಆರ್‌ಬಿ ಹೇಳುತ್ತದೆ. 2020 ರಲ್ಲಿನ ಉದ್ಯೋಗ ನಷ್ಟಗಳು ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿರುತ್ತವೆ.

ಆದರೆ ಮೋದಿ ಸರಕಾರಕ್ಕೆ ಈ ವಿಕಟ ಪರಿಸ್ಥಿತಿಯ ಬಗ್ಗೆ ಪರಿವೆಯೇ ಇಲ್ಲ, ಅದು ನಿರ್ಲಕ್ಷ್ಯದಿಂದಲೇ ಇದೆ. ಹಣಕಾಸು ಉತ್ತೇಜನೆ ತೀರ ಅಲ್ಪ ಪ್ರಮಾಣದ್ದಾದ್ದರಿಂದ ಜೀವನಾಧಾರಗಳ, ಉದ್ಯೋಗಗಳ ಪುನಶ್ಚೇತನಕ್ಕೆ ಅಡ್ಡಿಯುಂಟಾಗಿದೆ. ಜೀವನಾಧಾರಗಳನ್ನು ಕಳಕೊಂಡವರಿಗೆ ಆದಾಯ ಬೆಂಬಲವಾಗಿ ನಗದು ವರ್ಗಾವಣೆಯನ್ನು ಒದಗಿಸುವಲ್ಲಿ ಅದು ವಿಫಲವಾಗಿದೆ. ಸರಕಾರೀ ಮತ್ತು ಅರೆ–ಸರಕಾರೀ ಸಂಸ್ಥೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಅವನ್ನು ತುಂಬುತ್ತಿಲ್ಲ.

ಪ್ರಸಕ್ತ ಬಿಹಾರ ಚುನಾವಣಾ ಪ್ರಚಾರ ಜನಗಳಿಗೆ ಉದ್ಯೋಗ ಎಷ್ಟು ಮಹತ್ವದ್ದು ಎಂಬುದನ್ನು ತೋರಿಸಿದೆ. 'ಮಹಾಗಠ್‌ಬಂಧನ್'ನ 10ಲಕ್ಷ ಉದ್ಯೋಗಗಳ ಆಶ್ವಾಸನೆಗೆ ದೊಡ್ಡ ಸ್ಪಂದನೆ ದೊರೆತಿದೆ, ವಿಶೇಷವಾಗಿ, ಎಲ್ಲ ಜಾತಿ, ಸಮುದಾಯಗಳ ಯುವಜನರಿಂದ. ಚುನಾವಣಾ ಫಲಿತಾಂಶ ಏನೇ ಆಗಿರಲಿ, ಅಲ್ಲಿಯ ಚುನಾವಣಾ ಪ್ರಚಾರ ಉದ್ಯೋಗ ನಿರ್ಮಾಣದ ಅಗತ್ಯದತ್ತ ಗಮನ ಕೇಂದ್ರೀಕರಿಸುವಂತೆ ಮಾಡಿದೆ.

ಆದ್ದರಿಂದ ನಿರುದ್ಯೋಗದ ವಿರುದ್ಧ ಹೋರಾಟವನ್ನು ಒಂದು ಆದ್ಯತೆಯಾಗಿ ಎತ್ತಿಕೊಳ್ಳಬೇಕಾದ ಅಗತ್ಯವಿದೆ. ನಿಜ, ಉದ್ಯೋಗಕ್ಕಾಗಿ ಚಳುವಳಿಯಲ್ಲಿ ಯುವಜನ ಆಂದೋಲನ ಒಂದು ಪ್ರಮುಖ ಪಾತ್ರವನ್ನು ವಹಿಸಬೇಕಾಗುತ್ತದೆ. ಆದರೂ ಇದೊಂದು ಹೆಚ್ಚು ವಿಸ್ತಾರವಾದ ಪ್ರಶ್ನೆ. ಇದರಲ್ಲಿ ಇತರ ಸಂಘಟನೆಗಳನ್ನೂ, ದುಡಿಯುವ ಜನಗಳ, ಕಾರ್ಮಿಕರ, ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕೆಲಸಗಾರರ ಸಂಘಟನೆಗಳನ್ನು, ವಿದ್ಯಾರ್ಥಿ ಮತ್ತು ಮಹಿಳಾ ಸಂಘಟನೆಗಳನ್ನು ಸೆಳೆಯಬೇಕಾಗಿದೆ. ನಿರುದ್ಯೋಗಿಗಳ ಒಂದು ದೊಡ್ಡ ಸಂಖ್ಯೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಕಾರ್ಮಿಕ ವರ್ಗದ ಕುಟುಂಬಗಳದ್ದು. ಉದ್ಯೋಗಕ್ಕಾಗಿ ಸೆಣಸಾಟ ಮಹಿಳೆಯರಿಗೂ ಬಹುಮುಖ್ಯವಾಗಿದೆ. ಏಕೆಂದರೆ ಅವರಲ್ಲಿ ಬಹಳಷ್ಟು ಮಂದಿ ಉದ್ಯೋಗದ ಪರಿಧಿಯಿಂದಲೇ ಹೊರಗಿದ್ದಾರೆ. ಪ್ರತಿಫಲದಾಯಕ ಉದ್ಯೋಗವಿಲ್ಲದೆ ವಿದ್ಯಾರ್ಥಿಗಳ ಭವಿಷ್ಯ ಮಬ್ಬಾಗಿದೆ. ಈ ಎಲ್ಲ ವಿಭಾಗಗಳನ್ನು ಉದ್ಯೋಗಕ್ಕಾಗಿ ಹೋರಾಟದೊಳಕ್ಕೆ ತರಬೇಕಾಗಿದೆ.

ಈ ಐಕ್ಯ ಹೋರಾಟ ಎಲ್ಲ ಉದ್ಯೋಗಹೀನ ಜನಗಳಿಗೆ ನಿರುದ್ಯೋಗ ಭತ್ಯೆ ಒದಗಿಸಬೇಕು ಎಂಬ ಬೇಡಿಕೆಯ ಮೇಲೆ ಕೇಂದ್ರೀಕೃತವಾಗಿರಬೇಕು, ಮತ್ತು ಇದಕ್ಕೆ ಸಂಬಂಧಿತ ಬೇಡಿಕೆಯಾಗಿ ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲರಿಗೂ ತಿಂಗಳಿಗೆ 7500 ರೂ. ಗಳ ಆದಾಯ ಬೆಂಬಲ, ಒಂದು ನಗರ ಉದ್ಯೋಗ ಖಾತ್ರಿ ಪರಿಯೋಜನೆ, ಮನರೇಗವನ್ನು ವಿಸ್ತರಿಸಿ 200ದಿನಗಳ ಕೆಲಸ ಮತ್ತು ಕೂಲಿ ಹೆಚ್ಚಳ ಮತ್ತು ಅಪಾರ ಆಹಾರಧಾನ್ಯ ಸಂಗ್ರಹ ಲಭ್ಯವಿರುವುದರಿಂದಾಗಿ, ಅವುಗಳ ಉಚಿತ ವಿತರಣೆಯನ್ನು ನವಂಬರ್ ತಿಂಗಳ ನಂತರವೂ ಮುಂದುವರೆಸಬೇಕು.

ಉದ್ಯೋಗ ನಿರ್ಮಾಣಕ್ಕೆ ಕೃಷಿಯಲ್ಲಿ ಮತ್ತು ಮೂಲರಚನೆಯಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆಗಳನ್ನು ಮಾಡಬೇಕು. ಅಂತಿಮವಾಗಿ, ಕೇಂದ್ರ ಮತ್ತು ರಾಜ್ಯಸರಕಾರಗಳು ವಿವಿಧ ಇಲಾಖೆಗಳಲ್ಲಿ ಮತ್ತು ಸರಕಾರೀ ಉದ್ಯಮಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಯುದ್ಧೋಪಾದಿಯಲ್ಲಿ ತುಂಬಬೇಕು. ■



ನನ್ನ ಒಂದು ಚಿಕ್ಕ ಮನ್ ಕೀ ಬಾತ್ ಹೇಳಬಹುದೇ?

ಒ.ಕೆ.

ನನಗೆ ಒಂದು ಉದ್ಯೋಗ ಬೇಕು

ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್

ನಿರುದ್ಯೋಗದ ಸುದ್ದಿ ಫೇಕಿಂಗ್ ನ್ಯೂಸ್‌ನಲ್ಲಿ ಬರಲಪ್ಪ!



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಪ್ರಧಾನಿ ಮೋದಿ ಫೇಕಿಂಗ್ ನ್ಯೂಸ್‌ನಿಂದ ಉದ್ಧರಣೆ ಕೊಟ್ಟರು! -ಸುದ್ದಿ

ಉಲ್ಬಣಗೊಳ್ಳುತ್ತಿರುವ ಕೊವಿಡ್ ಮಹಾಜಾಡ್ಯ ಮತ್ತು ಆಳವಾಗುತ್ತಿರುವ ಆರ್ಥಿಕ ಹಿಂಜರಿತ

ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿಯಿಂದ ಜನರ ಹೋರಾಟಗಳನ್ನು ಬಲಪಡಿಸಿ



ಮಾನವಕೋಟಿಯು ಬಹು ದೊಡ್ಡ ಕಷ್ಟಕರ ಸವಾಲನ್ನು ಎದುರಿಸುತ್ತಿರುವಾಗ, ನವ ಉದಾರವಾದಿ ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಿನ ತೀವ್ರ ವ್ಯತ್ಯಾಸಗಳು ಎದ್ದು ಕಾಣುತ್ತಿವೆ. ನವ-ಉದಾರವಾದಿ ಬಂಡವಾಳಶಾಹಿಯ ಬಳಿ ಜನರ ಕಷ್ಟಕೋಟಲೆಗಳನ್ನು ಪರಿಹರಿಸುವ ಯಾವುದೇ ಪರಿಹಾರವಿಲ್ಲ, ಬದಲು ಅದು ಅವನ್ನು ತೀವ್ರಗೊಳಿಸುತ್ತದೆಯಷ್ಟೇ. ಯಾವುದೇ ಪರಿಹಾರವನ್ನು ಬಂಡವಾಳವಾದದ ಹೊರಗೆ ಮಾತ್ರವೇ ಕಂಡುಕೊಳ್ಳಬಹುದು, ಅಂದರೆ ಸಮಾಜವಾದದಲ್ಲಿ.

ಸೀತಾರಾಂ ಯೆಚೂರಿ

ಅನು: ಟಿ.ಸುರೇಂದ್ರ ರಾವ್

ಜಗತ್ತಿನ ಬಹುಸಂಖ್ಯಾತ ಜನರು ಜೋಡಿ ಕೇಡುಗಳ ದಾಳಿಗಳಿಂದ ತತ್ತರಿಸಿ ಹೋಗಿದ್ದಾರೆ: ಬಂಡವಾಳಶಾಹಿ ಜಗತ್ತಿನಲ್ಲಿ ಒಂದು ಕಡೆ ಉಲ್ಬಣಗೊಳ್ಳುತ್ತಿರುವ ಕೋವಿಡ್-19 ಮಹಾರೋಗ, ಅದರ ಪರಿಣಾಮದಿಂದಾಗಿ ಲಾಕ್ಡೌನ್‌ಗಳು ಹಾಗೂ ಮೂರಾಬಟ್ಟೆಯಾದ ಜನರ ದಿನನಿತ್ಯದ ಬದುಕು; ಮತ್ತೊಂದೆಡೆ ತೀವ್ರವಾಗುತ್ತಿರುವ ಆರ್ಥಿಕ ಹಿಂಜರಿತ. ಇಂತಹ ಸಮಯದಲ್ಲಿ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ 2020ರ ವರ್ಷಾಚರಣೆ ಬಂದಿದೆ. ಈ ಸನ್ನಿವೇಶದಲ್ಲಿ, ಅಕ್ಟೋಬರ್ ಕ್ರಾಂತಿಯ ಮಹತ್ವ ಮತ್ತು ಬಂಡವಾಳವಾದಕ್ಕಿಂತ ಸಮಾಜವಾದದ ಹಿರಿಮೆಯು ಎಲ್ಲರ ಕಣ್ಣಿಗೆ ಎದ್ದು ಕಾಣುತ್ತಿದೆ.

ಹೊಸ ಯುಗವನ್ನೇ ಸೃಷ್ಟಿಸಿದ ಕೊಡುಗೆಗಳು

ಹಲವಾರು ವರ್ಷಗಳಿಂದ, ಅಕ್ಟೋಬರ್ ಕ್ರಾಂತಿಯು 20ನೇ ಶತಮಾನದಲ್ಲಿ ಮಾನವ ನಾಗರೀಕತೆಯ ಮುನ್ನಡೆಯ ಹಾದಿಯನ್ನು ರೂಪಿಸುವಲ್ಲಿ ನೀಡಿದ ಯುಗಾಂತರಕಾರೀ ಕೊಡುಗೆಗಳನ್ನು ಮತ್ತೆ-ಮತ್ತೆ ಗಮನಿಸುತ್ತಲೇ ಇದ್ದೇವೆ. ಅದರ ಸಾಧನೆಗಳಾದ ಸಾರ್ವತ್ರಿಕ ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ಸಾಮಾಜಿಕ ಸುಭದ್ರತೆಗಳು ಮತ್ತು ನೀಡಿದ ಸ್ಫೂರ್ತಿಯು ಜಗತ್ತಿನ ಕಮ್ಯುನಿಸ್ಟ್ ಚಳುವಳಿಯಲ್ಲಿ ವಿದ್ಯುತ್ ಸಂಚಾರ ಉಂಟುಮಾಡಿದೆ; ಅದು ಸಮಾಜವಾದಿ ದೇಶಗಳ ಸ್ಥಾಪನೆಗೆ ಮತ್ತು ಉತ್ತಮ ಜಗತ್ತಿಗಾಗಿನ ಜನರ ಹೋರಾಟಗಳ ಮುನ್ನಡೆಗೆ ಕಾರಣವಾಗಿದೆ. ಎರಡನೇ ವಿಶ್ವ ಯುದ್ಧದಲ್ಲಿ ಸೋವಿಯತ್ ಯೂನಿಯನ್ ವಹಿಸಿದ ನೇತೃತ್ವದ ಪಾತ್ರವು ಫ್ಯಾಸಿಸಂ ಹಾಗೂ ಹಿಟ್ಲರನ ಸೋಲಿಗೆ ಕಾರಣವಾಗಿ ಜಗತ್ತನ್ನು ಫ್ಯಾಸಿಸಂನ ಹಿಡುಗಿನಿಂದ ಮುಕ್ತ ಮಾಡಿತು ಮತ್ತು ತತ್ಪರಿಣಾಮವಾಗಿ ಜಾಗತಿಕವಾಗಿ ವಸಾಹತುಗಳು ವಿಮೋಚನೆ ಪಡೆಯುವ ಪ್ರಕ್ರಿಯೆಗೆ ಚಾಲನೆ ದೊರೆಯಿತು.

ಇದು, ಬೇರೆಲ್ಲವುಗಳ ಜತೆಯಲ್ಲಿ, ಹಲವಾರು ಬಂಡವಾಳಶಾಹಿ ದೇಶಗಳು "ಕಲ್ಯಾಣ ಪ್ರಭುತ್ವ"ವನ್ನು ಅಂಗೀಕರಿಸಿ ಜನರಿಗೆ ಒಂದು ಮಟ್ಟದ ಸಾಮಾಜಿಕ ಸುಭದ್ರತೆಯನ್ನು ಖಾತ್ರಿಪಡಿಸಲೇ ಬೇಕಾದ ಬಲವಂತಕ್ಕೆ ಒಳಗಾಗುಂತೆ ಮಾಡಿತು, ಆ ಮೂಲಕ ಸಮಾಜವಾದಿ ಚಿಂತನೆಗಳು ಜನರಿಂದ ಪಡೆದ ಬೆಂಬಲದ ಮಹಾಪೂರವನ್ನು ತಡೆಯಲು ಪ್ರಯತ್ನ ಮಾಡಿದವು. ವಿಜ್ಞಾನದ ಮುನ್ನಡೆಯ ಕ್ಷೇತ್ರದಲ್ಲಿ, ಸೋವಿಯತ್ ಯೂನಿಯನ್ ಬಾಹ್ಯಾಕಾಶದ ಗಡಿಗಳನ್ನು ದಾಟುವುದಲ್ಲದೇ ಇನ್ನಿತರ ವೈಜ್ಞಾನಿಕ ಮುನ್ನಡೆಗಳಲ್ಲಿ ಮತ್ತು ಸಾಧನೆಗಳಲ್ಲಿ ಮೊದಲಿಗರಾಗಿದ್ದು ಉಳಿದವರ ಕಣ್ಣು ಕೆಂಪಗೆ ಮಾಡಿತ್ತು. ಅದೇ ರೀತಿಯಲ್ಲಿ ಕಲೆಯ ಜಗತ್ತಿನಲ್ಲಿ, ಐಸೆನ್‌ಸ್ಟೈನ್ ಅವರು ದೃಶ್ಯ ಸಂಯೋಜನೆಯ(ಮಾಂಟಾಜ್) ತಂತ್ರ ಕೌಶಲವನ್ನು ಆರಂಭಿಸುವ ಮೂಲಕ ಸೋವಿಯತ್ ಸಿನಮಾವು ಚಲನಚಿತ್ರ ಕಲೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಇದಕ್ಕೂ ಮಿಗಿಲಾಗಿ, ಸಾಮ್ರಾಜ್ಯಶಾಹಿಯು ಜಾಗತಿಕ ಯಜಮಾನಿಕೆಗಾಗಿ ನಡೆಸುತ್ತಿದ್ದ ಆಕ್ರಮಣಕಾರಿ ಪ್ರಯತ್ನಗಳ ವಿರುದ್ಧ ಕಲ್ಲುಬಂಡೆಯಂತಹ ತಡೆಗೋಡೆಯಾಗಿ ನಿಂತ ಸೋವಿಯತ್ ಯೂನಿಯನ್ ಜಗತ್ತಿನಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಸ್ಫೂರ್ತಿ ನೀಡಿತು ಮತ್ತು ಅದನ್ನು ಹುರಿದುಂಬಿಸಿತು ಕೂಡ. ಇದು ಜಾಗತಿಕ ಶಾಂತಿ ನೆಲೆಸುವಂತೆ ಖಾತರಿಪಡಿಸಿತು.

ಅದರ ಅವಸಾನದೊಂದಿಗೆ (ಅದಕ್ಕೆ ಕಾರಣಗಳನ್ನು ಸಿಪಿಐ(ಎಂ) ನ 14ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ನಾವು ವಿಶ್ಲೇಷಿಸಿದ್ದೇವೆ)



ಕೊವಿಡ್ ವಿರುದ್ಧ ಸಮರದ ಒಂದು ವಿಯೆಟ್ನಾಮೀ ಪೋಸ್ಟರ್

ಸಾಮ್ರಾಜ್ಯಶಾಹಿಯು ತನ್ನ ನಗ್ನ ಆಕ್ರಮಣವನ್ನು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ನಾಯಕತ್ವದಲ್ಲಿ ನವ ಉದಾರವಾದಿ ಜಾಗತೀಕರಣದ ಮೂಲಕ ಪ್ರಾರಂಭಿಸಿತು. ಇದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ ಮತ್ತು ಯಾವ ರೀತಿಯಲ್ಲಿ ಇದನ್ನು ಪ್ರತಿರೋಧಿಸಬೇಕು ಎಂಬುದನ್ನು ಜಾಗತಿಕವಾಗಿ ಕಮ್ಯುನಿಸ್ಟ್ ಪಕ್ಷಗಳು ತಂತಮ್ಮ ದೇಶಗಳಲ್ಲಿ ಯೋಜಿಸಿವೆ ಮತ್ತು ನಾವು ನಮ್ಮ ದೇಶದಲ್ಲಿ ಇಲ್ಲಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ಮೂರ್ತವಾಗಿ ಯೋಜಿಸಿದ್ದೇವೆ..

ಕೋವಿಡ್ ಸವಾಲನ್ನು ಎದುರಿಸುವಲ್ಲಿ

ಅತ್ತ ಬಂಡವಾಳಶಾಹಿ ದೇಶಗಳು ಸದ್ಯದಲ್ಲಿ ಮಹಾರೋಗದ ಮರುಕಳಿಸುವಿಕೆಯ ಹೊಡೆತದಿಂದ ತತ್ತರಿಸುತ್ತಿರುವಾಗ, ಸೋಂಕಿನ ಹಠಾತ್ ಏರಿಕೆ ಮತ್ತು ಸಾವುಗಳು "ಇನ್ನೂ ಹೆಚ್ಚಿನ ಅಪಾಯದ ಸಣ್ಣ ಸೂಚನೆಯಷ್ಟೆ" ಎಂದು ತಜ್ಞರು ಎಚ್ಚರಿಸುತ್ತಿರುವಾಗ, ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ, ಅತ್ತ ಸಮಾಜವಾದಿ ದೇಶಗಳು ಕೋವಿಡ್ ಸೋಂಕಿನ ಹರಡುವಿಕೆಯನ್ನು ತಡೆಯುವಲ್ಲಿ ಶಕ್ತವಾಗಿವೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಮತ್ತೆ ಆರಂಭಿಸಿರುವುದು ಎದ್ದು ಕಾಣುತ್ತಿದೆ. ಅಕ್ಟೋಬರ್‌ವರೆಗೆ, ಚೀನಾವು 85,000 ಕ್ಕಿಮತ ಹೆಚ್ಚು ಪ್ರಕರಣಗಳು ಹಾಗೂ 4,634 ಸಾವುಗಳನ್ನು ವರದಿ ಮಾಡಿದೆ.

ಕ್ಯೂಬಾ, ಈ ರೋಗದಿಂದ 123 ಜನರನ್ನು ಕಳೆದುಕೊಂಡಿದೆ. ಅಮೆರಿಕದ ಆರ್ಥಿಕ ದಿಗ್ಬಂಧನದ ಹೊರತಾಗಿಯೂ, ಆ ದೇಶವು ಈ ಮಹಾರೋಗವನ್ನು ತಡೆಯುವಲ್ಲಿ ಮತ್ತು ದೊಡ್ಡ ಸಂಖ್ಯೆಯಲ್ಲಿ ಜನರ ಜೀವಗಳನ್ನು ರಕ್ಷಿಸಲು ಶಕ್ತವಾಗಿದೆ. ಅದು ಈಗ ಜಗತ್ತಿನ ಸುಮಾರು 50 ದೇಶಗಳಲ್ಲಿ ತನ್ನ ವೈದ್ಯರೊಂದಿಗೆ, ಔಷಧಿಗಳೊಂದಿಗೆ ಮತ್ತು ವೈದ್ಯಕೀಯ ಉಪಕರಣಗಳೊಂದಿಗೆ ಸಹಾಯ ಮಾಡುತ್ತಿದೆ.

ವಿಯೆಟ್ನಾಂನಲ್ಲಿ, ಇಲ್ಲಿಯವರೆಗೆ 139 ಜನರು ತಮ್ಮ ಜೀವ ಕಳೆದುಕೊಂಡಿದ್ದಾರೆ ಮತ್ತು ಆ ದೇಶದಲ್ಲಿ ಮತ್ತೆ ಎರಗಿದ ಆ ರೋಗದ ಎರಡನೇ ಅಲೆಯನ್ನು ಯಶಸ್ವಿಯಾಗಿ ತಡೆಯಲಾಗಿದೆ. ವಿಯೆಟ್ನಾಂ ಸರ್ಕಾರವು ವಾರದ ಮಾರುಕಟ್ಟೆಯನ್ನು ಪ್ರಾರಂಭಿಸಿ ಜನರಿಗೆ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ಉಚಿತವಾಗಿ ನೀಡುತ್ತಿದೆ. ಅಕ್ಕಿಯ ಎಟಿಎಂಗಳನ್ನು ಆರಂಭಿಸಿ ಅಲ್ಲಿ ಜನರು ಅಕ್ಕಿಯನ್ನು ಉಚಿತವಾಗಿ ಕೊಂಡೊಯ್ಯುವಂತೆ ವ್ಯವಸ್ಥೆ ಮಾಡಿದೆ.

ಡಿಪಿಆರ್‌ಕೆ(ಉತ್ತರ ಕೊರಿಯಾ)ದಲ್ಲಿ ಇಲ್ಲಿಯವರೆಗೂ, ಪ್ರವಾಹದ ಹಾವಳಿ ಮತ್ತು ಚಂಡಮಾರುತಗಳ ಹೊರತಾಗಿಯೂ ಯಾವುದೇ ಸಾವು ಸಂಭವಿಸಿಲ್ಲ ಎಂದು ವರದಿಯಾಗಿದೆ. ನೆರವು ಮತ್ತು ಪುನರ್ವಸತಿಗಾಗಿನ ಭಾರಿ ಕಾರ್ಯಾಚರಣೆಗಳ ನಡುವೆಯೂ ಮಹಾರೋಗ ಹರಡದಂತೆ ನೋಡಿಕೊಳ್ಳಲಾಗಿದೆ.

ಮಾನವಕೋಟಿಯು ಬಹು ದೊಡ್ಡ ಕಷ್ಟಕರ ಸವಾಲನ್ನು ಎದುರಿಸುತ್ತಿರುವಾಗ, ನವ ಉದಾರವಾದಿ ಬಂಡವಾಳಶಾಹಿ ಮತ್ತು ಸಮಾಜವಾದದ ನಡುವೆ ಈ ವಿಚಾರದಲ್ಲಿ ವ್ಯತ್ಯಾಸಗಳು ಎದ್ದು ಕಾಣುತ್ತಿವೆ.

ಜಾಗತಿಕ ಆರ್ಥಿಕ ಪರಿಸ್ಥಿತಿ

1929-30ರ ಮಹಾ ಕುಸಿತದ ನಂತರ ಈಗಿನ ಜಾಗತಿಕ ಆರ್ಥಿಕತೆಯು ಅತ್ಯಂತ ಆಳವಾದ ಹಿಂಜರಿತಕ್ಕೆ ಒಳಗಾಗಿದೆ ಎಂದು ವಿಶ್ವ ಬ್ಯಾಂಕ್ ವರ್ಣಿಸಿದೆ.

ಇದು ಜಗತ್ತಿನ ಬಹುಪಾಲು ಜನರ ಬದುಕಿನ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿದೆ. ವಿಶ್ವ ಬ್ಯಾಂಕಿನ ಪ್ರಕಾರ, 2021ರ ಹೊತ್ತಿಗೆ, 15ಕೋಟಿಗಿಂತಲೂ ಹೆಚ್ಚು ಜನರು ತೀವ್ರ ಬಡತನಕ್ಕೆ ತಳ್ಳಲ್ಪಡುತ್ತಿದ್ದಾರೆ. ಅರ್ಥವ್ಯವಸ್ಥೆಯಲ್ಲಿ ಶ್ರಮಶಕ್ತಿಯ ಭಾಗವಹಿಸುವಿಕೆಯು ಕೋವಿಡ್‌ಗೆ ಮುಂಚಿನ ಮಟ್ಟಕ್ಕಿಂತಲೂ ಕೆಳಗೆ ಇರಲಿದೆ ಮತ್ತು ಇನ್ನೂ

ಪುಟ 12 ನೋಡಿ


ಇಟೆಲಿಯಲ್ಲಿ ಕೊವಿಡ್ ವಿರುದ್ಧ ಸಮರದಲ್ಲಿ ನೆರವಾದ ಕ್ಯೂಬಾ ಡಾಕ್ಟರುಗಳು




ಬೈಡನ್ ಅಮೆರಿಕ ಅಧ್ಯಕ್ಷ ಪಟ್ಟದತ್ತ

ಬೈಡನ್ ಶೇ. 50ಕ್ಕಿಂತ ಹೆಚ್ಚು ಮತ್ತು ಪ್ರತಿಸ್ಪರ್ಧಿ ಟ್ರಂಪ್ ಗಿಂತ 39 ಲಕ್ಷ ಹೆಚ್ಚು ಮತ ಗಳಿಸಿದ್ದರೂ, ಅಮೆರಿಕದ ವಿಚಿತ್ರ ಪರೋಕ್ಷ ಚುನಾವಣಾ ಪದ್ಧತಿಯಿಂದಾಗಿ ಇನ್ನೂ ಅಮೆರಿಕದ ಅಧ್ಯಕ್ಷರಾಗಿ ಘೋಷಿತರಾಗಿಲ್ಲ. ಟ್ರಂಪ್ ಕೋರ್ಟುಗಳ ಮೂಲಕ ಜನಾದೇಶ ಧಿಕ್ಕರಿಸುವ ಬದಲಾಯಿಸುವ ಪ್ರಯತ್ನಗಳ ಮೂಲಕ ರಾಜಕೀಯ ಮತ್ತು ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಸುವ ಹಾದಿಯಲ್ಲಿದ್ದಾರೆ. ಟ್ರಂಪ್ ಭಾರೀ ಅಂತರದಿಂದ ಸೋಲುತ್ತಾರೆ ಎಂಬ ನಿರೀಕ್ಷೆಗಳು ಏಕೆ ಮತ್ತೆ ಹುಸಿಯಾದವು? ಸಂಭವನೀಯ ಬೈಡನ್ ಅಧ್ಯಕ್ಷತೆ ಅಮೆರಿಕ ಮತ್ತು ಜಗತ್ತಿನಲ್ಲಿ ಏನಾದರೂ ಸಕಾರಾತ್ಮಕ ಬದಲಾವಣೆ ತರಬಹುದೆ? ಅಮೆರಿಕದಲ್ಲಿ ಮತ್ತು ಜಾಗತಿಕವಾಗಿ ಆಕ್ರಾಮಕ ಬಲಪಂಥದ ವಿರುದ್ಧ ಮತ್ತು ಎಡ ಪ್ರಗತಿಪರ ರಾಜಕಾರಣಕ್ಕೆ ಅಮೆರಿಕದ ಜನಾದೇಶದ ಅರ್ಥ ಏನು? ಅಮೆರಿಕದ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ.

ಅಮೆರಿಕದ ಅಧ್ಯಕ್ಷೀಯ ಚುನಾವಣೆ ನಡೆದು 48 ಗಂಟೆಗಳ ನಂತರವೂ ಇನ್ನೂ ಯಾರು ಮುಂದಿನ ಅಧ್ಯಕ್ಷರಾಗುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ಬಿರುಸಿನ ಸ್ಪರ್ಧೆ ಮತ್ತು ಅಧ್ಯಕ್ಷ ಟ್ರಂಪ್ ಅವರ ಬೆದರಿಕೆಯ ಹೇಳಿಕೆಗಳಿಂದ ಅಂಗಡಿಗಳು ಮಾಲ್ ಗಳನ್ನು ಆತಂಕದಿಂದ ಮುಚ್ಚಲಾಗಿದೆ. ಒಂದು ಕಡೆ 'ನಾನು ಗೆದ್ದಿದ್ದೇನೆ' ಎಂದು ಏಕಪಕ್ಷೀಯವಾಗಿ ಘೋಷಿಸುತ್ತಾ, ಇನ್ನೊಂದು ಕಡೆ ಭಾರೀ ಚುನಾವಣಾ ಅಕ್ರಮಗಳು ನಡೆದಿವೆ ಎಂದು ಟ್ರಂಪ್ ಆಪಾದಿಸಿದ್ದಾರೆ. ಡೆಮೊಕ್ರಾಟರು 'ನನ್ನ ಗೆಲುವನ್ನು ಕಸಿದುಕೊಳ್ಳುತ್ತಿದ್ದಾರೆ' ಎಂದು ದೂರಿದ್ದಾರೆ. ಚುನಾವಣಾ ನಿಯಮಗಳನ್ನು ಲೆಕ್ಕಿಸದೆ 'ಮತ ಎಣಿಕೆ' ನಿಲ್ಲಬೇಕು. ಇಲ್ಲದಿದ್ದರೆ ನಾನು ಸುಪ್ರೀಂ ಕೋರ್ಟಿಗೆ ಹೋಗುತ್ತೇನೆ' ಎಂದು ಬೆದರಿಸಿದ್ದಾರೆ. ಕೆಲವು ಕಡೆ ಕೋರ್ಟಿಗೆ ಹೋಗಿದ್ದಾರೆ ಕೂಡಾ. ಅಗತ್ಯ ಬಿದ್ದರೆ ಚುನಾವಣಾ ಎಣಿಕೆಯಲ್ಲಿ ಅಕ್ರಮ ನಿಲ್ಲಿಸಲು ಜನ ಎಣಿಕೆ ಕೇಂದ್ರಗಳಿಗೆ ತೆರಳಬೇಕು ಎಂದು ಹೇಳಿದ್ದಾರೆ.

ಸಶಸ್ತ್ರ ಟ್ರಂಪ್ ಬೆಂಬಲಿಗರು ಇದನ್ನು ಗಂಭೀರವಾಗಿ ತೆಗೆದುಕೊಂಡು ಹಲವು ಕಡೆ ಎಣಿಕೆ ಕೇಂದ್ರಗಳನ್ನು ಸುತ್ತುವರೆದಿದ್ದಾರೆ. 'ಮತ ಎಣಿಕೆ ನಿಲ್ಲಿಸಬೇಕು' ಎಂದು ಟ್ರಂಪ್ ಬೆಂಬಲಿಗರು ಮತ್ತು 'ಪ್ರತಿಯೊಂದು ಮತವನ್ನೂ ಎಣಿಸಬೇಕು' ಎಂದು ಬೈಡನ್ ಬೆಂಬಲಿಗರು ಪ್ರತಿಭಟನಾ ಪ್ರದರ್ಶನಗಳನ್ನು ಮಾಡಿದ್ದಾರೆ. ಹಲವು ಕಡೆ ನೇಶನಲ್ ಗಾರ್ಡ್ಸ್ (ನಮ್ಮ ಸಿ.ಆರ್.ಪಿ.ಎಫ್. ನಂತೆ ತುರ್ತು ಪರಿಸ್ಥಿತಿಯಲ್ಲಿ ಕರೆಯುವ ಕೇಂದ್ರೀಯ ಸಶಸ್ತ್ರ ಪಡೆ) ನ್ನು ಅಣಿ ನೆರೆಸಲಾಗಿದೆ. ಹಿಂಸಾಚಾರದ ಮತ್ತು ಆಂತರಿಕ ಯುದ್ಧದ ಬೀತಿ ಹರಡಿದೆ. ಟ್ರಂಪ್ ಸೋತರೂ ಅದನ್ನು ಒಪ್ಪಿಕೊಳ್ಳುವ ಸಾಧ್ಯತೆ ಕಡಿಮೆಯಿದ್ದು ಸಂವಿಧಾನಿಕ ಬಿಕ್ಕಟ್ಟು ತಲೆದೋರುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.. ಟ್ರಂಪ್ ಹೇಳಿಕೆ ಮತ್ತು ಕ್ರಮಗಳನ್ನು ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಜಾಗತಿಕ ನಿರೀಕ್ಷಣಾ ತಂಡ 'ಅಧಿಕಾರದ ಭಾರೀ ದುರುಪಯೋಗ' ಎಂದು ಟೀಕಿಸಿದೆ.

ಬೈಡನ್ 7.35 ಕೋಟಿ (50.5%) ಮತ ಗಳಿಸಿ ಸ್ಪಷ್ಟ ಬಹುಮತ ಪಡೆದಿದ್ದರೂ, ಹತ್ತಿರದ ಸ್ಪರ್ಧಿ ಅಧ್ಯಕ್ಷ ಟ್ರಂಪ್ (6.96 ಕೋಟಿ, 47.9%)ಕ್ಕಿಂತ 39ಲಕ್ಷ ಹೆಚ್ಚು ಮತ ಪಡೆದಿದ್ದರೂ, ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಇರುವ ವಿಚಿತ್ರವಾದ ಪರೋಕ್ಷ ಪದ್ಧತಿಯಿಂದಾಗಿ ಅವರಿಗೆ ಇನ್ನೂ ಅಧ್ಯಕ್ಷತೆ ದಕ್ಕಿಲ್ಲ. ಈ ಪರೋಕ್ಷ ಪದ್ಧತಿಯಲ್ಲಿ ಅಮೆರಿಕದ 50 ರಾಜ್ಯಗಳಿಗೆ (ಸ್ಥೂಲವಾಗಿ ಜನಸಂಖ್ಯೆಯ ಆಧಾರದಲ್ಲಿ) ಒಟ್ಟು 538 'ಅಧ್ಯಕ್ಷೀಯ ಮತ'ಗಳನ್ನು ಕೊಡಲಾಗಿದೆ. ಒಂದು ರಾಜ್ಯದಲ್ಲಿ ಒಬ್ಬ ಅಭ್ಯರ್ಥಿ ಬಹುಮತ ಪಡೆದರೆ ಆ ರಾಜ್ಯದ ಎಲ್ಲಾ 'ಅಧ್ಯಕ್ಷೀಯ ಮತ'ಗಳು ಆತನಿಗೆ ಹೋಗುತ್ತವೆ, ಪಡೆದ ಮತದ ಪ್ರಮಾಣದಲ್ಲಿ ಹಂಚಲಾಗುವುದಿಲ್ಲ. (ಉದಾ: ಈ ಚುನಾವಣೆಯಲ್ಲಿ ಬೈಡನ್ ಕ್ಯಾಲಿಫೋರ್ನಿಯದಲ್ಲಿ ಬಹುಮತ ಪಡೆದಿದ್ದು ಆ ರಾಜ್ಯದ ಎಲ್ಲ 55 ಮತಗಳು ಅವರಿಗೆ, ಟ್ರಂಪ್ ಟೆಕ್ಸಾಸ್ ನಲ್ಲಿ ಬಹುಮತ ಪಡೆದಿದ್ದು ಆ ರಾಜ್ಯದ ಎಲ್ಲ 38 ಮತಗಳು ಅವರಿಗೆ ಹೋಗುತ್ತವೆ). ಈ ಪರೋಕ್ಷ ಪದ್ಧತಿಯಲ್ಲಿ ಒಟ್ಟು ಮತಗಳಲ್ಲಿ ಬಹುಮತ ಗಳಿಸಿದ ಅಭ್ಯರ್ಥಿ, 'ಅಧ್ಯಕ್ಷೀಯ ಮತ'ಗಳಲ್ಲಿ ಬಹುಮತ ಗಳಿಸದೆ ಸೋಲಬಹುದು. ಈ ಪದ್ಧತಿಯಿಂದಾಗಿಯೇ ಒಟ್ಟು ಮತಗಳಿಕೆಯಲ್ಲಿ ಬಹುಮತ ಸಿಗದಿದ್ದರೂ, 2000 ರಲ್ಲಿ ಬುಶ್ ಮತ್ತು 2016 ರಲ್ಲಿ ಟ್ರಂಪ್ ಗೆದ್ದಿದ್ದರು.



ಇದು ವರೆಗೆ ಒಬ್ಬ ಅಭ್ಯರ್ಥಿ ಸ್ಪಷ್ಟ ಬಹುಮತ ಪಡೆದ ಅಥವಾ ಮತ ಎಣಿಕೆ ಮುಗಿದ ಅಥವಾ ಇನ್ನೂ ಎಣಿಸಬೇಕಾದ ಮತಗಳಿಗಿಂತ ಮತ ಅಂತರ ಹೆಚ್ಚಿರುವ ರಾಜ್ಯಗಳ ಫಲಿತಾಂಶ ಗಣನೆಗೆ ತೆಗೆದುಕೊಂಡರೆ (ನ.6 ಮಧ್ಯಾಹ್ನ 2 ಗಂಟೆಗೆ) ಬೈಡನ್ 540 ರಲ್ಲಿ 253 'ಅಧ್ಯಕ್ಷೀಯ ಮತ' ಗಳನ್ನು ಪಡೆದಿದ್ದಾರೆ. ಟ್ರಂಪ್ 214 ಮತಗಳನ್ನು ಪಡೆದು ಹಿಂದಿದ್ದಾರೆ. 6 ರಾಜ್ಯಗಳಲ್ಲಿ ಇಬ್ಬರು ಅಭ್ಯರ್ಥಿಗಳ ಮತ ಅಂತರಕ್ಕಿಂತ ಇನ್ನೂ ಎಣಿಸಬೇಕಾದ ಮತಗಳು ಗಮನಾರ್ಹವಾಗಿ ಜಾಸ್ತಿ ಇದ್ದು, ಇದು ಅತಂತ್ರ ಸ್ಥಿತಿಗೆ ಕಾರಣವಾಗಿವೆ. ಇಂತಹ 6 ರಾಜ್ಯಗಳಲ್ಲಿ ಅರಿಝೋನಾ (11 ಅಧ್ಯಕ್ಷೀಯ ಮತಗಳು) ಮತ್ತು ನೆವಾಡಾ (6 ಅ.ಮ.) ಬೈಡನ್ ಮುಂದಿದ್ದಾರೆ. ಇನ್ನೂ ಎಣಿಸಬೇಕಾದ ಮತಗಳು ಪೋಸ್ಟಲ್ ಮತಗಳು ಅಥವಾ ಡೆಮೊಕ್ರಾಟಿಕ್ ಬಹುಮತ ಕ್ಷೇತ್ರಗಳಾಗಿದ್ದು ಬೈಡನ್ ತಮ್ಮ ಮುನ್ನಡೆ ಕಾದುಕೊಳ್ಳುವುದು ಮಾತ್ರವಲ್ಲ, ಗೆಲುವಿನ ಅಂತರವನ್ನು ಗಮನಾರ್ಹವಾಗಿ ಹೆಚ್ಚಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಈ ಎರಡು ರಾಜ್ಯಗಳನ್ನು ಗೆದ್ದರೆ ಸಾಕು, ಬೈಡನ್ 270ರ ಮ್ಯಾಜಿಕ್ ನಂಬರ್ ತಲುಪುತ್ತಾರೆ. ಉಳಿದ 3 ರಾಜ್ಯಗಳಾದ ಪೆನ್ಸಿಲ್ವೇನಿಯ (20 ಅಧ್ಯಕ್ಷೀಯ ಮತಗಳು), ನಾರ್ತ್ ಕೆರೊಲಿನಾ(15 ಅ.ಮ.) ಮತ್ತು ಜಾರ್ಜಿಯ (16 ಅ.ಮ.) ಗಳಲ್ಲಿ ಟ್ರಂಪ್ ಅಲ್ಪ ಮುನ್ನಡೆ ಸಾಧಿಸಿದ್ದರೂ, ಇನ್ನೂ ಎಣಿಸಬೇಕಾದ ಮತಗಳಲ್ಲಿ ಪೋಸ್ಟಲ್ ಮತಗಳು ಅಥವಾ ಡೆಮೊಕ್ರಾಟಿಕ್ ಬಹುಮತ ಕ್ಷೇತ್ರಗಳೇ ಹೆಚ್ಚಿರುವುದರಿಂದ ಟ್ರಂಪ್ ಅಂತರ ಅಳಿಸಿ ಹಾಕಿ ಬೈಡನ್ ಮುನ್ನಡೆ ಸಾಧಿಸುವ ಸಾಧ್ಯತೆ ಇದೆ. ಅಲಾಸ್ಕಾ (3 ಅ.ಮ.) ದಲ್ಲಿ ಮಾತ್ರ ಟ್ರಂಪ್ ಅವರ ಮುನ್ನಡೆ ಗಮನಾರ್ಹವಾಗಿದೆ.

ಟ್ರಂಪ್ 270ರ ಮ್ಯಾಜಿಕ್ ನಂಬರ್ ತಲುಪಬೇಕಾದರೆ ಅಲಾಸ್ಕಾ ಅಲ್ಲದೆ ನೆವಾದಾ, ಪೆನ್ಸಿಲ್ವೇನಿಯ, ನಾರ್ತ್ ಕೆರೊಲಿನಾ, ಮತ್ತು ಜಾರ್ಜಿಯ ರಾಜ್ಯಗಳನ್ನು ಗೆಲ್ಲಬೇಕು. ಇದರ ಸಾಧ್ಯತೆ ಕಡಿಮೆ. ನಾರ್ತ್ ಕೆರೊಲಿನಾ ದಲ್ಲಿ ಮಾತ್ರ ಟ್ರಂಪ್ ಗೆಲುವಿಗೆ ಸ್ವಲ್ಪ ಅವಕಾಶವಿದೆ ಎನ್ನಲಾಗಿದೆ.

ಪುಟ 12 ಕ್ಕೆ





ನೂರು ವರ್ಷಗಳ ಹೋರಾಟಗಳು ಮತ್ತು ತ್ಯಾಗಗಳ ಪರಂಪರೆಯಲ್ಲಿ ವರ್ಗ ಐಕ್ಯತೆಗಾಗಿ ಹೋರಾಟದ 50 ವರ್ಷಗಳು



ಇದೇ ಅಕ್ಟೋಬರ್ 31 ರಂದು ಭಾರತದ ಮೊದಲ ಕೇಂದ್ರ ಕಾರ್ಮಿಕ ಸಂಘಟನೆ ಎ.ಐ.ಟಿಯು.ಸಿ. ಸ್ಥಾಪನೆಗೊಂಡು ನೂರು ವರ್ಷಗಳಾದವು. ಈ ಸಂಘಟನೆಯ ಐವತ್ತು ವರ್ಷಗಳ ಅನುಭವದ ಹಿನ್ನೆಲೆಯಲ್ಲಿ "ಐಕ್ಯತೆ ಮತ್ತು ಹೋರಾಟ" ಎಂಬ ಘೋಷಣೆಯೊಂದಿಗೆ ಸ್ಥಾಪನೆಗೊಂಡ ಸಿ.ಐ.ಟಿ.ಯು. ಈ ವರ್ಷದ ಮೇ 30ರಂದು 50 ವರ್ಷಗಳನ್ನು ಪೂರೈಸಿತು. ಭಾರತದ ಕಾರ್ಮಿಕ ಆಂದೋಲನದ ಈ ನೂರು ವರ್ಷಗಳ ಒಂದು ಪಕ್ಷಿನೋಟ.

ಕಾರ್ಮಿಕ ವರ್ಗದ ಹೋರಾಟ ಎಂಬುದು ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿಯೇ ಅಂತರ್ಗತವಾಗಿದೆ. ಭಾರತದಲ್ಲಿ ಮೊದಲ ಕೇಂದ್ರ ಕಾರ್ಮಿಕ ಸಂಘಟನೆ ಮೂಡಿ ಬಂದಿರುವುದು ಕೂಡ ಇಂತಹ ಹೋರಾಟಗಳ ಹಿನ್ನೆಲೆಯಲ್ಲಿಯೇ.

19ನೇ ಶತಮಾನದ ಕೊನೆಯಲ್ಲಿ ಮತ್ತು 20ನೇ ಶತಮಾನದ ಮೊದಲ ಒಂದೂವರೆ ದಶಕದಲ್ಲಿ ಆಗಾಗ, ಅಲ್ಲಲ್ಲಿ ಕಾರ್ಮಿಕರು ಮುಷ್ಕರಗಳು ಭುಗಿಲೆದ್ದವು. ಆದರೆ ಇವುಗಳಿಗೆ ನಿರ್ದಿಷ್ಟ ಸಂಘಟನಾ ರಚನೆಯಿದ್ದಿರಲಿಲ್ಲ. ಇದೇ ವೇಳೆಗೆ ವಸಾಹತುಶಾಹಿ ಶೋಷಣೆಯ ವಿರುದ್ಧ ಸ್ವಾತಂತ್ರ್ಯದ ಹೋರಾಟ ಕಾರ್ಮಿಕರಲ್ಲೂ ರಾಜಕೀಯ ಪ್ರಜ್ಞೆಯನ್ನು ಮೂಡಿಸಲಾರಂಭವಾಗಿತ್ತು.

1908ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಳಕರ ವಿರುದ್ಧ ವಸಾಹತುಶಾಹೀ ಸರಕಾರ "ರಾಜದ್ರೋಹ'ದ ಕೇಸು ಹಾಕಿ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದಾಗ ಮುಂಬಯಿಯ ಜವಳಿ ಗಿರಣಿ ಕಾರ್ಮಿಕರು ರೈಲ್ವೆ ವರ್ಕ್‌ಶಾಪ್‌ಗಳ ಕಾರ್ಮಿಕರು ಮುಷ್ಕರ ನಡೆಸಿದರು. ಸರಕಾರ ಸೇನೆಯನ್ನು ಕರೆಸಿತು, ಮುಂಬಯಿಯ ಬೀದಿಗಳಲ್ಲಿ 10 ಕಾರ್ಮಿಕರ ಬಲಿದಾನವಾಯ್ತು, ಸುಮಾರು 50 ಮಂದಿ ಗಾಯಗೊಂಡರು. ಇದು ಸಣ್ಣ ವ್ಯಾಪಾರಿಗಳು ಮತ್ತು ಮಧ್ಯಮ ವರ್ಗಗಳ ಗಮನವನ್ನೂ ಸೆಳೆಯಿತು.

ಕೀಳು ಮಟ್ಟದ ಸಂಬಳಗಳು, ಕೆಲಸದ ದೀರ್ಘ ಅವಧಿ ಮತ್ತಿತರ ಶೋಷಕ ಕ್ರಮಗಳ ಜೊತೆಗೆ, ಮೊದಲ ಮಹಾಯುದ್ಧ ತಂದ ಬೆಲೆಯೇರಿಕೆ ಭಾರತದ ಕಾರ್ಮಿಕ ವರ್ಗದ ಸಂಕಟಗಳನ್ನು ಹೆಚ್ಚಿಸಿ ಅದು ವಿವಿಧ ರೀತಿಗಳಲ್ಲಿ ಚಳುವಳಿಗೆ ಇಳಿಯುವಂತೆ ಮಾಡಿತು. ಈ ನಡುವೆ 1917ರಲ್ಲಿ ರಷ್ಯಾದಲ್ಲಿ ಅಕ್ಟೋಬರ್ ಕ್ರಾಂತಿ ನಡೆದು ಮೊದಲ ಕಾರ್ಮಿಕ ವರ್ಗದ ಪ್ರಭುತ್ವದ ಸ್ಥಾಪನೆ ಕಾರ್ಮಿಕ ಆಂದೋಲನಕ್ಕೆ ಮಾತ್ರವಲ್ಲ, ಒಟ್ಟಾರೆಯಾಗಿ ಸ್ವಾತಂತ್ರ್ಯ ಆಂದೋಲನಕ್ಕೂ ಸ್ಫೂರ್ತಿ ತುಂಬಿತು.

ಇನ್ನೊಂದೆಡೆಯಲ್ಲಿ ಜಾಲಿಯಾನ್‌ವಾಲಾ ಹತ್ಯಾಕಾಂಡ, ರೌಲಟ್ ಕಾಯ್ದೆಯ ವಿರುದ್ಧ ಸತ್ಯಾಗ್ರಹ, ಅಸಹಕಾರ ಆಂದೋಲನ , ಖಿಲಾಫತ್ ಆಂದೋಲನ ಮುಂತಾದವೂ ಕಾರ್ಮಿಕ ವರ್ಗದ ಚಟುವಟಿಕೆಗಳಿಗೆ ಹುರುಪು ತುಂಬಿದವು. ದೇಶದಲ್ಲಿ ಆಗ ಕೈಗಾರಿಕಾ ಕೇಂದ್ರಗಳಾಗಿ ಬೆಳೆಯುತ್ತಿದ್ದ ಮುಂಬೈ, ಕೊಲ್ಕತ, ಮದ್ರಾಸ್ ಮುಂತಾದೆಡೆಗಳಲ್ಲಿ ಕಾರ್ಮಿಕ ಸಂಘಟನೆಗಳು ಹುಟ್ಟಿಕೊಳ್ಳಲಾರಂಭಿಸಿದವು.

ಈ ನಡುವೆ 'ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ' (ಐಎಲ್‌ಒ) ಒಂದು ಜಾಗತಿಕ ಸಮ್ಮೇಳನವನ್ನು ಏರ್ಪಡಿಸಿದಾಗ ಅದರಲ್ಲಿ ಭಾಗವಹಿಸಲು ಭಾರತದಲ್ಲಿನ ಬ್ರಿಟಿಶ್ ಸರಕಾರ ಭಾರತದ ಕಾರ್ಮಿಕ ಸಂಘಗಳನ್ನು ಪ್ರತಿನಿಧಿಸಲೊಬ್ಬ ವ್ಯಕ್ತಿಯನ್ನು, ಎನ್.ಎಂ.ಜೋಷಿಯವರನ್ನು ನೇಮಿಸಿತು. ಇದಕ್ಕೆ ಹಲವು ಕಾರ್ಮಿಕ ಸಂಘಗಳು ವಿರೋಧಿಸಿದವು. ಕೊನೆಗೆ, ಈ ವಿವಾದಕ್ಕೆ ಪರಿಹಾರವಾಗಿ, ಒಂದು ಅಖಿಲ ಭಾರತ ಕಾರ್ಮಿಕ ಕೇಂದ್ರವನ್ನು ರಚಿಸಲು ನಿರ್ಧರಿಸಲಾಯಿತು.

ಇದು ಮುಂಬಯಿಯಲ್ಲಿ ಅಕ್ಟೋಬರ್ 31, 1920ರಂದು 101 ಪ್ರತಿನಿಧಿಗಳು ಭಾಗವಹಿಸಿದ ಸಮ್ಮೇಳನದಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸ್ಥಾಪನೆಯಾದ ಹಿನ್ನೆಲೆ. ಈ ಪ್ರತಿನಿಧಿಗಳು ಒಟ್ಟು 1.4ಲಕ್ಷ ಸದಸ್ಯರನ್ನು ಹೊಂದಿದ್ದ 64 ಸಂಘಗಳನ್ನು ಪ್ರತಿನಿಧಿಸಿದ್ದರು. ಲಾಲಾ ಲಜಪತ್ ರಾಯ್ ಅವರನ್ನು ಅಧ್ಯಕ್ಷರಾಗಿ ಮತ್ತು ಎನ್.ಎಂ.ಜೋಷಿಯವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. ಸಹಜವಾಗಿಯೇ ಮುಖಂಡತ್ವದಲ್ಲಿ ಕಾಂಗ್ರೆಸಿಗರೇ ಇದ್ದರು.

ಆರಂಭದಿಂದಲೇ ಇದರಲ್ಲಿ ಎರಡು ಪ್ರವೃತ್ತಿಗಳಿದ್ದವು–ತಕ್ಷಣದ ಆರ್ಥಿಕ ಪ್ರಶ್ನೆಗಳಿಗಿಂತ ಮುಂದೆ ಹೋಗಿ ಮೂಲಭೂತ ಧೋರಣೆಗಳ ಬದಲಾವಣೆಗೆ ಸಿದ್ಧವಾಗಿರುವವರು ಮತ್ತು ಕೇವಲ ಕೆಲವು ಆರ್ಥಿಕ ಬೇಡಿಕೆಗಳಿಗೆ ಸೀಮಿತವಾಗಿರುವವರು. ಬ್ರಿಟಿಶ್ ಸರಕಾರ ಇದನ್ನು ಬಳಸಿಕೊಂಡು ಕಾರ್ಮಿಕ ಆಂದೋಲನದಲ್ಲೂ, ಸ್ವಾತಂತ್ರ್ಯ ಆಂದೋಲನದಲ್ಲಿಯಂತೆ, ಕ್ರಾಂತಿಕಾರಿಗಳು ಮತ್ತು ಸುಧಾರಣಾವಾದಿಗಳ ನಡುವೆ ಒಡಕು ತರಲು ಹಲವು ಪ್ರಯತ್ನಗಳನ್ನು ಮಾಡಿತು. ಕಾರ್ಮಿಕ ಆಂದೋಲನದಲ್ಲಿ ಸಹಜವಾಗಿಯೇ ಬೆಳೆದಿದ್ದ ಕಮ್ಯುನಿಸ್ಟರ ಪ್ರಭಾವವನ್ನು ಮೊಟಕು ಮಾಡಲು ಪಿತೂರಿ ಮೊಕದ್ದಮೆಗಳನ್ನು ಹಾಕುವ ಹಾದಿ ಹಿಡಿಯಿತು. 1924ರಲ್ಲಿ ಮುಝಫ್ಫರ್ ಅಹ್ಮದ್, ಎಸ್.ಎ. ಡಾಂಗೆ ಮುಂತಾದ ಕಾರ್ಮಿಕ ಮುಖಂಡರ ಮೇಲೆ ಕಾನ್ಪುರ ಪಿತೂರಿ ಮೊಕದ್ದಮೆಯನ್ನು ಹಾಕಿತು.' 1929ರಲ್ಲಿ 31 ಕಾರ್ಮಿಕ ಆಂದೋಲನದ ಮುಖಂಡರ ಮೇಲೆ ಮೇರಠ್ ಪಿತೂರಿ ಮೊಕದ್ದಮೆಯನ್ನು ಹಾಕಿತು. ಆದರೂ ಕಾರ್ಮಿಕ ಆಂದೋಲನದಲ್ಲಿ ಕಮ್ಯುನಿಸ್ಟರ ಪ್ರಭಾವವ ಹೆಚ್ಚುವುದನ್ನು ತಡೆಯಲು ಆಗಲಿಲ್ಲ.



'ಇಂಕ್‌ಲಾಬ್ ಜಿಂದಾಬಾದ್'

ಟ್ರೇಡ್ ಯೂನಿಯನ್ಸ್ ಕಾಯ್ದೆ, 1926ರ ಮೂಲಕವೂ ಪ್ರಯತ್ನ ನಡೆಯಿತು. ಮುಷ್ಕರಗಳನ್ನು ತಡೆಯಲು, ಕಾರ್ಮಿಕರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸದಂತೆ ಮಾಡಲು 1929ರಲ್ಲಿ 'ವ್ಯಾಪಾರ ವಿವಾದ ಮಸೂದೆ' ಮತ್ತು 'ಸಾರ್ವಜನಿಕ ಸುರಕ್ಷಿತತೆ ಮಸೂದೆ' ಯನ್ನು ತಂದಿತು. ಇದನ್ನು ಆಗಿನ ಕೇಂದ್ರೀಯ ಶಾಸನ ಸಭೆಯಲ್ಲಿ ಚರ್ಚಿಸುತ್ತಿದ್ದಾಗಲೇ ಭಗತ್ ಸಿಂಗ್ ಮತ್ತು ಅವರ ಸಂಗಾತಿ ಬಾಂಬೆಸೆದು 'ಇಂಕ್‌ಲಾಬ್ ಜಿಂದಾಬಾದ್', 'ಸಾಮ್ರಾಜ್ಯಶಾಹಿಗೆ ಧಿಕ್ಕಾರ' ಮತ್ತು 'ಜಗತ್ತಿನ ಕಾರ್ಮಿಕರೇ ಒಂದಾಗಿ' ಎಂದು ಘೋಷಣೆ ಹಾಕಿದರು. ಇವು ಮುಂದೆ ಸಮರಶೀಲ ಕಾರ್ಮಿಕ ಆಂದೋಲನದ ಘೋಷವಾಕ್ಯಗಳಾದವು.

ವರ್ಗಹೋರಾಟ ಮತ್ತು ವರ್ಗಶಾಮೀಲಿನ ಪ್ರವೃತ್ತಿಗಳ ನಡುವೆ ತಾಕಲಾಟಗಳು, ಒಡಕುಗಳು ಬಂದರೂ ಸ್ವಾತಂತ್ರ್ಯದ ವರೆಗೆ ಎಐಟಿಯುಸಿ ಭಾರತದ ಕಾರ್ಮಿಕ ಆಂದೋಲನದ ಪ್ರಧಾನ ಸಂಘಟನೆಯಾಗಿಯೇ ಉಳಿಯಿತು, ಬ್ರಿಟಿಶ್ ವಸಾಹತುಶಾಹಿಗಳ ವಿರುದ್ಧ ಹೋರಾಟದಲ್ಲಿ ಸಮರಶೀಲ ಸಂಘಟನೆಯಾಗಿಯೇ ಮುಂದುವರೆಯಿತು. 1946ರಲ್ಲಿ ಮುಂಬೈಯಲ್ಲಿ ಮತ್ತು ಅದನ್ನುಸರಿಸಿ ಕೊಲ್ಕತ, ಕರಾಚಿ, ಮದ್ರಾಸ್ ಮತ್ತು ವಿಶಾಖಪಟ್ಟಣದಲ್ಲಿ ರಾಯಲ್ ಇಂಡಿಯನ್ ನೇವಿಯ ಭಾರತೀಯ ನಾವಿಕರು ತಮ್ಮ ಬ್ರಿಟಿಶ್ ಅಧಿಕಾರಿಗಳ ವಿರುದ್ಧ ಬಂಡೆದ್ದಾಗ, ಮುಂಬೈಯ ಜನರು ಅವರಿಗೆ ಬೆಂಬಲವಾಗಿ ಬೀದಿಗಿಳಿದರು, ಕಾರ್ಮಿಕರು ಮುಷ್ಕರ ನಡೆಸಿ ಅವರ ಜತೆಗೂಡಿದರು. ನಾವಿಕ ಪಡೆಯವರು ಬ್ರಿಟಿಶ್ ಯೂನಿಯನ್ ಜಾಕನ್ನು ಇಳಿಸಿ ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಕೆಂಪು ಬಾವುಟಗಳನ್ನು ಹಾರಿಸಿದರೂ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮಾತ್ರ ಅವರನ್ನು ಬೆಂಬಲಿಸಲು ನಿರಾಕರಿಸಿದವು.

ಸ್ವಾತಂತ್ರ್ಯಾನಂತರ– ಒಡಕುಗಳ ಸರಣಿ

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯದ ಕೆಲವೇ ಸಮಯದ ಮೊದಲು, ಮೇ 1947ರಲ್ಲಿ ಕಾಂಗ್ರೆಸ್ ಪಕ್ಷ ಎ.ಐ.ಟಿ.ಯು.ಸಿ.ಯಲ್ಲಿ ಮೊದಲ ದೊಡ್ಡ ಒಡಕನ್ನು ತಂದಿತು, ಐ.ಎನ್.ಟಿ.ಯು.ಸಿ. ರಚಿಸಿತು. ಸರ್ದಾರ್ ವಲ್ಲಭಭಾಯಿ ಪಟೇಲ್ ಇದರ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ವರ್ಗಶಾಮೀಲಿನ ಧೋರಣೆ ಎದ್ದು ಕಾಣುತ್ತಿತ್ತು.

ಡಿಸೆಂಬರ್ 1948ರಲ್ಲಿ ಸೋಷಲಿಸ್ಟ್ ಪಕ್ಷ ಹೆಚ್.ಎಂ.ಎಸ್.(ಹಿಂದ್ ಮಜ್ದೂರ್ ಸಭಾ) ರಚಿಸಿತು. ಸಮಾಜವಾದಿಗಳಲ್ಲಿನ ಒಡಕಿನಿಂದಾಗಿ 1949ರಲ್ಲಿ ಯು.ಟಿ.ಯು.ಸಿ. ರಚನೆಗೊಂಡಿತು, 1958ರಲ್ಲಿ ಇದೂ ಇಬ್ಭಾಗವಾಗಿ ಯು.ಟಿಯು.ಸಿ.(ಲೆನಿನ್ ಸರಣಿ) ಮೂಡಿ ಬಂದಿತು. ಮುಂದೆ ಇದನ್ನು ಎ.ಐ.ಯು.ಟಿ.ಯು.ಸಿ. ಎಂದು ಮರುನಾಮಕರಣ ಮಾಡಲಾಯಿತು.

ಈ ನಡುವೆ ಆರೆಸ್ಸೆಸ್ 1955ರಲ್ಲಿ ಬಿ.ಎಂ.ಎಸ್. (ಭಾರತೀಯ ಮಜ್ದೂರ್ ಸಂಘ್) ರಚಿಸಿತು.

ಸಿಐಟಿಯು ಸ್ಥಾಪನೆ

ಇವೆಲ್ಲದರ ನಡುವೆಯೂ ಎ.ಐ.ಟಿ.ಯು.ಸಿ. ಅರವತ್ತರ ದಶಕದ ಆರಂಭದ ವರೆಗೂ ಪ್ರಧಾನ ಸಮರಶೀಲ ಕೇಂದ್ರ ಕಾರ್ಮಿಕ ಸಂಘಟನೆಯಾಗಿ ಮುಂದುವರೆಯಿತು. ಆದರೆ ಕ್ರಮೇಣ ಅದು ಹಲವು ಸವಾಲುಗಳನ್ನು ಎದುರಿಸಬೇಕಾಗಿ ಬಂತು. ನೆಹರೂ ನೇತೃತ್ವದ ಕಾಂಗ್ರೆಸ್ ಬಗ್ಗೆ ಡಾಂಗೆ ಮುಂತಾದ ಕೆಲವು ಎಐಟಿಯುಸಿ ಮುಖಂಡರಲ್ಲಿ ಉಂಟಾದ ಭ್ರಮೆ, ಅವರು ಕೂಡ ವರ್ಗಶಾಮೀಲಿನ ಧೋರಣೆಗಳನ್ನು ಬಹಿರಂಗವಾಗಿಯೇ ಅನುಸರಿಸಲಾರಂಭಿಸುವಂತೆ ಮಾಡಿತು. ಈ ವಿಭಾಗ ವರ್ಗ ಹೋರಾಟದ ವಿಚಾರವನ್ನೇ ಹೀಗಳೆಯಲಾರಂಬಿಸಿತು, ವರ್ಗ ಐಕ್ಯತೆ ಮತ್ತು ವರ್ಗ ಹೋರಾಟದ ನಿಲುವಿನ ಮುಖಂಡರಿಗೆ ಕಿರುಕುಳ ಮಾತ್ರವಲ್ಲ, ಅವರನ್ನು ಕಾರಣವಿಲ್ಲದೆ, ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ಮುಖಂಡತ್ವದಿಂದ ಯೂನಿಯನ್‌ಗಳಿಂದ ತೆಗೆದು ಹಾಕುವುದು, ವರ್ಗಹೋರಾಟವನ್ನು ಬೆಂಬಲಿಸುವ ಸಂಘಗಳಿಗೆ ಸಂಯೋಜನೆ ನಿರಾಕರಿಸುವುದು, ಅಥವ ಸಂಯೋಜನೆಯನ್ನು ರದ್ದು ಮಾಡುವುದು ತೆಗೆದು ಹಾಕುವುದು ಇತ್ಯಾದಿ ಆರಂಭವಾಯಿತು. ಇಂತಹ ವರ್ತನೆಗಳನ್ನು ನಿಲ್ಲಿಸುವಂತೆ, ವರ್ಗ ಶಾಮೀಲಿನ, ಆಳುವ ವರ್ಗಗಳೊಂದಿಗೆ ರಾಜಿಯ ದಾರಿಯನ್ನು ಬಿಡುವಂತೆ ಸುಮಾರು ಹತ್ತು ವರ್ಷಗಳ ಕಾಲ ಹೋರಾಟ ನಡೆಯಿತು.

ಇದು ಸರಕಾರ ಕಾರ್ಮಿಕರ ದುಡಿಮೆಯ ಮತ್ತು ಬದುಕಿನ ಪರಿಸ್ಥಿತಿಗಳ ಮೇಲೆ ಹೆಚ್ಚೆಚ್ಚು ದಾಳಿ ನಡೆಸುತ್ತಿದ್ದಾಗ, ಕ್ಲೋಶರುಗಳು, ಕಾಂಟ್ರಾಕ್ಟೀಕರಣ, ಉದ್ಯೋಗ ನಷ್ಟಗಳು ಸಂಭವಿಸುತ್ತಿದ್ದಾಗ, ಸಾಮೂಹಿಕ ಚೌಕಾಸಿಯ ಹಕ್ಕು ಮತ್ತು ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ನಿರಾಕರಿಸುತ್ತಿದ್ದಾಗ, ಇವೆಲ್ಲದರಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಕಾರ್ಮಿಕರ ಆಕ್ರೋಶ ಭುಗಿಲೇಳುತ್ತಿದ್ದಾಗ ಐಕ್ಯ ಹೋರಾಟಗಳು ಅಗತ್ಯವಾಗಿದ್ದ ಸಮಯ. ಕಾರ್ಮಿಕ ವರ್ಗದ ಮೇಲೆ ದಾಳಿ ಮಾಡುವ ವರ್ಗಧೋರಣೆಗಳ ವಿರುದ್ಧ ವರ್ಗಹೋರಾಟ ನಡೆಸಬೇಕಾಗಿದ್ದ ಸಮಯ. ಆದರೆ ಡಾಂಗೆ ನೇತೃತ್ವ ತನ್ನ ವರ್ಗಶಾಮೀಲಿನ ದಾರಿಯನ್ನು ಬಿಡುವಂತೆ ಮಾಡಿದ ಪ್ರಯತ್ನಗಳು ವಿಫಲವಾದಾಗ ಹೊಸದೊಂದು ಕಾರ್ಮಿಕ ಕೇಂದ್ರದ ಅಗತ್ಯ ಉಂಟಾಯಿತು.. ಇಂತಹ ಸಮಯದಲ್ಲೆ ಸಿ.ಐ.ಟಿ.ಯು., 1970ರಲ್ಲಿ "ಐಕ್ಯತೆ ಮತ್ತು ಹೋರಾಟ"ದ ಘೋಷಣೆಯೊಂದಿಗೆ ಹುಟ್ಟಿ ಬಂದಿತು. ಬಿ.ಟಿ,ರಣದಿವೆ ಇದರ ಮೊದಲ ಅಧ್ಯಕ್ಷರಾಗಿ, ಪಿ.ರಾಮಮೂರ್ತಿ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಮೂಲೆಗೊತ್ತುವ ಪ್ರಯತ್ನಕ್ಕೆ ಪ್ರತಿಯಾಗಿ ಐಕ್ಯ ಹೋರಾಟಗಳ ಪ್ರಯತ್ನ

ಸಿಐಟಿಯು ಸ್ಥಾಪನೆಯಾದ ಕೂಡಲೇ ಅದನ್ನು ಏಕಾಂಗಿಯಾಗಿಸುವ, ಮೂಲೆಗೊತ್ತುವ ಪ್ರಯತ್ನಗಳು ಆರಂಭವಾದವು. ಆಗಿನ ಕಾಂಗ್ರೆಸ್ ಸರಕಾರದ ಕಾರ್ಮಿಕ ಮಂತ್ರಿಗಳಿಂದ ಮುತುವರ್ಜಿಯಿಂದಲೇ ಅದು ಆರಂಭವಾಯಿತು. ಎಐಟಿಯುಸಿ, ಐಎನ್‌ಟಿಯುಸಿ ಮತ್ತು ಹೆಚ್‌ಎಂಎಸ್ ಗಳನ್ನು ಒಟ್ಟಿಗೆ ಸೇರಿಸಿ 'ರಾಷ್ಟ್ರೀಯ ಕಾರ್ಮಿಕ ಸಂಘಗಗಳ ಮಂಡಳಿ'(ಎನ್‌ಸಿಟಿಯು) ಎಂಬುದನ್ನು ರಚಿಸಲಾಯಿತು. ಸರಕಾರದ ಧೋರಣೆಗಳನ್ನು ಬೆಂಬಲಿಸಲಿಕ್ಕಾಗಿಯೇ ಇದನ್ನು ರಚಿಸಲಾಗಿತ್ತು. ಇದಕ್ಕೆ ಪ್ರತಿಯಾಗಿ ಸಿಐಟಿಯು ಇತರ ಕಾರ್ಮಿಕ ಕೇಂದ್ರಗಳನ್ನು, ಕೈಗಾರಿಕಾವಾರು ಕಾರ್ಮಿಕ ಒಕ್ಕೂಟಗಳನ್ನು ಒಟ್ಟಿಗೆ ತಂದು ಕಾರ್ಮಿಕ ಸಂಘಗಳ ಸಂಯುಕ್ತ ಮಂಡಳಿ'(ಯುಸಿಟಿಯು) ರಚಿಸಿತು, ಇದು ವೇತನ ಸ್ತಂಭನ, ಕಡ್ಡಾಯ ಠೇವಣಿ ಸ್ಕೀಮ್

ಪುಟ 12 ನೋಡಿ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸ್ಥಾಪನೆ

ಏಳನೇ ಮಹಾಧಿವೇಶನವು ದೇಶದ ಕಮ್ಯುನಿಸ್ಟ್ ಚಳುವಳಿಯಲ್ಲಿ ಹೊಸ ಘಟ್ಟವೊಂದಕ್ಕೆ ನಾಂದಿ ಹಾಡಿತು. ಡಾಂಗೆ ಗುಂಪಿನವರು ಅನುಸರಿಸುತ್ತಿದ್ದ ಬಂಡವಾಳಶಾಹಿ ಪರಿಷ್ಕರಣವಾದಿ ನೀತಿಗಳು ಮತ್ತು ಛಿದ್ರಕಾರಿ ಸಂಘಟನಾತ್ಮಕ ಆಚರಣೆಗಳ ವಿರುದ್ಧದ ಹೋರಾಟದ ಮೊದಲ ಘಟ್ಟ ಅಂತ್ಯವಾಗಿದೆ ಎಂದು ಘೋಷಿಸಿದ ಮಹಾಧಿವೇಶನ, ಮುಂದಿನ ಹಂತವು "ಮುಂದಿನ ಕೆಲವು ತಿಂಗಳುಗಳಲ್ಲಿ ಮುಗಿಯಲಿದ್ದು, ಇಂದು ಔಪಚಾರಿಕವಾಗಿ ಡಾಂಗೆ ಗುಂಪಿನೊಂದಿಗೆ ಇರುವವರು, ಅಥವಾ ಯಾರ ಜತೆಯಲ್ಲೂ ಇಲ್ಲದಿರುವವರಲ್ಲಿ ಬಹುಪಾಲು ನಮ್ಮ ಜತೆಗೂಡಲಿದ್ದಾರೆ, ಈ ಮೂಲಕ ಡಾಂಗೆ ಗುಂಪಿನವರು ಅನುಸರಿಸುತ್ತಿದ್ದ ಪರಿಷ್ಕರಣವಾದಿ ಹಾಗೂ ಛಿದ್ರಕಾರಿ ನೀತಿಗಳಿಂದಾದ ಒಡಕನ್ನು ಅಂತಿಮವಾಗಿ ಹೋಗಲಾಡಿಸಿದ್ದೇವೆಂಬ ಸಂಗತಿಯು ಇದರಿಂದ ದಾಖಲಾಗುತ್ತದೆ" ಎಂಬ ಭರವಸೆಯನ್ನು ವ್ಯಕ್ತಪಡಿಸಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಕಮ್ಯುನಿಸ್ಟ್ ಪಕ್ಷದ ಏಳನೇ ಮಹಾಧಿವೇಶನವು 1964ರ ಅಕ್ಟೋಬರ್ 31 ರಿಂದ ನವಂಬರ್ 7 ರವರೆಗೆ ಕಲ್ಕತ್ತಾದಲ್ಲಿ ನಡೆಯಿತು. ಈ ಮಹಾಧಿವೇಶನವು ಐಕ್ಯ ಪಕ್ಷದಲ್ಲಿ ಪರಿಷ್ಕರಣವಾದದ ವಿರುದ್ಧ ನಡೆಯುತ್ತಿದ್ದ ಹೋರಾಟದ ಅಂತ್ಯದ ಕುರುಹು ಆಯಿತು. ಪರಿಷ್ಕರಣವಾದದ ಜತೆಗಿನ ಕಾರ್ಯಕ್ರಮ, ಸಂಘಟನೆ ಹಾಗೂ ಸೈದ್ಧಾಂತಿಕ ಸಂಬಂಧಗಳನ್ನು ಅದು ಕಡಿದುಕೊಂಡುದರ ಕುರುಹು ಕೂಡ. ಪಕ್ಷವು ಅನುಸರಿಸಬೇಕಾದ ಕಾರ್ಯತಂತ್ರಗಳಲ್ಲಿ ಕೂಡ ಸಂಪೂರ್ಣ ಬೇರ್ಪಡೆ ಎನ್ನುವುದು ಅದರರ್ಥ. ದೇಶದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಲ್ಲಿ ಏಳನೇ ಮಹಾಧಿವೇಶನವು ನಿರ್ಣಾಯಕ ಘಟ್ಟವಾಗಿದೆ. ಅದು ಒಂದು ಹೊಸ ಕಾರ್ಯಕ್ರಮವನ್ನು, ಕಾರ್ಯನೀತಿಯ ಹೇಳಿಕೆಯನ್ನು ಮತ್ತು ಕಾರ್ಯಭಾರ ಕುರಿತ ನಿರ್ಣಯವನ್ನು ಅಂಗೀಕರಿಸಿತು, ಅದರಲ್ಲಿ ಭಾರತೀಯ ಕ್ರಾಂತಿಯ ಕಾರ್ಯವ್ಯೂಹ ಮತ್ತು ಕಾರ್ಯತಂತ್ರಗಳನ್ನು ಘೋಷಿಸಲಾಯಿತು. 1961ರಲ್ಲಿ ನಡೆದ ಆರನೇ ಮಹಾಧಿವೇಶನದ ಸಮಯದಲ್ಲಿ ಪಕ್ಷದ ಸದಸ್ಯರ ಪಟ್ಟಿಯಲ್ಲಿದ್ದ ಶೇಕಡಾ 60ರಷ್ಟು ಸದಸ್ಯರನ್ನು ಪ್ರತಿನಿಧಿಸಿ 422 ಪ್ರತಿನಿಧಿಗಳು, ಪಕ್ಷದ ಕ್ರಾಂತಿಕಾರಿ ವಿಭಾಗದ ಜೊತೆ ನಂತರು ಮತ್ತು ಏಳನೇ ಮಹಾಧಿವೇಶನದಲ್ಲಿ ಭಾಗವಹಿಸಿದರು.

ಮಹಾಧಿವೇಶನವು ಅಂಗೀಕರಿಸಿದ ಕಾರ್ಯಕ್ರಮವು ಭಾರತದ ಪರಿಸ್ಥಿತಿಗೆ ಸಂಬಂಧಪಟ್ಟಂಥ ಎಲ್ಲಾ ಪರಿಷ್ಕರಣವಾದಿ ಸೂತ್ರಗಳನ್ನು ನಿರಾಕರಿಸಿತು ಮತ್ತು ಪ್ರಭುತ್ವದ ಲಕ್ಷಣವನ್ನು ಅಥವಾ ಸ್ವರೂಪವನ್ನು ಸರಿಯಾಗಿ ವಿಶದಪಡಿಸಿತು: "ಭಾರತದ ಇಂದಿನ ಪ್ರಭುತ್ವವು ಬಂಡವಾಳಶಾಹಿ ಹಾಗೂ ಭೂಮಾಲಕ ವರ್ಗಾಡಳಿತದ ಅಂಗವಾಗಿದ್ದು, ದೊಡ್ಡ ಬಂಡವಾಳಶಾಹಿಗಳ ನೇತೃತ್ವದಲ್ಲಿ ವಿದೇಶಿ ಹಣಕಾಸು ಬಂಡವಾಳದ ಜತೆ ಹೆಚ್ಚೆಚ್ಚಾಗಿ ಸಹಕರಿಸುತ್ತಾ ಬಂಡವಾಳಶಾಹಿ ಅಭಿವೃದ್ಧಿ ಪಥವನ್ನು ಅನುಸರಿಸುತ್ತಿದೆ". ಭಾರತ ಸರ್ಕಾರವು ರಾಷ್ಟ್ರೀಯ ಬಂಡವಾಳಶಾಹಿಗಳನ್ನು ಪ್ರತಿನಿಧಿಸುತ್ತಿದೆ, ಅದನ್ನು ಬೆಂಬಲಿಸಬೇಕು ಎಂಬ ಸಿಪಿಎಸ್‌ಯುನ ನಿಲುವನ್ನು ಅದು ತಿರಸ್ಕರಿಸಿತು. ಅದೇ ಸಮಯದಲ್ಲಿ ಭಾರತದ ಸರ್ಕಾರವು ವಿದೇಶಿ ಬಂಡವಾಳಶಾಹಿಗಳ ಏಜಂಟರನ್ನು ಪ್ರತಿನಿಧಿಸುತ್ತದೆ ಎಂಬ ಚೀನಾ ಕಮ್ಯುನಿಸ್ಟ್ ಪಕ್ಷದ ನಿಲುವನ್ನೂ ಪಕ್ಷದ ಮಹಾಧಿವೇಶನವು ಒಪ್ಪಿಕೊಳ್ಳಲಿಲ್ಲ.

ನಮ್ಮ ಕ್ರಾಂತಿಯ ಮೊದಲ ಘಟ್ಟವು ಸಾಮ್ರಾಜ್ಯಶಾಹಿ ವಿರೋಧಿ, ಪಾಳೇಗಾರಿ ವಿರೋಧಿ, ಏಕಸ್ವಾಮ್ಯ ಬಂಡವಾಳ ವಿರೋಧಿ ಮತ್ತು ಪ್ರಜಾಸತ್ತಾತ್ಮಕವಾಗಿರುತ್ತದೆ ಎಂಬುದನ್ನು ಪಕ್ಷದ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮವು ಸ್ಪಷ್ಟಪಡಿಸಿತು. ಈ ಘಟ್ಟವನ್ನು ಪೂರ್ಣಗೊಳಿಸಿದ ಮೇಲೆಯೇ ಸಮಾಜವಾದಿ ಕ್ರಾಂತಿಯೆಡೆಗೆ ಅದು ಸಾಗುತ್ತದೆ. "ಇವತ್ತಿನ ಘಟ್ಟದಲ್ಲಿ ಭಾರತೀಯ ಕ್ರಾಂತಿಯ ಮೊಟ್ಟ ಮೊದಲಿನ ಕಾರ್ಯವನ್ನು ಪೂರ್ಣ ಹಾಗೂ ಆಮೂಲಾಗ್ರವಾಗಿ ಈಡೇರಿಸುವ ನಿಟ್ಟಿನಲ್ಲಿ, ಇಂದಿನ ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ಪ್ರಭುತ್ವದ ಸ್ಥಾನದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಸತ್ತಾತ್ಮಕ ಪ್ರಭುತ್ವವನ್ನು ಸ್ಥಾಪಿಸಬೇಕಾಗಿರುವುದು ಅತ್ಯಂತ ಅಗತ್ಯವಾಗಿದೆ" ಎಂದು ಕಾರ್ಯಕ್ರಮ ಹೇಳಿದೆ.

ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವ ಈ ಅತಿ ಮುಖ್ಯ ಘಟ್ಟದ ಪ್ರಧಾನ ಉದ್ದೇಶವು, ಇಂದಿನ ಬಂಡವಾಳಶಾಹಿ-ಭೂಮಾಲಕ ಸರ್ಕಾರದ ಸ್ಥಾನದಲ್ಲಿ ರೈತ-ಕಾರ್ಮಿಕರ ಸಖ್ಯತೆಯೊಂದಿಗೆ ಮತ್ತು ಕಾರ್ಮಿಕ ವರ್ಗದ ನೇತೃತ್ವದ ಆಧಾರದಲ್ಲಿ ಜನತಾ ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸುವುದೇ ಆಗಿದೆ. "ಸ್ವತಃ ತಾನೇ ಭೂಮಾಲಕತ್ವದೊಂದಿಗೆ ಸಖ್ಯತೆ ಬೆಳೆಸಿರುವ ಇವತ್ತಿನ ದೊಡ್ಡ ಬಂಡವಾಳಶಾಹಿಯನ್ನು ಪ್ರಭುತ್ವಾಧಿಕಾರದ ನೇತೃತ್ವದ ಸ್ಥಾನದಿಂದ ಕಿತ್ತೊಗೆಯದೆ, ಅದರ ಸ್ಥಾನದಲ್ಲಿ ಪ್ರಭುತ್ವದ ಮೇಲೆ ಕಾರ್ಮಿಕ ವರ್ಗದ ಒಡೆತನವನ್ನು ಸ್ಥಾಪಿಸದೆ ರೈತಾಪಿ ಜನರ ನಜವಾದ ಹಿತಾಸಕ್ತಿಯ ಆಮೂಲಾಗ್ರ ಕಾರ್ಷಿಕ ಸುಧಾರಣೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗದು ಎಂಬುದು ಸ್ಪಷ್ಟ . . .". ಮುಂದುವರಿದು, "ಎಲ್ಲಿಯತನಕ ವಿದೇಶಿ ಸಾಮ್ರಾಜ್ಯಶಾಹಿ ಬಂಡವಾಳದೊಂದಿಗೆ ಶಾಮೀಲಾಗುವ ಮತ್ತು ವರ್ಗ ಹೊಂದಾಣಿಕೆ ಮಾಡಿಕೊಳ್ಳುವ ಇಂದಿನ ಸರ್ಕಾರದ ಆಳ್ವಿಕೆ ಇರುತ್ತದೆಯೋ ಅಲ್ಲಿಯವರೆಗೆ ನಮ್ಮ ಆರ್ಥಿಕ ವ್ಯವಸ್ಥೆಯು ವಿದೇಶಿ ಏಕಸ್ವಾಮ್ಯ ಬಂಡವಾಳ ಮತ್ತು ಅದರ ಲೂಟಿಕೋರ ಶೋಷಣೆಯಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ ಎನ್ನುವುದೂ ಕೂಡ ಅಷ್ಟೇ ಸ್ಪಷ್ಟ. ದೇಶದಿಂದ ಈ ವಿದೇಶಿ ಏಕಸ್ವಾಮ್ಯ ಬಂಡವಾಳವನ್ನು ಬೇರುಸಹಿತ ಕಿತ್ತುಹಾಕಲು ಮತ್ತು ತಡಮಾಡದೆ ಉಚ್ಚಾಟಿಸಲು ಮತ್ತು ದೃಢವಾದ ಹಾಗೂ ಸುಭದ್ರವಾದ ಬುನಾದಿಯ ಮೇಲೆ ನಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಲು, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವ ರಂಗದ ಸರ್ಕಾರವನ್ನು ಭದ್ರವಾಗಿ ನೆಲೆಯೂರಿಸುವುದಲ್ಲದೇ ಬೇರೆ ಖಾತರಿ ಇಲ್ಲ. . . . ಜನವಿರೋಧಿ ನೀತಿಗಳ ಇಂದಿನ ಸರ್ಕಾರವನ್ನು ತಿರಸ್ಕರಿಸದೆ ಮತ್ತು ನಿರ್ಣಾಯಕವಾಗಿ ಸೋಲಿಸದೆ ಹಾಗೂ ಅದರ ಸ್ಥಾನದಲ್ಲಿ ಪರ್ಯಾಯ ಪ್ರಜಾಸತ್ತಾತ್ಮಕ ನೀತಿಗಳೊಂದಿಗೆ ಪರ್ಯಾಯ ಸರ್ಕಾರವನ್ನು ಸ್ಥಾಪಿಸದೆ, ಚಾರಿತ್ರಿಕವಾಗಿ ಹಳಸಲಾದ ಯಾತನಾಮಯ ಮಾರ್ಗದ ಬಂಡವಾಳಶಾಹಿ ಅಭಿವೃದ್ಧಿಯಿಂದ ನಮ್ಮ ಜನರು ಬಿಡುಗಡೆ ಹೊಂದಲು ಸಾಧ್ಯವಿಲ್ಲ ಮಾತ್ರವಲ್ಲ, ಅಂತಹ ಅಭಿವೃದ್ಧಿ ಪಥದ ಪರಿಣಾಮದಿಂದ ಅನಿವಾರ್ಯವಾಗಿ ಬೆಳೆಯುತ್ತಿರುವ ಏಕಸ್ವಾಮ್ಯ ಬಂಡವಾಳದ ಹಿಡಿತದಿಂದ ನಮ್ಮ ಜನರ ವಿಮೋಚನೆ ಸಾಧ್ಯವಿಲ್ಲ ಕೂಡ".



ಪಿ. ಸುಂದರಯ್ಯ ಏಳನೇ ಮಹಾಧಿವೇಶನದಲ್ಲಿ

ಕ್ರಾಂತಿಕಾರಿ ಚಳುವಳಿಯ ಪ್ರಧಾನ ಕಾರ್ಯವು ಜನತಾ ಪ್ರಜಾಪ್ರಭುತ್ವ ರಂಗ(ಪಿಡಿಎಫ್)ವನ್ನು ಕಟ್ಟಿ ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ಸರ್ಕಾರವನ್ನು ಕಿತ್ತುಹಾಕುವುದೇ ಆಗಿದೆ. ಅಂತಹ ಜನತಾ ಪ್ರಜಾಪ್ರಭುತ್ವ ರಂಗವನ್ನು ಯಶಸ್ವಿಯಾಗಿ ಕಟ್ಟಲು ಮತ್ತು ಯಶಸ್ವಿ ಕ್ರಾಂತಿಯತ್ತ ಸಾಗಲು ಸಾಧ್ಯವಾಗುವುದು ಕಾರ್ಮಿಕ ವರ್ಗ ಮತ್ತದರ ರಾಜಕೀಯ ಪಕ್ಷ, ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಅಡಿಯಲ್ಲಿ ಮಾತ್ರ ಎಂದು ಕಾರ್ಯಕ್ರಮ ವಿಶದಪಡಿಸಿದೆ. ಈ ರಂಗದೊಳಗಡೆ ಕಾರ್ಮಿಕ ವರ್ಗ ಮತ್ತು ರೈತಾಪಿಗಳ ಸಖ್ಯತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. "ಕಾರ್ಮಿಕ ವರ್ಗ ಮತ್ತು ರೈತಾಪಿಗಳ ಸದೃಢವಾದ ಸಖ್ಯತೆಯೇ ಪಿಡಿಎಫ್‌ನ ಜೀವಾಳ ಮತ್ತು ಆಧಾರವಾಗಿದೆ. ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ, ದೂರಗಾಮಿ ಪ್ರಜಾಸತ್ತಾತ್ಮಕ ಪರಿವರ್ತನೆ ಸಾಧಿಸುವಲ್ಲಿ ಮತ್ತು ಸರ್ವತೋಮುಖ ಸಾಮಾಜಿಕ ಪ್ರಗತಿ ಖಾತ್ರಿಪಡಿಸುವಲ್ಲಿ ಈ ಸಖ್ಯತೆಯೇ ಅತ್ಯಂತ ಮಹತ್ವದ ಶಕ್ತಿಯಾಗಿರುತ್ತದೆ".

ಕಾರ್ಮಿಕ-ರೈತ ಸಖ್ಯತೆಯ ಈ ಜೀವಾಳದ ಸುತ್ತ ಅದರ ಆದ್ಯ ಮಿತ್ರರಾದ ಕೃಷಿ ಕೂಲಿಕಾರರು ಮತ್ತು ಬಡ ರೈತರನ್ನು ಅಣಿನೆರೆಸಲಾಗುತ್ತದೆ. ಮಧ್ಯಮ ರೈತ ಒಬ್ಬ ದೃಢ ಮಿತ್ರನಾಗಿರುತ್ತಾನೆ, ಹಾಗೆಯೇ ಈ ರಂಗದಲ್ಲಿ ಶ್ರೀಮಂತ ರೈತನನ್ನು ಕೂಡ ಕರೆತಂದು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಕ್ರಾಂತಿಕಾರಿ ಹೋರಾಟದಲ್ಲಿ ನಗರ ನಿವಾಸಿಗಳು ಮತ್ತಿತರ ಪುಟ್ಟ-ಬಂಡವಾಳಶಾಹಿಗಳು ಕಾರ್ಮಿಕ ವರ್ಗದ ಮಿತ್ರರಾಗಿರುತ್ತಾರೆ. ಈ ಕಾರ್ಮಿಕ-ರೈತ ಸಖ್ಯತೆಯ ಸಾಮರ್ಥ್ಯದ ಮೇಲೆ ಎಲ್ಲಾ ಚಂಚಲ ಮನಸ್ಸಿನ ವರ್ಗಗಳನ್ನು ಈ ರಂಗದೊಳಗೆ ಸೆಳೆಯಲಾಗುತ್ತದೆ ಮತ್ತು ಅದರೊಳಗೆ ಸ್ಥಿರಗೊಳಿಸಲಾಗುತ್ತದೆ. "...ಪಾಳೇಗಾರಿ-ವಿರೋಧಿ, ಸಾಮ್ರಾಜ್ಯಶಾಹಿ-ವಿರೋಧಿ ಕಾರ್ಯಭಾರಗಳನ್ನು ಕಾರ್ಯಗತ ಮಾಡುವಾಗ ಎಷ್ಟರಮಟ್ಟಿಗೆ ರಾಷ್ಟ್ರೀಯ ಬಂಡವಾಳಶಾಹಿಗಳ ವಿವಿಧ ವಿಭಾಗಗಳು ಭಾಗವಹಿಸುತ್ತಾರೆ ಎನ್ನುವುದು ಕಾರ್ಮಿಕ ಮತ್ತು ರೈತರ ಸಖ್ಯತೆಯ ಶಕ್ತಿ ಮತ್ತು ಸ್ಥಿರತೆಯ ಮೇಲೆ ಅವಲಂಬಿತವಾಗಿರುತ್ತದೆ, ಅದು ಕಡಿಮೆ ಪ್ರಮಾಣದ್ದೇನಲ್ಲ. ಸ್ಥೂಲವಾಗಿ, ವಿಶಾಲ ಜನತಾ ಪ್ರಜಾಪ್ರಭುತ್ವ ರಂಗ ಕಟ್ಟಿ ಕ್ರಾಂತಿಯನ್ನು ವಿಜಯದ ಕಡೆ ಕೊಂಡೊಯ್ಯುವಲ್ಲಿನ ಯಶಸ್ಸು ಅಥವಾ ವೈಫಲ್ಯವು ಅಚಲವಾದ ಕಾರ್ಮಿಕ-ರೈತ ಸಖ್ಯತೆಯನ್ನು ರೂಪಿಸುವುದರ ಮೇಲೆ ನಂತಿದೆ".

ಈ ಜನತಾ ಪ್ರಜಾಪ್ರಭುತ್ವ ರಂಗದ ಮೂಲಕ ಪ್ರಜಾಪ್ರಭುತ್ವ ಕ್ರಾಂತಿಯು ಎಲ್ಲಾ ಕ್ರಾಂತಿಕಾರಿ ಶಕ್ತಿಗಳನ್ನು, ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಹಾಗೂ ಪಾಳೇಗಾರಿ-ವಿರೋಧಿ ಶಕ್ತಿಗಳನ್ನು ಅಣಿನೆರೆಸಲು ಮತ್ತು ಒಟ್ಟಿಗೆ ಬೆಸೆಯಲು ಪಕ್ಷವು ಉದ್ದೇಶಿಸಿದೆ. ಜನರ ಹೋರಾಟಗಳಿಂದ ಈ ರಂಗವನ್ನು ಸೃಷ್ಟಿಸಲಾಗುತ್ತದೆ ಮತ್ತು ಕಟ್ಟಲಾಗುತ್ತದೆ. ರಂಗದ ಕಾರ್ಯಕ್ರಮದ ಸುತ್ತ ನಡೆಯುವ ಭಾರಿ ಸಾಮೂಹಿಕ ಚಳುವಳಿಗಳ ಮೂಲಕ ಈ ರಂಗವು ಅಸ್ತಿತ್ವಕ್ಕೆ ಬರುತ್ತದೆ ಎಂದು ಪಕ್ಷದ ಕಾರ್ಯಕ್ರಮವು ಘೋಷಿಸಿತು..

ಈ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮವು ಸಿಪಿಐ ಅವರು ಸಂಘಟಿಸಿದ್ದ ಮಹಾಧಿವೇಶನದ ಕಾರ್ಯಕ್ರಮಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿತ್ತು. ಪ್ರಭುತ್ವದ ಸ್ವರೂಪವನ್ನು ಮತ್ತು ಪ್ರಜಾಪ್ರಭುತ್ವ ಕ್ರಾಂತಿಯ ವರ್ಗ ಸಖ್ಯತೆಯ ನಾಯಕತ್ವವನ್ನು ನಿರೂಪಿಸುವಲ್ಲಿ ಮೂಲ ಭಿನ್ನಾಭಿಪ್ರಾಯ ಇದೆ.

ಸಿಪಿಐ ತನ್ನ ಕಾರ್ಯಕ್ರಮದಲ್ಲಿ ಭಾರತೀಯ ಪ್ರಭುತ್ವದ ಸ್ವರೂಪವನ್ನು ಬೇರೆ ರೀತಿಯಲ್ಲಿ

ಪುಟ 14 ನೋಡಿ

ಪಕ್ಷದ ಏಳನೇ ಮಹಾಧಿವೇಶನ ಆರಿಸಿದ ಪೊಲಿಟ್‌ಬ್ಯುರೊ ಸದಸ್ಯರು



ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿಯಿಂದ.....

ಪುಟ 8 ರಿಂದ

ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನಷ್ಟವಾಗಲಿದೆ. ಐಎಲ್ಒ(ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ)ಯ ಪ್ರಕಾರ, ಜಾಗತಿಕ ಮಾನವ ಗಂಟೆಗಳ ಇಳಿಕೆಯು 2019ರ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ 2020ರ ಎರಡನೇ ತ್ರೈಮಾಸಿಕದಲ್ಲಿ 40 ಕೋಟಿ ಪೂರ್ಣಕಾಲದ ಉದ್ಯೋಗ ನಷ್ಟಕ್ಕೆ ಸಮನಾಗಿದೆ. ಇದು ಮೊದಲ ತ್ರೈಮಾಸಿಕದ 15.5 ಕೋಟಿ ಉದ್ಯೋಗ ನಷ್ಟದ ಸಂಖ್ಯೆಗೆ ಹೋಲಿಸಿದರೆ ಅಪಾಯಕಾರಿ ಏರಿಕೆಯಾಗಿದೆ.

ಸಮಾಜವಾದಿ ಚೀನಾ

2020ರ ಅದೇ ಎರಡನೇ ತ್ರೈಮಾಸಿಕ(ಏಪ್ರಿಲ್–ಜೂನ್)ದಲ್ಲಿ, ಜಗತ್ತಿನ ಇತರ ಪ್ರಮುಖ ಅರ್ಥವ್ಯವಸ್ಥೆಗಳು ತಮ್ಮ ಜಿಡಿಪಿಯಲ್ಲಿ ಗಣನೀಯವಾದ ಕುಸಿತವನ್ನು ಕಾಣುತ್ತಿದ್ದಾಗ, ಭಾರತವು (–) 23.9ಶೇ. ದಾಖಲಿಸಿದ ಸಂದರ್ಭದಲ್ಲಿ, ಚೀನಾ ಜನತಾ ಗಣತಂತ್ರ ಮಾತ್ರವೇ ಧನಾತ್ಮಕ ಬೆಳವಣಿಗೆಯಾದ ಶೇಕಡಾ +3.2ರಷ್ಟು ದಾಖಲಿಸಿತು. ಅದರ ಮುಂದಿನ ತ್ರೈಮಾಸಿಕದಲ್ಲಿ, ಬಂಡವಾಳಶಾಹಿ ಜಗತ್ತು ಇನ್ನೂ ಹಿಂಜರಿತದಲ್ಲೇ ತತ್ತರಿಸುತ್ತಿದ್ದಾಗ, ಚೀನಾದ ಆರ್ಥಿಕತೆಯು ಶೇಕಡಾ 4.9 ರಷ್ಟು ಬೆಳೆಯಿತು. ಐಎಂಎಫ್‌ನ ಅಂದಾಜಿನ ಪ್ರಕಾರ 2020ರಲ್ಲಿ ಚೀನಾವು ಶೇಕಡಾ 6.1 ರಷ್ಟು ನೈಜ ಜಿಡಿಪಿಯನ್ನು ದಾಖಲಿಸಿದರೆ ಇತರ ಪ್ರಮುಖ ಆರ್ಥಿಕತೆಗಳು ಶೇಕಡಾ (–) 5.9 ರಷ್ಟು ನೈಜ ಜಿಡಿಪಿ ದಾಖಲಿಸಬಹುದು.

ನವ–ಉದಾರವಾದದ ದಿವಾಳಿತನ

ನವ–ಉದಾರವಾದ ಮತ್ತು ಅದರ ಆರ್ಥಿಕ ಸುಧಾರಣೆಯ ಹಾದಿಯು ಲಾಭಗಳನ್ನು ಅತ್ಯಧಿಕ ಪ್ರಮಾಣಕ್ಕೆ ಕೊಂಡೊಯ್ಯುವ ಗುರಿಯನ್ನು ಹೊಂದಿತ್ತು ಮತ್ತು ಅದು ಜಗತ್ತಿನ ಎಲ್ಲೆಡೆಯ ಬಹುಪಾಲು ಜನರ ಶೋಷಣೆಯನ್ನು ತೀವ್ರವಾಗಿಸಿತು. ಅದು ಆರ್ಥಿಕ ಅಸಮಾನತೆಗಳನ್ನು ಹೆಚ್ಚಿಸಿತು, ಕೊವಿಡ್ ಮಹಾರೋಗ ಹೆಚ್ಚಿದಂತೆಲ್ಲಾ ಹಾಗೂ ಆರ್ಥಿಕ ಹಿಂಜರಿತ ಆಳವಾದಂತೆಲ್ಲಾ ಜಾಗತಿಕ ಬಿಲಿಯಾಧಿಪತಿಗಳ ಲಾಭಗಳು ಇನ್ನೂ ಕೊಬ್ಬಿದವು. ತತ್ಪರಿಣಾಮವಾಗಿ ಅದು ಬಹುಪಾಲು ಜನರ ಕೈಯಲ್ಲಿನ ಕೊಳ್ಳುವ ಶಕ್ತಿಯನ್ನು ಏಕಾಏಕಿ ತೀವ್ರವಾಗಿ ಇಳಿಸಿತು, ಅದು, ಪುನಃ, ಬೇಡಿಕೆಯಲ್ಲಿ ಭಾರಿ ಕುಸಿತಕ್ಕೆ ಕಾರಣವಾಯಿತು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಉತ್ಪಾದನೆಯಾಗಿದ್ದು ಮಾರಾಟವಾಗದಿದ್ದರೆ, ಆಗ ಲಾಭವೂ ಇಲ್ಲ ಮತ್ತು ಬೆಳವಣಿಗೆಯೂ ಆಗುವುದಿಲ್ಲ. ಬೆಳವಣಿಗೆ ಇಲ್ಲದಿದ್ದಾಗ, ಶೋಷಣೆಯನ್ನು ಹೆಚ್ಚು ಮಾಡಿ ಜನರನ್ನು ಹಿಂಡಿಹಿಪ್ಪೆ ಮಾಡುವುದರ ಮೂಲಕ ಮಾತ್ರವೇ ಲಾಭವನ್ನು ಹೆಚ್ಚಿಸಿಕೊಳ್ಳಬಹುದು. ಈಗ ಜಾಗತಿಕವಾಗಿ ಆಗುತ್ತಿರುವುದು ಇದೇ. ಉದ್ಯೋಗವನ್ನು ಮತ್ತು ಬೇಡಿಕೆಯನ್ನು ಹೆಚ್ಚಿಸುವ ಸಾರ್ವಜನಿಕ ವೆಚ್ಚದಲ್ಲಿನ ಭಾರಿ ಏರಿಕೆಯನ್ನು ನವ–ಉದಾರವಾದವು ತಡೆಹಿಡಿಯುತ್ತದೆ, ಏಕೆಂದರೆ ಅದು ಲಾಭಗಳ ದರಗಳ ಮೇಲೆ ದುಷ್ಪರಿಣಾಮವನ್ನು ಬೀರುಬಹುದೆಂದು ಭಾವಿಸುತ್ತದೆ. ಆದಕಾರಣ, ಎಲ್ಲಾ ಉತ್ತೇಜನಾ ಪ್ಯಾಕೇಜುಗಳ ಒತ್ತಡವು ಖಾಸಗಿ ಹೂಡಿಕೆಗಾಗಿ ಹಣ ಲಭ್ಯವಾಗುವಂತೆ ಮಾಡುವುದೇ ವಿನಃ ಸಾರ್ವಜನಿಕ ಹೂಡಿಕೆಗಳಲ್ಲಿ ಏರಿಕೆ ಮಾಡಲು ಅಲ್ಲ. ಇದು ಖಂಡಿತಾ ಕೆಲಸ ಮಾಡುವುದಿಲ್ಲ, ಏಕೆಂದರೆ ಈ ಮೇಲೆ ಹೇಳಿದಂತೆ, 'ಖಾಸಗಿ ಹೂಡಿಕೆಯಿಂದ ಉತ್ಪಾದನೆಯಾಗಿದ್ದು ಮಾರಾಟವಾಗಬೇಕು, ಆದರೆ ಜಾಗತಿಕವಾಗಿ ಮತ್ತು ಆಂತರಿಕವಾಗಿ ಮಾರುಕಟ್ಟೆ ಕುಗ್ಗುತ್ತಿದೆ.

ಆದ್ದರಿಂದ, ನವ–ಉದಾರವಾದವು ಈ ಆಳವಾಗುತ್ತಿರುವ ಆರ್ಥಿಕ ಹಿಂಜರಿತಕ್ಕೆ ಯಾವುದೇ ಪರಿಹಾರ ಒದಗಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ, ಅದು ಅದನ್ನು ಇನ್ನೂ ಆಳವಾಗಿಸುತ್ತದೆ. ಇದೇ ನವ–ಉದಾರವಾದದ ದಿವಾಳಿತನ.

ರಾಜಕೀಯ ಬಲಪಂಥದತ್ತ ಪಲ್ಲಟ

ದುಡಿಯುವ ಜನರನ್ನು ಹಿಂಡಿಹಿಪ್ಪೆ ಮಾಡುವ ಕಾರ್ಯ ಯಶಸ್ವಿಯಾಗಬೇಕೆಂದರೆ, ಶೋಷಣೆಯನ್ನು ತೀವ್ರಗೊಳಿಸಲು ಅನುಕೂಲವಾಗುವಂತೆ ಕರಾಳ, ಸರ್ವಾಧಿಕಾರಶಾಹಿ, ಫ್ಯಾಸಿಸ್ಟ್ ತೆರನ ವ್ಯವಸ್ಥೆಯನ್ನು ಹೇರುವಂತಹ ರಾಜಕೀಯ ಆಡಳಿತ ಕ್ರಮಗಳನ್ನು ಹೊಂದಬೇಕಾದ ಅಗತ್ಯವಿದೆ.

ತೀವ್ರವಾಗುತ್ತಿರುವ ಶೋಷಣೆ ಮತ್ತು ಹೇರಲ್ಪಡುತ್ತಿರುವ ಕಷ್ಟಗಳ ವಿರುದ್ಧ ಎದ್ದುಬರುತ್ತಿರುವ ಜನಗಳ ಪ್ರತಿಭಟನೆಗಳನ್ನು ವಿಚ್ಛಿದ್ರಕಾರಿ ಹಾದಿಗಳತ್ತ ತಿರುಗಿಸಲು ಇದು ಅವರಿಗೆ ಅವಶ್ಯಕ. ಭಾವನಾತ್ಮಕ, ಜನರ ಮನಸ್ಸನ್ನು ರಂಜಿಸುವ ವಿಷಯಗಳ ಬಳಕೆಯು ವಿಚ್ಛಿದ್ರಕಾರಿ ಪ್ರವೃತ್ತಿಗಳನ್ನು –ಜನಾಂಗವಾದ ಮತ್ತು ವಿದೇಶೀಯರ ಬಗ್ಗೆ ದ್ವೇಷ (ಅಮೆರಿಕದಲ್ಲಿಯಂತೆ), ಧಾರ್ಮಿಕ ಪಂಥವಾದ(ಭಾರತ ಮತ್ತು ಟರ್ಕಿಯಲ್ಲಿರುವಂತೆ), ಅಥವಾ, ನೇರ ನೇರಾ ಫ್ಯಾಸಿಸ್ಟ್ ತೆರನ ಆಳ್ವಿಕೆಗಳು(ಬ್ರೆಜಿಲ್‌ನಂತೆ)– ದ್ವೇಷ ಹಾಗೂ ಹಿಂಸೆಯ ಪ್ರಚಾರದ ಮೂಲಕ ಗಟ್ಟಿಗೊಳಿಸುತ್ತದೆ.

ಸದ್ಯದ ಜಾಗತಿಕ ಬಲಪಂಥೀಯ ಪಲ್ಲಟವು ಈ ಎರಡೂ ಅಂಶಗಳ ಸಂಯೋಜನೆ – ವಿಚ್ಛಿದ್ರಕಾರಿ ಭಾವನಾತ್ಮಕ ವಿಷಯಗಳನ್ನು ಬಡಿದೆಬ್ಬಿಸುವುದನ್ನೇ ಆಧರಿಸಿರುವ ನಿರಂಕುಶ ಸರ್ವಾಧಿಕಾರಶಾಹೀ ಆಡಳಿತಗಳು.

ಇಂತಹ ರಾಜಕೀಯ ಬಲಪಂಥೀಯ ಪಲ್ಲಟವೆಂದರೆ ಕಾರ್ಮಿಕ ವರ್ಗದ ವಿರುದ್ಧ ಒಂದು ದುಷ್ಟ ವರ್ಗ ದಾಳಿಯನ್ನು ಹರಿಯ ಬಿಡುವುದೇ ಆಗಿದೆ.

ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿ

ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಈ ಆಕ್ರಮಣಗಳನ್ನು ಎದುರಿಸುವ ನಿಟ್ಟಿನಲ್ಲಿ ಅಕ್ಟೋಬರ್ ಕ್ರಾಂತಿ ಮತ್ತು ಅದರ ಸಾಧನೆಗಳು ಜಗತ್ತಿನಾದ್ಯಂತ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿ ತುಂಬುತ್ತಲೇ ಇವೆ. ಇದು ಹಲವಾರು ದೇಶಗಳಲ್ಲಿ ಈಗ ನಡೆಯುತ್ತಿರುವ ಹೋರಾಟಗಳಿಗೆ ಶಕ್ತಿ ತುಂಬುತ್ತದೆ. ನವ–ಉದಾರವಾದಿ ಬಂಡವಾಳಶಾಹಿಯ ಬಳಿ ಜನರ ಕಷ್ಟಕೋಟಲೆಗಳನ್ನು ಪರಿಹರಿಸುವ ಯಾವುದೇ ಪರಿಹಾರವಿಲ್ಲ, ಬದಲು ಆ ಕಷ್ಟಕೋಟಲೆಗಳನ್ನು ತೀವ್ರಗೊಳಿಸುತ್ತದೆ. ಯಾವುದೇ ಪರಿಹಾರವನ್ನು ಬಂಡವಾಳವಾದದ ಹೊರಗೆ ಮಾತ್ರವೇ ಕಂಡುಕೊಳ್ಳಬಹುದು, ಅಂದರೆ ಅಂದರೆ ಸಮಾಜವಾದದಲ್ಲಿ.

ಸಮಾಜವಾದವೇ ಪರ್ಯಾಯ !

ವರ್ಗ ಐಕ್ಯತೆಗಾಗಿ ಹೋರಾಟದ 50 ವರ್ಷಗಳು

ಪುಟ 10 ರಿಂದ

ಮುಂತಾದ ಕಾರ್ಮಿಕ–ವಿರೋಧಿ ಕ್ರಮಗಳ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಂಡಿತು. ಇಂತಹ ಹೋರಾಟಗಳ ಎದುರು ಸರಕಾರದ ಬೆಂಬಲಕ್ಕೆ ನಿಂತಿದ್ದ ಎನ್‌ಸಿಟಿಯು ಮೂರೇ ವರ್ಷಗಳಲ್ಲಿ ಕುಸಿಯಿತು.

1974ರಲ್ಲಿ ನಡೆದ 20ದಿನಗಳ ರೈಲ್ವೆ ಮುಷ್ಕರ ಸಿಐಟಿಯು ಸ್ಥಾಪನೆಯಾದ ಕೂಡಲೆ ನಡೆದ ಮಹತ್ವದ ಐಕ್ಯ ಹೋರಾಟ. ಸಿಐಟಿಯು ಪ್ರಯತ್ನದಿಂದ ರಚನೆಗೊಂಡ 'ರೈಲ್ವೆ ನೌಕರರ ರಾಷ್ಟ್ರೀಯ ಸಮನ್ವಯ ಸಮಿತಿ'(ಎನ್‌ಸಿಸಿಆರ್‌ಎಸ್) ಈ ಹೋರಾಟಕ್ಕೆ ನೇತೃತ್ವ ನೀಡಿತು.

ಎರಡನೇ ಗಮನಾರ್ಹ ಹೋರಾಟ ಎಂದರೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬಂದ ಜನತಾ ಪಾರ್ಟಿ ಕಾಂಗ್ರೆಸ್ ದಾರಿಯಲ್ಲಿ ಸಾಗಿ ತಂದ 1978ರ 'ಕೈಗಾರಿಕಾ ಸಂಬಂಧಗಳ ಮಸೂದೆ' . ಐಕ್ಯ ಹೋರಾಟದಿಂದ ಕೊನೆಗೂ ಈ ಮಸೂದೆಯನ್ನು ಕೈಬಿಡುವಂತೆ ಮಾಡುವಲ್ಲಿ ಕಾರ್ಮಿಕ ಚಳುವಳಿಗೆ ಯಶಸ್ಸು ದೊರೆಯಿತು. ಈ ಪ್ರಕ್ರಿಯೆಯಲ್ಲಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರ ಸಮಿತಿ(ಎನ್‌ಸಿಸಿ) ರೂಪುಗೊಂಡಿತು. ಇದರಲ್ಲಿ ಸುಮಾರಾಗಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ಒಕ್ಕೂಟಗಳು ಇದ್ದವು. ಕಾಂಗ್ರೆಸ್(ಐ) ಆಳ್ವಿಕೆಯಲ್ಲಿದ್ದಾಗ ಐಎನ್‌ಟಿಯುಸಿ ಮಾತ್ರ ಇದರಲ್ಲಿರಲಿಲ್ಲ.

ಸಿಐಟಿಯು ಮುತುವರ್ಜಿಯಿಂದ ನಡೆದ ಮೂರನೇ ಐಕ್ಯ ಹೋರಾಟವೆಂದರೆ ಜನವರಿ 19, 1982ರಂದು ನಡೆದ ಐತಿಹಾಸಿಕ ಸಾರ್ವತ್ರಿಕ ಮುಷ್ಕರ. ಇದರಲ್ಲಿ ರೈತರು ಮತ್ತು ಕೃಷಿ ಕೂಲಿಕಾರರ ಬೇಡಿಕೆಗಳನ್ನೂ ಎತ್ತಲಾಗಿತ್ತು.

ಸಾರ್ವಜನಿಕ ವಲಯದ ಕಾರ್ಮಿಕರ ಐಕ್ಯ ವೇದಿಕೆಯಾಗಿ ಸಿಪಿಎಸ್‌ಟಿಯು ರಚನೆಯಲ್ಲೂ ಸಿಐಟಿಯು ಮುಂಚೂಣಿ ಪಾತ್ರ ವಹಿಸಿತು.

1991ರಲ್ಲಿ ನವ–ಉದಾರವಾದಿ 'ಸುಧಾರಣೆ'ಗಳು ಆರಂಭವಾದಾಗ ಇದರ ವಿರುದ್ಧ ಸಮಸ್ತ ಕಾರ್ಮಿಕ ಆಂದೋಲನವನ್ನು ಒಂದುಗೂಡಿಸುವ ಮುತುವರ್ಜಿಯನ್ನು ಸಿಐಟಿಯು ವಹಿಸಿತು. ಇದರ ಫಲವಾಗಿ 2009ರಿಂದ 2013ರ ನಡುವೆ ಮೊತ್ತ ಮೊದಲ ಬಾರಿಗೆ ಐಎನ್‌ಟಿಯುಸಿ ಮತ್ತು ಬಿಎಂಎಸ್ ಕೂಡ ಸೇರಿದಂತೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಎಲ್ಲ ಅಖಿಲ ಭಾರತ ಫೆಡರೇಷನ್‌ಗಳು ಭಾಗವಹಿಸಿದ್ದ ಮೂರು ಸಾರ್ವತ್ರಿಕ ಮುಷ್ಕರಗಳು ನಡೆದವು. ಬಿಜೆಪಿ ಸರಕಾರ ಬಂದ ಮೇಲೆ ಬಿಎಂಎಸ್ ಹೊರ ಹೋದರೂ ಐಕ್ಯ ಹೋರಾಟಗಳು ಮುಂದುವರೆದಿವೆ. ಇದುವರೆಗೆ ಒಟ್ಟು 19 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಕಳೆದ ವರ್ಷ ಜನವರಿ 8–9ರಂದು ನಡೆದ ಸಾರ್ವತ್ರಿಕ ಮುಷ್ಕರದಲ್ಲಿ 20 ಕೋಟಿಗೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.

ಈಗ ನವಂಬರ್ 26 ರಂದು 20ನೇ ಸಾರ್ವತ್ರಿಕ ಮುಷ್ಕರ ನಡೆಸಲು ಭರದ ಸಿದ್ಧತೆ ನಡೆದಿದೆ.

ಇವಲ್ಲದೆ ಸಿಯುಟಿಯು ಕಲ್ಲಿದ್ದಲು, ಉಕ್ಕು ಮುಂತಾದ ರಂಗಗಳಲ್ಲಿ ಬಿಲಿಷ್ಟ ಜಂಟಿ ಹೋರಾಟಗಳನ್ನು ಕಟ್ಟಿ ಬೆಳೆಸಲು ಮುತುವರ್ಜಿ ವಹಿಸಿತು.

ನವ–ಉದಾರವಾದಿ ಆಳ್ವಿಕೆಯಲ್ಲಿ ಅಸಂಘಟಿತ ವಲಯದ ವಿಸ್ತರಣೆಯಾಗಲಾರಂಭಿಸಿದಾಗ, ಸಿಐಟಿಯು ಇಡೀ ವರ್ಗವನ್ನು ಒಗ್ಗೂಡಿಸುವ ತನ್ನ ಕೆಲಸದ ಭಾಗವಾಗಿ ಅಸಂಘಟಿತ ಕಾರ್ಮಿಕರ ಸಂಘಟನೆಯನ್ನು ಕೈಗೆತ್ತಿಕೊಂಡಿತು. ಇಂದು ಸಿಐಟಿಯುನ 70ಶೇ. ಸದಸ್ಯತ್ವ ಅಸಂಘಟಿತ ವಲಯದ ಕಾರ್ಮಿಕರದ್ದು.

ವರ್ಗ ಐಕ್ಯತೆಯನ್ನು ಕಟ್ಟುವುದರೊಂದಿಗೆ ಸಿಐಟಿಯು, ದೇಶದ ಸಂಪತ್ತು ಉತ್ಪಾದಿಸುವ ಇತರ ಮೂಲ ವರ್ಗಗಳನ್ನು ಜಂಟಿ ಹೋರಾಟಗಳಿಗೆ ತರುವುದಕ್ಕೂ ಮಹತ್ವ ನೀಡಿತು. ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಸಾಮಾನ್ಯ ಬೇಡಿಕೆಗಳ ಮೇಲೆ ಪ್ರಚಾರ–ಪ್ರಕ್ಷೋಭೆಯನ್ನು ಅದು ನಡೆಸುತ್ತ ಬಂದಿದೆ. ಇದರಲ್ಲಿ ಸಪ್ಟಂಬರ್ 5, 2018ರ 'ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಇಡೀ ಸಮಾಜದಲ್ಲಿ ಹೊಸ ಸ್ಫೂರ್ತಿಯನ್ನು ತುಂಬಿದ ಕಾರ್ಯಕ್ರಮ.

ಸಂಗ್ರಹ: ಕೆ.ವಿ.

ಆಧಾರ:citucentre.org/documents/citu-50

ಬೈಡನ್ ಅಮೆರಿಕ ಅಧ್ಯಕ್ಷ ಪಟ್ಟದತ್ತ......

ಪುಟ 9 ರಿಂದ

ಆದ್ದರಿಂದ ಅವರು ಈ ರಾಜ್ಯಗಳಲ್ಲಿ ಕೋರ್ಟಿಗೆ ಹೋಗುವ ಮೂಲಕ 'ಮತ ಎಣಿಕೆ ನಿಲ್ಲಿಸುವ' ತಂತ್ರ ಹೂಡಿದ್ದಾರೆ. ಇದಕ್ಕೆ ನ.3 ರ ನಂತರ ತಲುಪಿದ (ನಿಯಮಗಳ ಪ್ರಕಾರ ನ.3ಕ್ಕಿಂತ ಮೊದಲಿನ ಪೋಸ್ಟ್ ಸ್ಟಾಂಪ್ ಇದ್ದರೆ ಸಾಕು) ಪೋಸ್ಟಲ್ ಮತಗಳನ್ನು ಎಣಿಸಬಾರದು. ಪೋಸ್ಟಲ್ ಮತಗಳನ್ನು ರಿಪಬ್ಲಿಕನ್ ಪ್ರತಿನಿಧಿಗಳಿಲ್ಲದೆ ಎಣಿಸಲಾಗುತ್ತಿದೆ, ಪೋಸ್ಟಲ್ ಮತಗಳನ್ನು ಮತದಾರರ ಗುರುತು ಖಾತರಿಗೊಳಿಸದೆ ಹಂಚಲಾಗಿದೆ. ಇನ್ನೂ ಹಲವು ರೀತಿಯ ವ್ಯಾಪಕ ಅಕ್ರಮ ನಡೆದಿದೆ ಎಂದು ಆಪಾದಿಸುತ್ತಾ ಗದ್ದಲ ಎಬ್ಬಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ ಇವ್ಯಾವುದಕ್ಕೂ ಪುರಾವೆ ಒದಗಿಸಿಲ್ಲ. ಇದಲ್ಲದೆ ಬೈಡನ್ ಸ್ಪಷ್ಟ ಮುನ್ನಡೆ ಪಡೆದಿರುವ ವಿಸ್ಕೊನ್ಸಿನ್ ಮತ್ತು ಮಿಷಿಗನ್ ಗಳಲ್ಲಿ ಟ್ರಂಪ್ ಬೆಂಬಲಿಗರು ಮರುಎಣಿಕೆಗೆ ಒತ್ತಾಯಿಸಿದ್ದಾರೆ. ನಿಯಮಗಳ ಪ್ರಕಾರ, ಪೂರ್ಣ ಎಣಿಕೆಯ ನಂತರ ಮತ ಅಂತರ ಶೇ.1ಕ್ಕಿಂತ ಕಡಿಮೆ ಇದ್ದರೆ ಮತ್ತು ಅಕ್ರಮಗಳ ಕುರಿತು ಪುರಾವೆ ಇದ್ದರೆ ಮಾತ್ರ ಮರುಎಣಿಕೆಗೆ ಕೋರಿಕೆ ಸಲ್ಲಿಸಬಹುದು. ಮಿಷಿಗನ್, ಜಾರ್ಜಿಯ ಮತ್ತು ವಿಸ್ಕೊನ್ಸಿನ್ ರಾಜ್ಯಗಳಲ್ಲಿ ಟ್ರಂಪ್ ಬೆಂಬಲಿಗರ ಕೆಲವು ದಾವೆಗಳನ್ನು ಈಗಾಗಲೇ ತಿರಸ್ಕರಿಸಿವೆ. ಸಾಮಾನ್ಯವಾಗಿ ಅಮೆರಿಕದಲ್ಲಿ ಅಧ್ಯಕ್ಷರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಸೋಲುವುದು ಕಡಿಮೆ. ಟ್ರಂಪ್ ಸೋತರೆ 1992ರ (ಸೀನಿಯರ್ ಬುಶ್) ನಂತರ ಸೋತ ಮೊದಲ ಅಧ್ಯಕ್ಷರಾಗುತ್ತಾರೆ. ಇದನ್ನು ತಪ್ಪಿಸಲು ಟ್ರಂಪ್ ಹೆಣಗುತ್ತಿದ್ದಾರೆ.

ಈ ಚುನಾವಣೆ 120 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ಮತದಾನದ ಪ್ರಮಾಣ (ಶೇ. 67) ಕಂಡಿದೆ. ಇದು ಅತ್ಯಂತ ಕುತೂಹಲ ಕೆರಳಿಸಿದ ಚುನಾವಣೆಯಾಗಿದ್ದದ್ದು ಬಹುಶಃ ಇದಕ್ಕೆ ಕಾರಣವಾಗಿತ್ತು. ಸಾಮಾನ್ಯವಾಗಿ ಮತದಾನ ಶೇ. 50 ನ್ನು ದಾಟುವುದಿಲ್ಲ. ಚುನಾವಣಾ ದಿನಕ್ಕಿಂತ ಮೊದಲು ಪೋಸ್ಟಲ್ ಮತ್ತು ನೇರವಾಗಿ (1992ರಲ್ಲಿ ಜಾರಿಗೆ ತರಲಾದ ಅಮೆರಿಕನ್ ನಿಯಮಗಳ ಪ್ರಕಾರ ಚುನಾವಣಾ ದಿನವಾದ ನ.3ಕ್ಕಿಂ ತ ಹಲವು ದಿನಗಳ ಮೊದಲಿನಿಂದ ಮತದಾನ ಆರಂಭವಾಗುತ್ತದೆ) ಮಾಡಿದ ಮತದಾರರ ಪ್ರಮಾಣ ಒಟ್ಟು 10 ಕೋಟಿ ಮತ್ತು ಒಟ್ಟು ಮತದಾನದ ಶೇ. 67 ಇತ್ತು. ಇದು ಸಹ ಚಾರಿತ್ರಿಕ. 1992ರಲ್ಲಿ ಆರಂಭವಾದ ಚುನಾವಣಾ ದಿನಕ್ಕಿಂತ ಮೊದಲಿನ ಮತದಾನ 1992ರಲ್ಲಿ ಶೆ. 7 ಇದ್ದು, ಸತತವಾಗಿ ಏರುತ್ತಿದ್ದು 2016ರಲ್ಲಿ ಶೇ. 37ಕ್ಕೇರಿತ್ತು. ಕೊವಿದ್ ಪರಿಸ್ಥಿತಿ ಮತ್ತು ನಿರ್ಣಾಯಕ ಚುನಾವಣೆಯಾಗಿದ್ದರಿಂದ ಈ ಅಪಾರ ಹೆಚ್ಚಳವಾಗಿರಬೇಕು ಎನ್ನಲಾಗಿದೆ.

ಅಧ್ಯಕ್ಷೀಯ ಚುನಾವಣೆ ಜತೆಗೆ ಸೆನೆಟ್ (ಮೇಲ್ಮನೆ) ಮತ್ತು ಹೌಸ್ (ಕೆಳಮನೆ) ಚುನಾವಣೆಗಳು ನಡೆದಿದ್ದು ಡೆಮೊಕ್ರಾಟಿಕ್ ಪಕ್ಷ, ಸೆನೆಟನ್ನು ರಿಪಬ್ಲಿಕನ್ ಪಕ್ಷದಿಂದ ಕಸಿದುಕೊಳ್ಳುವುದರಲ್ಲಿ ವಿಫಲವಾಗಿದೆ. ಈವರೆಗೆ ಎರಡೂ ಪಕ್ಷಗಳು ತಲಾ 48 ಸೀಟುಗಳನ್ನು ಪಡೆದಿವೆ. ಹಿಂದೆ ರಿಪಬ್ಲಿಕನ್ ಪಕ್ಷ 53 ಸೀಟು ಹೊಂದಿದ್ದು ಡೆಮೊಕ್ರಾಟಿಕ್ ಪಕ್ಷ ಈವರೆಗೆ ಕೇವಲ 1 ಸೀಟು ಕಸಿದುಕೊಳ್ಳಲು ಸಾಧ್ಯವಾಗಿದೆ ಅಷ್ಟೇ. ಎಲ್ಲ ಸೀಟುಗಳಲ್ಲಿ ಮತ ಎಣಿಕೆ ಮುಂದುವರೆದಿದ್ದರೂ ಡೆಮೊಕ್ರಾಟಿಕ್ ಪಕ್ಷ ಬಹುಮತ ಪಡೆಯುವ ಸಾಧ್ಯತೆ ಬಹಳ ಕಡಿಮೆಯಿದೆ ಎನ್ನಲಾಗಿದೆ. ಅದೇ ರೀತಿ ಹೌಸ್ (ಕೆಳಮನೆ) ಯಲ್ಲಿ ಯಾವುದೇ ರಿಪಬ್ಲಿಕನ್ ಸೀಟು ಕಸಿದುಕೊಳ್ಳದೆ, 6 ಸೀಟುಗಳನ್ನು ಕಳೆದುಕೊಂಡಿದೆ. ಆದರೂ (ಕೆಳಮನೆ) ನಲ್ಲಿ ಬಹುಮತ ಉಳಿಸಿಕೊಂಡಿದೆ. ಬೈಡನ್ ಅಧ್ಯಕ್ಷರಾಗಿ ಚುನಾಯಿತರಾದರೆ ಈಗಿನ ನೀತಿಗಳನ್ನು ಬದಲಿಸಿ ತಮ್ಮ ನೀತಿ ಜಾರಿ ಮಾಡಬೇಕಾದರೆ ಸೆನೆಟ್ ನಲ್ಲಿ ಬಹುಮತ ಅಗತ್ಯ. ಇಲ್ಲದಿದ್ದರೆ ಪ್ರಧಾನ ಸಿಬ್ಬಂದಿ ನೇಮಕ ಮತ್ತು ಹೊಸ ನೀತಿ ಜಾರಿಯಲ್ಲಿ ಹಲವು ತೊಡಕುಗಳು ಎದುರಾಗುತ್ತವೆ ಎನ್ನಲಾಗಿದೆ.

ಮೂರನೇ ಜಗತ್ತಿನ ಕಾರ್ಮಿಕರಿಗೆ ಅತಿ ಹೆಚ್ಚು ಕೊರೊನ ಪೆಟ್ಟು



ಸಾಂಕ್ರಾಮಿಕದ ಕಾರಣದಿಂದ ಹೇರಿದ ಲಾಕ್‌ಡೌನ್ ಪರಿಣಾಮದ ಉದ್ಯೋಗ ನಷ್ಟಕ್ಕೆ ಬೇರೆ ಬೇರೆ ದೇಶಗಳ ವಿತ್ತೀಯ ಸ್ಪಂದನೆಯಲ್ಲಿ ಭಾರೀ ವೈವಿಧ್ಯತೆ ಇದೆ. ಮುಂದುವರಿದ ದೇಶಗಳು ತಮ್ಮ ಅರ್ಥವ್ಯವಸ್ಥೆಗಳಿಗೆ ವಿತ್ತೀಯ ನೆರವನ್ನು ಧಾರಾಳವಾಗಿ ಒದಗಿಸಿವೆ. ಕಾರ್ಮಿಕರಿಗೂ ಧಾರಾಳ ನೆರವು ಒದಗಿಸಿವೆ. ಆದರೆ, ತೃತೀಯ ಜಗತ್ತಿನ ದೇಶಗಳು ತಮ್ಮ ಕಾರ್ಮಿಕರೊಂದಿಗೆ ಅತ್ಯಂತ ನಿಕೃಷ್ಟವಾಗಿ ವರ್ತಿಸಿವೆ. ಅದು ಅವರ ಆಯ್ಕೆಯಲ್ಲ (ಭಾರತವನ್ನು ಹೊರತುಪಡಿಸಿ), ಅನಿವಾರ್ಯತೆ. ಇದು, ಜಾಗತೀಕರಣದ ಯುಗದಲ್ಲಿ ತೃತೀಯ ಜಗತ್ತಿನ ಸರ್ಕಾರಗಳು ಸ್ವಾಯತ್ತತೆಯನ್ನು ಕಳೆದುಕೊಂಡಿರುವುದರ ಪರಿಣಾಮ. ಇದರಿಂದಾಗಿ ಮುಂದುವರಿದ ದೇಶಗಳಿಗೆ ಹೋಲಿಸಿದರೆ, ತೃತೀಯ ಜಗತ್ತಿನ ಕಾರ್ಮಿಕರ ಮೇಲೆ ಈ ಸಾಂಕ್ರಾಮಿಕವು ತೀವ್ರ ಹಾನಿ ಉಂಟುಮಾಡಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಕೊರೊನಾ ಸಾಂಕ್ರಾಮಿಕವು ಕಳೆದ ಕೆಲವು ತಿಂಗಳುಗಳಲ್ಲಿ ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ, ಅದರಲ್ಲೂ ವಿಶೇಷವಾಗಿ, ಲಾಕ್‌ಡೌನ್‌ನಿಂದಾದ ಶ್ರಮ-ಗಂಟೆಗಳ ನಷ್ಟ (ಉತ್ಪಾದನೆಯ ನಷ್ಟ) ಮತ್ತು ಎಲ್ಲ ವಲಯಗಳಿಗೂ ಹರಡಿದ ಅದರ ಪರಿಣಾಮಗಳ ಬಗ್ಗೆ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯು(ಐಎಲ್‌ಒ) ಒಂದು ವರದಿಯನ್ನು ಹೊರತಂದಿದೆ. ಈ ವರದಿಯು ಒದಗಿಸಿರುವ ಅಂಕಿ ಅಂಶಗಳು ಬೇರೆ ಬೇರೆ ದೇಶಗಳು ಒದಗಿಸಿದ ಅಧಿಕೃತ ದತ್ತಾಂಶಗಳ ಸಂಗ್ರಹವಲ್ಲ. ಸದಸ್ಯ ದೇಶಗಳಿಂದ ಲಭ್ಯವಿರುವ ಮಾಹಿತಿಯನ್ನು ಆಧರಿಸಿ, ಐಎಲ್‌ಒ ಸ್ವಂತ ಅಂದಾಜುಗಳನ್ನು ಸಿದ್ಧಪಡಿಸುತ್ತದೆ. ಈ ಅಂದಾಜು ಅಂಕಿ-ಅಂಶಗಳು ಎಷ್ಟು ನಿಖರವಾಗಿವೆ ಎಂದು ಹೇಳಲು ಸಾಧ್ಯವಿಲ್ಲವಾದರೂ, ನಮಗೆ ಲಭ್ಯವಿರುವ ಏಕೈಕ ದತ್ತಾಂಶವೆಂದರೆ ಈ ಅಂಕಿ-ಸಂಖ್ಯೆಗಳೇ. ಆದರೆ, ಅಂಕಿ-ಅಂಶಗಳನ್ನೊಳಗೊಂಡ ಈ ವರದಿಯನ್ನು ಹೊರತರಲು ಐಎಲ್‌ಒ ವಹಿಸುವ ಜಾಗರೂಕತೆ, ಪರಿಶ್ರಮ ಮತ್ತು ದತ್ತಾಂಶಗಳ ನಿಖರತೆ, ಸೂಕ್ಷ್ಮ ವಿಷಯಗಳ ಬಗ್ಗೆ ಐಎಲ್‌ಒ ಕೊಡುವ ಗಮನ ಇವುಗಳನ್ನು ಗಣನೆಗೆ ತೆಗೆದುಕೊಂಡರೆ, ಈ ದತ್ತಾಂಶಗಳನ್ನು ಆಧರಿಸಿ ನಾವು ಕೆಲವು ನಿರ್ಣಯಗಳಿಗೆ ಬರಲು ಅಡ್ಡಿಯಿಲ್ಲ.

2019ರ ನಾಲ್ಕನೇ ತ್ರೈಮಾಸಿಕದ ಅಂಕಿ-ಅಂಶಗಳೊಂದಿಗೆ ಹೋಲಿಸಿ, ಕೊರೊನಾ ಕಾಲದ ಶ್ರಮ-ಗಂಟೆಗಳ ನಷ್ಟವನ್ನು ಲೆಕ್ಕಹಾಕಲಾಗುತ್ತದೆ. ಈ ಹೋಲಿಕೆಯ ಪ್ರಕಾರ, 2020ರ ಮೊದಲ ಮೂರು ತ್ರೈಮಾಸಿಕಗಳಲ್ಲಿ ಜಾಗತಿಕ ಅರ್ಥವ್ಯವಸ್ಥೆಯು ಅನುಕ್ರಮವಾಗಿ 5.6%, 17.3% ಮತ್ತು 12.1% ಕುಸಿತ ಕಂಡಿದೆ. 2020ರ ಮೂರು ತ್ರೈಮಾಸಿಕಗಳನ್ನು ಒಟ್ಟಿಗೆ ಪರಿಗಣಿಸಿದರೆ, ಜಾಗತಿಕ ಅರ್ಥವ್ಯವಸ್ಥೆಯ ಶ್ರಮ-ಗಂಟೆಗಳ ನಷ್ಟವು 11.7% ರಷ್ಟಿತ್ತು. ಗಮನಾರ್ಹವಾದ ಅಂಶವೆಂದರೆ, ಈ ಅವಧಿಯಲ್ಲಿ (2020ರ ಮೊದಲ ಮೂರು ತ್ರೈಮಾಸಿಕಗಳಲ್ಲಿ) ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಅನುಕ್ರಮವಾಗಿ 3.1%, 27.3% ಮತ್ತು 18.2% ಶ್ರಮ-ಗಂಟೆಗಳ ನಷ್ಟವಾಗಿತ್ತು. ವಾಸ್ತವವಾಗಿ ಹೇಳುವುದಾದರೆ, ಕೊರೊನಾದ ಪೆಟ್ಟುಗಳನ್ನು ಹೆಚ್ಚು ತಿಂದ (ಅಂದರೆ, ಆದಾಯ ಕಳೆದುಕೊಂಡ) ಪ್ರದೇಶಗಳೆಂದರೆ ಲ್ಯಾಟಿನ್ ಅಮೇರಿಕಾ ಮತ್ತು ಕೆರಿಬಿಯನ್, ನಂತರದಲ್ಲಿ ದಕ್ಷಿಣ ಏಷ್ಯಾ ಬರುತ್ತದೆ.

ಈ ಸಂಗತಿಯನ್ನು ಇತರ ಅಂಕಿ-ಅಂಶಗಳೂ ಸಹ ದೃಢೀಕರಿಸುತ್ತವೆ. ಶ್ರಮ-ಗಂಟೆಗಳ ನಷ್ಟವನ್ನು ಕಾರ್ಮಿಕರಿಗೆ ಉಂಟಾದ ಆದಾಯ ನಷ್ಟವೆಂದು ಐಎಲ್‌ಒ ಪರಿಗಣಿಸುತ್ತದೆ. 2020ರ ಮೂರು ತ್ರೈಮಾಸಿಕಗಳಲ್ಲಿ, ಲ್ಯಾಟಿನ್ ಅಮೇರಿಕ ಮತ್ತು ಕೆರಿಬಿಯನ್ ದೇಶಗಳಲ್ಲಿ ಕಾರ್ಮಿಕರು 19.3% ಆದಾಯವನ್ನು ಕಳೆದುಕೊಂಡರು. ದಕ್ಷಿಣ ಏಷ್ಯಾದ ದೇಶಗಳ ಕಾರ್ಮಿಕರು 16.2% ಆದಾಯ ಕಳೆದುಕೊಂಡರು. ಈ ಪ್ರದೇಶದ ಕಾರ್ಮಿಕರು ಕಳೆದುಕೊಂಡ ಆದಾಯವು ವಿಶ್ವದ ಇತರ ಎಲ್ಲ ಪ್ರದೇಶಗಳಿಗಿಂತಲೂ ಅಧಿಕವಾಗಿದೆ. ವಾಸ್ತವವಾಗಿ, ಇಡೀ ವಿಶ್ವದ ಕಾರ್ಮಿಕರ ಆದಾಯ ನಷ್ಟವು 10.7% ಗಿಂತ ಹೆಚ್ಚಿಗೆ ಇಲ್ಲ. ತನ್ನ ಅಗಾಧ ಗಾತ್ರದಿಂದಾಗಿ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಭಾರತವೇ ಮೇಲುಗೈ ಹೊಂದಿದ ದೇಶ. ಕೊರೊನಾ ಸಾಂಕ್ರಾಮಿಕವು ಪಾಕಿಸ್ತಾನವೂ ಸೇರಿದಂತೆ ಭಾರತದ ನೆರೆಯ ದೇಶಗಳನ್ನು ಅಷ್ಟಾಗಿ ಬಾಧಿಸಲಿಲ್ಲ ಮತ್ತು ಈ ದೇಶಗಳು ಕೊರೊನಾ ತಡೆಗಟ್ಟಲು ಅಷ್ಟೊಂದು ಕಠಿಣ ಕ್ರಮಗಳನ್ನು ಕೈಗೊಳ್ಳಲೂ ಇಲ್ಲ. ಹಾಗಾಗಿ, ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಉಂಟಾದ ಆದಾಯ ನಷ್ಟದಲ್ಲಿ ಭಾರತದ ಅನುಭವಿಸಿದ ನಷ್ಟವೇ ಅತಿ ಹೆಚ್ಚಿನದ್ದಾಗುತ್ತದೆ. ನಷ್ಟ ಅನುಭವಿಸಿದ ದೇಶಗಳ ಪಟ್ಟಿಯಲ್ಲಿ ಭಾರತವು, ಲ್ಯಾಟಿನ್ ಅಮೇರಿಕ ಮತ್ತು ಕೆರಿಬಿಯನ್ ದೇಶಗಳ ನಂತರದ ಸ್ಥಾನದಲ್ಲಿ ಬರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಸಾಂಕ್ರಾಮಿಕ ರೋಗವನ್ನು ನಿಭಾಯಿಸುವಲ್ಲಿ ಮೋದಿ ಸರ್ಕಾರದ ಸಾಧನೆಯು ಜಗತ್ತಿನಲ್ಲೇ ಅತ್ಯಂತ ಕಳಪೆಯದ್ದಾಗಿದೆ ಎಂದು ಅನೇಕರು ಬಹಳ ದಿನಗಳಿಂದ ಹೇಳುತ್ತಿದ್ದ ಅಭಿಪ್ರಾಯವನ್ನು ಐಎಲ್‌ಒ ಅಂಕಿ ಅಂಶಗಳು ಸಮರ್ಥಿಸುತ್ತವೆ.

ಅಷ್ಟೇ ಅಲ್ಲ. ಶ್ರಮಿಕರ ಆದಾಯ ನಷ್ಟದ ಅಂಕಿ-ಅಂಶಗಳನ್ನು ಲೆಕ್ಕ ಹಾಕುವಾಗ ಐಎಲ್‌ಒ, ಆಯಾ ದೇಶಗಳ ಸರ್ಕಾರಗಳು ಒದಗಿಸಿದ ವಿತ್ತೀಯ ಬೆಂಬಲವನ್ನು ಗಣನೆಗೆ ತೆಗೆದುಕೊಳ್ಳದೆ ಲೆಕ್ಕ ಹಾಕಿತ್ತು. ಸರ್ಕಾರದ ಹೆಚ್ಚುವರಿ ವೆಚ್ಚಗಳು, ಆದಾಯ ವರ್ಗಾವಣೆಗಳು ಅಥವಾ ತೆರಿಗೆ ಕಡಿತದ ಕ್ರಮಗಳನ್ನು ವಿತ್ತೀಯ ಉತ್ತೇಜನ ಎಂದು ಐಎಲ್‌ಒ ವ್ಯಾಖ್ಯಾನಿಸುತ್ತದೆ. ಐಎಲ್‌ಒ ಅಧ್ಯಯನವು ಗುರುತಿಸಿರುವ ಒಂದು ಪ್ರಮುಖ ಅಂಶವೆಂದರೆ, ಶೇಕಡಾವಾರು ಜಿಡಿಪಿಯ ಲೆಕ್ಕದಲ್ಲಿ ಹೆಚ್ಚಿನ ಪ್ರಮಾಣದ ವಿತ್ತೀಯ ಉತ್ತೇಜನವನ್ನು ಒದಗಿಸಿದ ದೇಶಗಳಲ್ಲಿ ಶ್ರಮ-ಗಂಟೆಗಳ ನಷ್ಟ ಕಡಿಮೆ ಇದೆ. ಹೆಚ್ಚಿನ ಪ್ರಮಾಣದ ವಿತ್ತೀಯ ಉತ್ತೇಜನ ಮತ್ತು ಶ್ರಮ-ಗಂಟೆಗಳ ಕಡಿಮೆ ನಷ್ಟ ಇವುಗಳ ವಿಲೋಮ ಸಂಬಂಧದ ಬಗ್ಗೆ ಸ್ವತಃ ಐಎಲ್‌ಒ ಯಾವುದೇ ವಿವರಣೆಯನ್ನೂ ಕೊಟ್ಟಿಲ್ಲ. ಆದರೆ ಅದನ್ನು ಕಂಡುಹಿಡಿಯುವುದು ತುಂಬಾ ಕಷ್ಟವೇನಲ್ಲ.

ಒಂದು ವೇಳೆ ಶ್ರಮ-ಗಂಟೆಗಳ ನಷ್ಟವು ಸಂಪೂರ್ಣವಾಗಿ ಲಾಕ್‌ಡೌನ್ ಕಾರಣದಿಂದ ಉಂಟಾಗಿದ್ದರೆ, ಅಂದರೆ, ಶ್ರಮ-ಗಂಟೆಗಳ ನಷ್ಟವು ಸರ್ಕಾರದ ನಿರ್ದೇಶನದ ಮೇರೆಗೆ "ಪೂರೈಕೆಯ ಕಡೆ"ಯಿಂದ ಉಂಟಾದರೆ, ಆಗ ಅಂತಹ ನಷ್ಟ ಮತ್ತು ವಿತ್ತೀಯ ಉತ್ತೇಜನದ ಗಾತ್ರದ ನಡುವೆ ವಿಲೋಮ ಸಂಬಂಧವಿರಲು ಕಾರಣವೇ ಇಲ್ಲ; ಆಗ ನಷ್ಟದ ಪ್ರಮಾಣವು ಕೇವಲ ಲಾಕ್‌ಡೌನ್ ಎಷ್ಟು ಬಿಗಿಯಾಗಿತ್ತು ಎಂಬುದನ್ನು ಅವಲಂಬಿಸಿರುತ್ತದೆಯೇ ಹೊರತು ವಿತ್ತೀಯ ಉತ್ತೇಜನದ ಗಾತ್ರವನ್ನಲ್ಲ. ಆದರೆ, ಲಾಕ್‌ಡೌನ್‌ಗೆ ಬೇಡಿಕೆ-ಕಡೆಯಿಂದ ಒಂದು "ಗುಣಕ" ಪರಿಣಾಮವೂ ಇದೆ. ಲಾಕ್‌ಡೌನ್ ಕಾರಣದಿಂದ ಆದಾಯ ನಷ್ಟವಾದರೆ, ಆಗ ಜನರು ಹೇರ್ ಕಟಿಂಗ್ ಸಲೂನ್, ತಿಂಡಿ-ತಿನಿಸು ಅಂಗಡಿಗಳಿಂದ ಹಿಡಿದು ವಿವಿಧ ರೀತಿಯ ರಿಪೇರಿ-ಅಂಗಡಿಗಳವರೆಗೆ, ಲಾಕ್‌ಡೌನ್‌ನಲ್ಲಿ ಅವಕಾಶವಿದ್ದರೂ ಸಹ, ಜನರು ತಮ್ಮ ವಿವಿಧ ಸೇವೆಗಳ ಮೇಲಿನ ತಮ್ಮ ಬೇಡಿಕೆಯನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಈ ಸೇವಾ ಪೂರೈಕೆದಾರರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದರೆ, ಅದಕ್ಕೆ ಲಾಕ್‌ಡೌನ್ ಹೇರಿದ ನಿರ್ಬಂಧಗಳು ಕಾರಣವಾಗಿವುದಿಲ್ಲ, ಬದಲಿಗೆ, ಲಾಕ್‌ಡೌನ್‌ನ ಪರೋಕ್ಷ ಕಾರಣದಿಂದ ಬೇಡಿಕೆ ಇಲ್ಲದಿರುವುದು ಕಾರಣವಾಗುತ್ತದೆ. ಈ ರೀತಿಯಲ್ಲಿ "ಪೂರೈಕೆ-ಕಡೆ"ಯಿಂದ ಹೇರಲಾದ ಆದಾಯ ನಷ್ಟದ ಜೊತೆಗೆ ಬೇಡಿಕೆ-ಕಡೆಯಿಂದಲೂ ಮತ್ತಷ್ಟು ಆದಾಯ ನಷ್ಟವಾಗುತ್ತದೆ.


ವಿತ್ತೀಯ ಉತ್ತೇಜನದ ಅವಶ್ಯಕತೆ ಮತ್ತು ಅನಿವಾರ್ಯತೆ ಉಂಟಾಗುವುದು ಇಂತಹ ಪರಿಸ್ಥಿತಿಯಲ್ಲೇ. ಈ ಕ್ರಮವು, ಲಾಕ್‌ಡೌನ್ ಕಾರಣದಿಂದ ತಮ್ಮ ಆದಾಯ ನಷ್ಟ ಅನುಭವಿಸಿದ ಜನರ ಕೈಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಂದಿಷ್ಟು ಖರೀದಿ ಶಕ್ತಿಯನ್ನು ಇರಿಸುತ್ತದೆ ಮತ್ತು ಈ ಮೂಲಕ ಬೇಡಿಕೆ-ಕಡೆಯಿಂದ ಉಂಟಾದ ಹೆಚ್ಚಿನ ಆದಾಯ ನಷ್ಟದ ಅಥವಾ ಬೇಡಿಕೆ-ಕಡೆಯ "ಗುಣಕ"ದ ಅಡ್ಡ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ. ಜಿಡಿಪಿಗೆ ಹೋಲಿಸಿದರೆ ವಿತ್ತೀಯ ಉತ್ತೇಜನದ ಗಾತ್ರವು ದೊಡ್ಡದಾದಷ್ಟೂ, ಲಾಕ್‌ಡೌನ್‌ನ "ಗುಣಕ"ದ ಅಡ್ಡ ಪರಿಣಾಮವು ಚಿಕ್ಕದಾಗುತ್ತದೆ. ಆದ್ದರಿಂದ, ಶ್ರಮ-ಗಂಟೆಯ ನಷ್ಟದ ಪ್ರಮಾಣವು ವಿತ್ತೀಯ ಉತ್ತೇಜನದ ಗಾತ್ರಕ್ಕೆ ತಕ್ಕ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಐಎಲ್‌ಒ ಅಧ್ಯಯನವು ಕಂಡುಹಿಡಿದಿರುವುದು ಇದನ್ನೇ.

ನಷ್ಟವಾದ ಶ್ರಮ-ಗಂಟೆಗಳು ಮತ್ತು ಆರ್ಥಿಕ ಉತ್ತೇಜನದ ಗಾತ್ರಕ್ಕೆ ಸಂಬಂಧಿಸಿದಂತೆ ಐಎಲ್‌ಒ ಮತ್ತೊಂದು ಅಂದಾಜನ್ನು ಸಿದ್ಧಪಡಿಸಿದೆ. ಈ ಅಂದಾಜಿನಲ್ಲಿ ನಷ್ಟವಾದ ಶ್ರಮ-ಗಂಟೆಗಳನ್ನು ಪೂರ್ಣಾವಧಿಯ ಕೆಲಸದ ಗಂಟೆಗೆ (ಸಮನಾಗಿ) ಪರಿವರ್ತಿಸಲಾಗಿದೆ. ಅದೇ ರೀತಿಯಲ್ಲಿ, ವಿತ್ತೀಯ ಉತ್ತೇಜನವನ್ನು ಅದು ಎಷ್ಟು ಪೂರ್ಣಕಾಲಿಕ ಉದ್ಯೋಗಗಳಿಗೆ ಸಮಾನವಾಗುತ್ತದೆ ಎನ್ನುವ ರೀತಿಯಲ್ಲಿ ಪರಿವರ್ತಿಸಲಾಗುತ್ತದೆ. ಈ ಎರಡು ಅಂಶಗಳ ನಡುವಿನ ಅನುಪಾತವು, ನಷ್ಟವಾದ ಶ್ರಮ-ಗಂಟೆಗಳ ಮೊತ್ತಕ್ಕೆ ಹೋಲಿಸಿದರೆ ವಿತ್ತೀಯ ಉತ್ತೇಜನದ ಗಾತ್ರ ಎಷ್ಟೆಂಬುದು ತಿಳಿಯುತ್ತದೆ. ಈ ಲೆಕ್ಕಾಚಾರದಲ್ಲಿ ನೋಡಿದರೆ, ವಿಶ್ವದ ಎಲ್ಲಾ ಪ್ರದೇಶಗಳ ಪೈಕಿ, "ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್" ಮತ್ತು "ಸಹರಾ-ಕೆಳಗಿನ ಆಫ್ರಿಕಾ" ಗಳನ್ನು ಒಂದೇ ಪ್ರದೇಶವೆಂದು ಪರಿಗಣಿಸಿದರೆ, ದಕ್ಷಿಣ ಏಷ್ಯಾದ ಶ್ರಮ-ಗಂಟೆಗಳ ನಷ್ಟಕ್ಕೆ ಹೋಲಿಸಿದರೆ ಅಲ್ಲಿ ದೊರೆತ ವಿತ್ತೀಯ ಉತ್ತೇಜನವು ಅತ್ಯಂತ ಕಡಿಮೆ ಪ್ರಮಾಣದ್ದಾಗಿತ್ತು. ಈ ಬಗ್ಗೆಯೂ ದಕ್ಷಿಣ ಏಷ್ಯಾದ ಕಳಪೆ ದಾಖಲೆಗೆ ಭಾರತದ ವಿತ್ತೀಯ ಜಿಪುಣತನವೇ ಪ್ರಮುಖ ಕಾರಣವಾಗುತ್ತದೆ.

ಐಎಲ್‌ಒ ತನ್ನ ಅಂದಾಜಿನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಎರಡು ಅಂಶಗಳನ್ನು ಸೂಚ್ಯವಾಗಿ ತಿಳಿಸುತ್ತದೆ. ಮೊದಲನೆಯದು, ಭಾರತದ ಜುಜುಬಿ ಮೊತ್ತದ ವಿತ್ತೀಯ ಉತ್ತೇಜನವು ಶ್ರಮ-ಗಂಟೆಗಳ ನಷ್ಟವನ್ನು ಉಲ್ಬಣಗೊಳಿಸಿತು, ಹೇಗೆಂದರೆ, ಬಿಗಿ ಲಾಕ್‌ಡೌನ್‌ನ ನೇರ ಪರಿಣಾಮವಾಗಿ ಶ್ರಮ-ಗಂಟೆಗಳ ಆರಂಭಿಕ ನಷ್ಟವು "ಗುಣಕ"ದ ರೀತಿಯಲ್ಲಿ ವರ್ಧಿಸಿತು. ಎರಡನೆಯದು, ವಿತ್ತೀಯ ಉತ್ತೇಜನವು ಕಾರ್ಮಿಕರಿಗೆ ಆದಾಯ-ಬೆಂಬಲ ಒದಗಿಸುತ್ತದೆ. ಮತ್ತು, ಈ ಆದಾಯ-ಬೆಂಬಲವು ಸಾಂಕ್ರಾಮಿಕ ಕಾರಣದ ಆರ್ಥಿಕ ಬಿಕ್ಕಟ್ಟಿನ ನಡುವೆ ಜೀವ ಉಳಿಸಿಕೊಳ್ಳುವ ಒಂದು ಅತ್ಯಗತ್ಯ ಸಾಧನವಾಗಿದೆ. ಹಾಗಾಗಿ, ಭಾರತ ಸರ್ಕಾರದ ಜಿಪುಣತನವು ದುಪ್ಪಟ್ಟು ಖಂಡನೀಯವಾಗುತ್ತದೆ: ದುಡಿಯುವ ಜನರಿಗೆ ಸರ್ಕಾರವು ಎರಡು ರೀತಿಯಲ್ಲಿ ನೋವುಂಟು ಮಾಡಿತು. ಮೊದಲನೆಯದಾಗಿ, ಅದಾಗಲೇ ಒಂದು ಕಠೋರ ಲಾಕ್‌ಡೌನ್‌ನಿಂದಾಗಿ ಜರ್ಝರಿತರಾಗಿದ್ದ ದುಡಿಮೆಗಾರರನ್ನು ಮತ್ತಷ್ಟು ಘಾಸಿಗೊಳಿಸಿತು, ಲಾಕ್‌ಡೌನ್ ವಿಸ್ತರಿಸುವ ಮೂಲಕ. ಎರಡನೆಯದಾಗಿ, ಸೂಕ್ತ ನೆರವು ಅವರಿಗೆ ಅತ್ಯವಶ್ಯವಿದ್ದಾಗ ಅದನ್ನು ಒದಗಿಸದೇ ಇದ್ದುದು ಗಾಯದ ಮೇಲೆ ಬರೆ ಎಳೆದ ರೀತಿಯಲ್ಲಿ ನೋವುಂಟುಮಾಡಿತು. ಹಾಗಾಗಿ, ಈ ಸಾಂಕ್ರಾಮಿಕದ ಸಂದರ್ಭದಲ್ಲಿ, ಭಾರತ ಸರ್ಕಾರವು ತೋರಿದ್ದು ನಿರ್ಲಕ್ಷತೆ ಮಾತ್ರವಲ್ಲ, ಅದು ಜಗತ್ತಿನ ಅತ್ಯಂತ ಅಸಮರ್ಥ ಸರ್ಕಾರಗಳಲ್ಲಿ ಒಂದು ಎಂಬುದನ್ನೂ.

ನಮ್ಮ ಅರ್ಥವ್ಯವಸ್ಥೆಯು ಸದೃಢವಾಗಿದೆ ಎಂದು ಗಟ್ಟಿಯಾಗಿ ಎಲ್ಲ ಸರ್ಕಾರಗಳೂ ಸತತವಾಗಿ ಹೇಳಿಕೊಂಡಿರುವ ಕಾರಣದ ಮೇಲೆ, ಭಾರತದ ಜುಜುಬಿ ಮೊತ್ತದ ವಿತ್ತೀಯ ಉತ್ತೇಜನವು ಸರ್ಕಾರದ ಕಡು ಕ್ರೂರ ಮನೋಭಾವದ ಪ್ರತೀಕವೆಂದು ಆರೋಪಿಸಬಹುದು. ಆದರೆ, ತೃತೀಯ ಜಗತ್ತಿನ ಹಲವು ದೇಶಗಳ ಬಹು ದೊಡ್ಡ


ಪುಟ 14 ನೋಡಿ



ಕೊವಿಡ್ ಸೋಂಕಿತರ ಸಂಖ್ಯೆ 1000ಕ್ಕಿಂತ ಕಡಿಮೆ ಇದ್ದಾಗ | ಕೊವಿಡ್ ಸೋಂಕಿತರ ಸಂಖ್ಯೆ 1000000 ದಾಟಿದಾಗ

ವಂಗ್ಯಚಿತ್ರ: ಪಂಜು ಗಂಗೊಳ್ಳಿ

ಸಾಂಕ್ರಾಮಿಕವನ್ನು ನಿಭಾಯಿಸುವಲ್ಲಿ ಮೋದಿ ಸರ್ಕಾರದ ಸಾಧನೆಯು ಜಗತ್ತಿನಲ್ಲೇ ಅತ್ಯಂತ ಕಳಪೆಯದ್ದಾಗಿದೆ ಎಂದು ಅನೇಕರು ಬಹಳ ದಿನಗಳಿಂದ ಹೇಳುತ್ತಿದ್ದ ಅಭಿಪ್ರಾಯವನ್ನು ಐಎಲ್‌ಒ ಅಂಕಿ ಅಂಶಗಳು ಸಮರ್ಥಿಸುತ್ತವೆ. ...... ಈ ಸಾಂಕ್ರಾಮಿಕದ ಸಂದರ್ಭದಲ್ಲಿ, ಭಾರತ ಸರ್ಕಾರವು ತೋರಿದ್ದು ನಿರ್ಲಕ್ಷತೆ ಮಾತ್ರವಲ್ಲ, ಅದು ಜಗತ್ತಿನ ಅತ್ಯಂತ ಅಸಮರ್ಥ ಸರ್ಕಾರಗಳಲ್ಲಿ ಒಂದು ಎಂಬುದನ್ನೂ.



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸ್ಥಾಪನೆ

ಪುಟ 11 ರಿಂದ

ವ್ಯಾಖ್ಯಾನಿಸಿದೆ. ಪ್ರಭುತ್ವದ ಅಧಿಕಾರ ಹಿಡಿದಿರುವ ಮೈತ್ರಿಕೂಟದಲ್ಲಿ ಭೂಮಾಲಕರನ್ನು ಸೇರಿಸಿಲ್ಲ, ಪ್ರಭುತ್ವಾಧಿಕಾರದಲ್ಲಿನ ಬಂಡವಾಳಶಾಹಿಗಳು ಭೂಮಾಲಕರೊಂದಿಗೆ ದೃಢವಾದ ಸಂಬಂಧಗಳನ್ನು ಹೊಂದಿದೆ ಎಂದು ಮಾತ್ರ ಹೇಳಿದೆ. ಬಂಡವಾಳಶಾಹಿ-ಭೂಮಾಲಕ ಸಖ್ಯತೆಯು ದೊಡ್ಡ ಬಂಡವಾಳಶಾಹಿಗಳ ನೇತೃತ್ವದಲ್ಲಿದೆ ಎಂಬುದನ್ನೂ ಅವರು ಒಪ್ಪಿಕೊಳ್ಳಲಿಲ್ಲ; ಪ್ರಭುತ್ವಾಧಿಕಾರದ ಮೇಲೆ ದೊಡ್ಡ ಬಂಡವಾಳಶಾಹಿಗಳು ಬಲವಾದ ಪ್ರಭಾವ ಹೊಂದಿದ್ದಾರೆ ಎನ್ನುವುದನ್ನು ಮಾತ್ರ ಒಪ್ಪಿಕೊಂಡಿದೆ. ಆಳುವ ವರ್ಗ ಮೈತ್ರಿಕೂಟವು ವಿದೇಶಿ ಹಣಕಾಸು ಬಂಡವಾಳದೊಂದಿಗೆ ಸಂಬಂಧ ಹೊಂದಿದೆ ಎನ್ನುವುದನ್ನು ಕೂಡ ಅವರು ನಿರಾಕರಿಸಿದರು. ಈ ವಿಶ್ಲೇಷಣೆಯ ಪರಿಣಾಮವು ದೊಡ್ಡ ಬಂಡವಾಳಶಾಹಿ ಮತ್ತು ಭೂಮಾಲಕರನ್ನು ದೂರವಿರಿಸಲು ರಾಜ್ಯಾಧಿಕಾರದೊಂದಿಗೆ ಶಾಮೀಲಾಗುವ ಕಾರ್ಯನೀತಿಯ ಧೋರಣೆಯಾಗಿದೆ. ಆದಕಾರಣ, ಅವರ "ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ"ದ ನಾಯಕತ್ವವು ಕಾರ್ಮಿಕ ವರ್ಗದ್ದಾಗಿರದೆ, ಅದು ರಾಷ್ಟ್ರೀಯ ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗದ ಜಂಟೀ ನಾಯಕತ್ವವಾಗಿದೆ. ಈ ಕಾರ್ಯಕ್ರಮಾತ್ಮಕ ತಿಳುವಳಿಕೆಯು ವರ್ಗ ಶಾಮೀಲಿಗೆ ದಾರಿ ಮಾಡಿಕೊಟ್ಟಿದೆ.

ಎರಡೂ ಕಾರ್ಯಕ್ರಮಗಳ ತುಲನಾತ್ಮಕ ವಿಶ್ಲೇಷಣೆಯು ಸಿಪಿಐನ ಪರಿಷ್ಕರಣವಾದಿ ಧೋರಣೆಯನ್ನು ಬಯಲು ಮಾಡಿದೆ. ಪರಿಷ್ಕರಣವಾದಿ ವಿಭಾಗದ ಈ ವರ್ಗ ಹೊಂದಾಣಿಕೆಯ ನೀತಿಗಳನ್ನು ಪಕ್ಷದ ಬಹುಸಂಖ್ಯಾತ ಸದಸ್ಯರು ಅರ್ಥ ಮಾಡಿಕೊಂಡರು ಮತ್ತು ಪಕ್ಷದ ಏಳನೇ ಮಹಾಧಿವೇಶನದ ಹಿಂದೆ ಅವರು ಅಣಿನೆರೆದ ರೀತಿಯಲ್ಲಿ ಅದು ಪ್ರತಿಫಲನಗೊಂಡಿದೆ.

ಪಕ್ಷದ ಕಾರ್ಯಭಾರದ ಮೇಲಿನ ನಿರ್ಣಯವು, ಅಂದರೆ ಏಳನೇ ಮಹಾಧಿವೇಶನವು ಅಂಗೀಕರಿಸಿದ ರಾಜಕೀಯ ನಿರ್ಣಯವು ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವುದಕ್ಕಾಗಿ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿತು. ಕಾರ್ಮಿಕ ಚಳುವಳಿಯಲ್ಲಿ, ರೈತ ಚಳುವಳಿಯಲ್ಲಿ ಮತ್ತು ಪಕ್ಷದ ಸಂಘಟನೆಗಳಲ್ಲಿ ಹರಡಿರುವ ದೌರ್ಬಲ್ಯಗಳನ್ನು ತ್ವರಿತಗತಿಯಲ್ಲಿ ಹೋಗಲಾಡಿಸಬೇಕೆಂದು ಮತ್ತು ಎಲ್ಲಾ ಸಾಧ್ಯವಿರುವ ರೀತಿಗಳಲ್ಲಿ ರಾಜಕೀಯ ಅರಿವನ್ನು ಮೂಡಿಸಬೇಕೆಂದು ಆ ನಿರ್ಣಯವು ಪಕ್ಷಕ್ಕೆ ನಿರ್ದೇಶನ ನೀಡಿತು. ಒಂದು ಪ್ರಾಮಾಣಿಕವಾದ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಸಲುವಾಗಿ, ಆ ನಿರ್ಣಯವು ಎಚ್ಚರಿಸಿತು: "ಮಾರ್ಕ್ಸ್‌ವಾದ-ಲೆನಿನ್‌ವಾದದ ಭದ್ರ ಬುನಾದಿಯ ಮೇಲೆ ಸಾಮೂಹಿಕ ಚಳುವಳಿಯ ಹಾಗೂ ಹೋರಾಟಗಳ ಒಂದು ಪ್ರೇರಕಶಕ್ತಿಯಾಗಿ, ನಿರ್ಮಾಪಕನಾಗಿ ಮತ್ತು ನಾಯಕನಾಗಿ ಪಕ್ಷವನ್ನು ಕಟ್ಟದಿದ್ದರೆ ಈ ಕಾರ್ಯಭಾರವನ್ನು ಈಡೇರಿಸಲು ಸಾಧ್ಯವಿಲ್ಲ. ಮೂಲ ವರ್ಗಗಳ ಸಮಸ್ಯೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನಮ್ಮ ಚಟುವಟಿಕೆಗಳನ್ನು ಒಗ್ಗಿಸಿಕೊಳ್ಳಬೇಕು, ಅದು ಮಾತ್ರವೇ ಸಂಬಂಧಗಳನ್ನು ಬೆಸೆಯುತ್ತವೆ ಮತ್ತು ಇಡೀ ಪಕ್ಷವನ್ನು ಪುನಶ್ಚೇತನಗೊಳಿಸುತ್ತದೆ".

ಪಕ್ಷದ ಒಳಗಿರುವ ಪರಿಷ್ಕರಣವಾದ ಮತ್ತು ಪಂಥೀಯವಾದದ ಕುರುಹುಗಳನ್ನು, ಅವುಗಳ ರಾಜಕೀಯ ಹಾಗೂ ಸೈದ್ಧಾಂತಿಕ ಬೇರುಗಳನ್ನು ವಿವರಿಸುವ ಮತ್ತು ಅಂತಹ ತಪ್ಪು ಹಾದಿಗಳ ವಿರುದ್ಧ ಹೋರಾಡಲು ಇಡೀ ಪಕ್ಷವನ್ನು ಸಿದ್ಧಗೊಳಿಸುವ ಬಗ್ಗೆ ಒಂದು ವಿಸ್ತಾರವಾದ ದಸ್ತಾವೇಜನ್ನು ಸಿದ್ಧಪಡಿಸಬೇಕೆಂದು ನೂತನವಾಗಿ ರಚಿಸಲ್ಪಟ್ಟ ಕೇಂದ್ರ ಸಮಿತಿಗೆ ಆ ನಿರ್ಣಯವು ನಿರ್ದೇಶಿಸಿತು.

1951ರ ಪಕ್ಷದ ಮಹಾಧಿವೇಶನದಲ್ಲಿ ಈ ಹಿಂದೆ ಅಂಗೀಕರಿಸಿದ್ದ ಕಾರ್ಯನೀತಿಯ ಹೇಳಿಕೆಯನ್ನು ಕೆಲವು ಮಾರ್ಪಾಡುಗಳೊಂದಿಗೆ ಪಕ್ಷದ ಈ ಮಹಾಧಿವೇಶನದಲ್ಲಿ ಪುನರ್‌ಅಂಗೀಕರಿಸಲಾಯಿತು, ಮಹಾಧಿವೇಶನದ ಮುಂದೆ ಮಂಡಿಸಲಾಗಿದ್ದ ರಾಜಕೀಯ ಹಾಗೂ ಸಂಘಟನಾತ್ಮಕ ನಿರ್ಣಯವಾದ ಪರಿಷ್ಕರಣವಾದದ ವಿರುದ್ಧ ಹೋರಾಟ ಎಂಬ ಹೆಸರಿನ ನಿರ್ಣಯವನ್ನು ಕೂಡ ಅದು ಅಂಗೀಕರಿಸಿತು.

ಸೈದ್ಧಾಂತಿಕ ಪ್ರಶ್ನೆಗಳ ಮೇಲೆ 'ಭಾವಾವೇಶಗಳಿಲ್ಲದೆ' ಪಕ್ಷದಲ್ಲಿ ಆಂತರಿಕ ಚರ್ಚೆಗಳನ್ನು ಸಂಘಟಿಸಬೇಕೆಂದು ಕೇಂದ್ರ ಸಮಿತಿಗೆ ನಿರ್ದೇಶನ ನೀಡುವ ನರ್ಣಯವನ್ನು ಮಹಾಧಿವೇಶನವು ಅಂಗೀಕರಿಸಿತು. "ಡಾಂಗೆ ಗುಂಪಿನವರು ಅನುಸರಿಸುತ್ತಿದ್ದ ಬಂಡವಾಳಶಾಹಿ ಪರಿಷ್ಕರಣವಾದಿ ನೀತಿಗಳು ಮತ್ತು ಛಿದ್ರಕಾರಿ ಸಂಘಟನಾತ್ಮಕ ಆಚರಣೆಗಳ ವಿರುದ್ಧದ ಹೋರಾಟದ ಮೊದಲ ಘಟ್ಟದ" ಅಂತ್ಯ ಇದು ಎಂದು ಮಹಾಧಿವೇಶನವು ಘೋಷಿಸಿತು. ಮುಂದಿನ ಹಂತವು "ಮುಂದಿನ ಕೆಲವು ತಿಂಗಳುಗಳಲ್ಲಿ ಮುಗಿಯಲಿದ್ದು, ಇಂದು ಔಪಚಾರಿಕವಾಗಿ ಡಾಂಗೆ ಗುಂಪಿನೊಂದಿಗೆ ಇರುವವರು, ಅಥವಾ ಯಾರ ಜತೆಯಲ್ಲೂ ಇಲ್ಲದಿರುವವರಲ್ಲಿ ಬಹುಪಾಲು ನಮ್ಮ ಜತೆಗೂಡಲಿದ್ದಾರೆ, ಈ ಮೂಲಕ ಡಾಂಗೆ ಗುಂಪಿನವರು ಅನುಸರಿಸುತ್ತಿದ್ದ ಪರಿಷ್ಕರಣವಾದಿ ಹಾಗೂ ಛಿದ್ರಕಾರಿ ನೀತಿಗಳಿಂದಾದ ಒಡಕನ್ನು ಅಂತಿಮವಾಗಿ ಹೋಗಲಾಡಿಸಿದ್ದೇವೆಂಬ ಸಂಗತಿಯು ಇದರಿಂದ ದಾಖಲಾಗುತ್ತದೆ" ಎಂಬ ಭರವಸೆಯನ್ನು ಅದು ವ್ಯಕ್ತಪಡಿಸಿತು.

ಪಕ್ಷದ ಏಳನೇ ಮಹಾಧಿವೇಶನವು ಒಂದು ಕೇಂದ್ರ ಸಮಿತಿಯನ್ನು ಮತ್ತು ಸಂಗಾತಿಗಳಾದ ಕಾಂ.ಪಿ.ಸುಂದರಯ್ಯ, ಇಎಂಎಸ್ ನಂಬೂದಿರಿಪಾಡ್, ಬಿ ಟಿ ರಣದಿವೆ, ಪ್ರಮೋದ್ ದಾಸ್ ಗುಪ್ತಾ, ಎಂ.ಬಸವಪುನ್ನಯ್ಯ, ಎ ಕೆ ಗೋಪಾಲನ್, ಜ್ಯೋತಿ ಬಸು, ಪಿ ರಾಮಮೂರ್ತಿ ಮತ್ತು ಹರ್ಕಿಷನ್ ಸಿಂಗ್ ಸುರ್ಜಿತ್ ಅವರನ್ನೊಳಗೊಂಡ ಒಂಭತ್ತು ಸದಸ್ಯರ ಪೊಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು. ಪಿ.ಸುಂದರಯ್ಯ ಅವರು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾದರು.

ಹೀಗೆ ಏಳನೇ ಮಹಾಧಿವೇಶನವು ದೇಶದ ಕಮ್ಯುನಿಸ್ಟ್ ಚಳುವಳಿಯಲ್ಲಿ ಹೊಸ ಘಟ್ಟವೊಂದಕ್ಕೆ ನಾಂದಿ ಹಾಡಿತು.

ಮೂರನೇ ಜಗತ್ತಿನ ಕಾರ್ಮಿಕರಿಗೆ ಅತಿ ಹೆಚ್ಚು ಕೊರೊನ ಪೆಟ್ಟು



ಪುಟ 13 ರಿಂದ

ಸಂಖ್ಯೆಯ ದುಡಿಮೆಗಾರರ ವಿಷಯದಲ್ಲಿ, ಅಂದರೆ, ಅವರಿಗೆ ನೆರವು ಒದಗಿಸುವ ವಿಷಯದಲ್ಲಿ, ಆ ಸರ್ಕಾರಗಳಿಗೆ ಹೆಚ್ಚಿನ ಆಯ್ಕೆಗಳೇ ಇಲ್ಲ. ಈ ದೇಶಗಳಲ್ಲಿ, ವಿತ್ತೀಯ ಉತ್ತೇಜನವು ಅತಿ ಕಡಿಮೆ ಪ್ರಮಾಣದಲ್ಲಿದೆ ಎಂದು ಐಎಲ್‌ಒ ವರದಿ ಹೇಳುತ್ತದೆ. ನವ ಉದಾರಿ ಯುಗದಲ್ಲಿ ಈ ದೇಶಗಳ ಅರ್ಥವ್ಯವಸ್ಥೆಗಳು ಎಷ್ಟು ಅಧೋಗತಿಗೆ ಇಳಿದಿವೆ ಎಂದರೆ ಅಲ್ಪ ಪ್ರಮಾಣದ ವಿತ್ತೀಯ ಬೆಂಬಲ ಒದಗಿಸಲೂ ಸಹ ಅವು ಬಾಹ್ಯ ಸಾಲಗಳನ್ನು ಅವಲಂಬಿಸಬೇಕಾಗುತ್ತದೆ ಮತ್ತು ಅಂತಹ ಸಾಲ ಸಿಗುವುದೂ ದುರ್ಲಭವೇ.

ಸಾಂಕ್ರಾಮಿಕದ ಕಾರಣದಿಂದ ಹೇರಿದ ಲಾಕ್‌ಡೌನ್ ಪರಿಣಾಮದ ಉದ್ಯೋಗ ನಷ್ಟಕ್ಕೆ ಬೇರೆ ಬೇರೆ ದೇಶಗಳ ವಿತ್ತೀಯ ಸ್ಪಂದನೆಯಲ್ಲಿ ಭಾರೀ ವೈವಿಧ್ಯತೆ ಇದೆ. ಮುಂದುವರಿದ ದೇಶಗಳು ತಮ್ಮ ಅರ್ಥವ್ಯವಸ್ಥೆಗಳಿಗೆ ವಿತ್ತೀಯ ನೆರವನ್ನು ಧಾರಾಳವಾಗಿ ಒದಗಿಸಿವೆ. ಕಾರ್ಮಿಕರಿಗೂ ಧಾರಾಳ ನೆರವು ಒದಗಿಸಿವೆ. ಆದರೆ, ತೃತೀಯ ಜಗತ್ತಿನ ದೇಶಗಳು ತಮ್ಮ ಕಾರ್ಮಿಕರೊಂದಿಗೆ ಅತ್ಯಂತ ನಿಕೃಷ್ಟವಾಗಿ ವರ್ತಿಸಿವೆ. ಅದು ಅವರ ಆಯ್ಕೆಯಲ್ಲ (ಭಾರತವನ್ನು ಹೊರತುಪಡಿಸಿ), ಅನಿವಾರ್ಯತೆ. ಮುಂದುವರಿದ ದೇಶಗಳಿಗೆ ಹೋಲಿಸಿದರೆ, ತೃತೀಯ ಜಗತ್ತಿನ ಕಾರ್ಮಿಕರ ಮೇಲೆ ಈ ಸಾಂಕ್ರಾಮಿಕವು ತೀವ್ರ ಹಾನಿ ಉಂಟುಮಾಡಿದೆ. ಇವರ ದುರ್ಗತಿಗೆ ಹೋಲಿಸಿದರೆ, ಮುಂದುವರೆದ ದೇಶಗಳ ಕಾರ್ಮಿಕರ ತೊಂದರೆಗಳು ಕಡಿಮೆಯೇ.

ಎಲ್ಲ ದೇಶಗಳ ಕಾರ್ಮಿಕರು ಕಷ್ಟ ನಷ್ಟಗಳಿಗೆ ಒಳಗಾಗಿದ್ದಾರೆ. ಆದರೆ, ಬಿಲಿಯನೇರ್‌ಗಳಿಗಂತೂ ಇಷ್ಟೊಂದು ಸಮೃದ್ಧಿಯ ಕಾಲ ಯಾವತ್ತೂ ಇರಲಿಲ್ಲ. (ಜನಶಕ್ತಿ, ಸಂಚಿಕೆ 45, ನವೆಂಬರ್ 2-8). ಆದರೆ, ಕಾರ್ಮಿಕರ ವಿಶ್ವ ಸಮುದಾಯದಲ್ಲಿ, ತೃತೀಯ ಜಗತ್ತಿನ ಕಾರ್ಮಿಕರ ಸಂಕಷ್ಟಗಳು ತೀಕ್ಷ್ಣವಾಗಿವೆ. ಇದು, ಜಾಗತೀಕರಣದ ಯುಗದಲ್ಲಿ ತೃತೀಯ ಜಗತ್ತಿನ ಸರ್ಕಾರಗಳು ಸ್ವಾಯತ್ತತೆಯನ್ನು ಕಳೆದುಕೊಂಡಿರುವುದರ ಪರಿಣಾಮ.



.......ಪ್ರಜಾಪ್ರಭುತ್ವದ ರಕ್ಷಣೆಗೆ ವಿಶಾಲ ರಂಗದ ರಚನೆ

ಪುಟ 2 ರಿಂದ

ಉತ್ಪನ್ನಗಳು ಮತ್ತು ಮಾರುಕಟ್ಟೆಗಳನ್ನು ವಿದೇಶಿ ಮತ್ತು ದೇಶಿ ಕೃಷಿ ವ್ಯಾಪಾರೀ ಕಾರ್ಪೊರೇಷನ್‌ಗಳಿಗೆ ವಹಿಸಿ ಕೊಡುತ್ತವೆ. ಇದು ವಿದೇಶಿ ಮತ್ತು ದೇಶೀ ಕಾರ್ಪೊರೇಷನ್‌ಗಳಿಗೆ ಅತಿ ಲಾಭಗಳನ್ನು ಗಳಿಸಲು ಅಪಾರ ಅನುಕೂಲಗಳನ್ನು ಒದಗಿಸುತ್ತದೆ, ಇತ್ತ ರೈತರು ಮತ್ತು ಜನತೆಯ ಮೇಲೂ ಸಂಕಟಗಳನ್ನು ಹೇರುತ್ತದೆ, ಭಾರತದ ಆಹಾರ ಭದ್ರತೆಗೆ ಸಂಚಕಾರ ತರುತ್ತದೆ.

'ಹಿಂದುತ್ವ' ಅಜೆಂಡಾದ ನಿರಂತರ ಅನುಸರಣೆ

ಬಿಜೆಪಿ ಕೇಂದ್ರ ಸರಕಾರ ಸಾಂಕ್ರಾಮಿಕದ ಅವಧಿಯನ್ನು ಮತ್ತು ಅದರಿಂದಾಗಿ, ಲಾಕ್‌ಡೌನ್ ನಿರ್ಬಂಧಗಳು ಇತ್ಯಾದಿಗಳಿಂದ ಸಾಮಾನ್ಯ ಜನಜೀವನ ಮತ್ತು ಚಟುವಟಿಕೆಗಳ ಅಸ್ತವ್ಯಸ್ತಗೊಂಡಿರುವುದನ್ನು ಬಳಸಿಕೊಂಡು ಭಾರತವನ್ನು ಒಂದು ಉನ್ನತ್ತ ಫ್ಯಾಸಿಸ್ಟ್ ತೆರನ 'ಹಿಂದುತ್ವ ರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್‌ನ ಮೂಲ ಅಜೆಂಡಾವನ್ನು ಮುಂದೊತ್ತುತ್ತಿದೆ.

ಇದರೊಂದಿಗೆ ದಲಿತರು, ಮಹಿಳೆಯರು, ಮುಸ್ಲಿಂ ಅಲ್ಪಸಂಖ್ಯಾತರು, ಚಿಂತಕರು ಮತ್ತು ಪ್ರತಿಪಕ್ಷಗಳ ಮುಖಂಡರ ಮೇಲೆ ಪ್ರಹಾರಗಳು ಹೆಚ್ಚುತ್ತಿವೆ.

ಜಮ್ಮು ಮತ್ತು ಕಾಶ್ಮೀರ

ಹೊರಗಿನವರಿಗೆ ಭೂಮಿ ಮತ್ತು ಆಸ್ತಿಗಳನ್ನು ಖರೀದಿಸಲು ಅನುಮತಿ ಕೊಡುವ ಹೊಸ ಭೂಮಿ ಕಾನೂನಿನ ಹಿಂದೆ, ಜಮ್ಮು ಮತ್ತು ಕಾಶ್ಮೀರದ ಸಂಪನ್ಮೂಲಗಳು ಮತ್ತು ಅಲ್ಲಿನ ಜನತೆಯನ್ನು ಲೂಟಿ ಮಾಡುವುದಲ್ಲದೆ, ರಾಜ್ಯದ ಜನಸಂಖ್ಯಾ ಸಂಯೋಜನೆಯನ್ನು ಬದಲಿಸುವ ಹುನ್ನಾರವೂ ಇರುವಂತೆ ಕಾಣುತ್ತದೆ.

ಕೇರಳ

ಕೇರಳದಲ್ಲಿ ಎಲ್‌ಡಿಎಫ್ ಸರಕಾರದ ಮೇಲೆ ಗುರಿಯಿಡಲು ಸಿಬಿಐ ನಂತಹ ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಕೇಂದ್ರ ಸಮಿತಿ ಖಂಡಿಸಿತು. ಈ ಕುತಂತ್ರಗಳಿಗೆ ಕೇರಳದ ಜನತೆ ಸರಿಯಾದ ಪ್ರತ್ಯುತ್ತರವನ್ನು ಕೊಡುತಾರೆ.

ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಕಾರ್ಯತಂತ್ರಗಳು

ಮುಂಬರುವ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಲ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಆಯಾಯ ರಾಜ್ಯಸಮಿತಿಗಳು ಮುಂದಿಟ್ಟ ಪ್ರಸ್ತಾವನೆಗಳನ್ನು ಕೇಂದ್ರ ಸಮಿತಿ ಅನುಮೋದಿಸಿತು.

ಕೇರಳದಲ್ಲಿ, ಪಕ್ಷವು ಎಲ್ ಡಿ ಎಫ್ ಭಾಗವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ಮುಂದುವರೆಸುತ್ತದೆ. ತಮಿಳುನಾಡಿನಲ್ಲಿ ಸಿಪಿಐ(ಎಂ) ಡಿಎಂಕೆ ನೇತೃತ್ವದ ಮೈತ್ರಿಕೂಟದ ಭಾಗವಾಗಿ ಚುನಾವಣೆಗಳಲ್ಲಿ ಭಾಗವಹಿಸುತ್ತದೆ. ಅಸ್ಸಾಂನಲ್ಲಿ, ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಿರುವ, ಸಾಮಾಜಿಕ ಸಾಮರಸ್ಯವನ್ನು ಅಸ್ಥಿರಗೊಳಿಸುತ್ತಿರುವ ಮತ್ತು ಜನಗಳ ಮೇಲೆ ಸಂಕಟಗಳನ್ನು ರಾಶಿ ಹಾಕುತ್ತಿರುವ ಬಿಜೆಪಿ ಸರಕಾರವನ್ನು ಸೋಲಿಸಲು ಕಾಂಗ್ರೆಸ್ ಸೇರಿದಂತೆ ಎಲ್ಲ ಜಾತ್ಯತೀತ ಪ್ರತಿಪಕ್ಷಗಳ ಸಹಕಾರದೊಂದಿಗೆ ಸಿಪಿಐ(ಎಂ) ಚುನಾವಣೆಗಳಲ್ಲಿ ಸ್ಪರ್ಧಿಸುತ್ತದೆ. ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಮತ್ತು ಟಿಎಂಸಿ ಯನ್ನು ಸೋಲಿಸಲು ಪ್ರಯತ್ನಿಸುವ ಎಲ್ಲ ಜಾತ್ಯತೀತ ಪಕ್ಷಗಳೊಂದಿಗೆ, ಕಾಂಗ್ರೆ??? ನೊಂದಿಗೆ ಕೂಡ, ಸಿಪಿಐ(ಎಂ) ಮತ್ತು ಎಡರಂಗ ಚುನಾವಣಾ ತಿಳುವಳಿಕೆ ಹೊಂದುತ್ತವೆ.

ಕೇಂದ್ರ ಸಮಿತಿಯ ಕರೆಗಳು

ಕೇಂದ್ರ ಸಮಿತಿ ಈ ಕೆಳಗಿನ ವಿಷಯಗಳ ಮೇಲೆ ರಾಷ್ಟ್ರವ್ಯಾಪಿ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ:

1. ಕೃಷಿ ಕಾಯ್ದೆಗಳು, ಕಾರ್ಮಿಕ ಸಂಹಿತೆಗಳು, ಸಾರ್ವಜನಿಕ ವಲಯದ ಖಾಸಗೀಕರಣ ಮತ್ತು ರಾಷ್ಟ್ರೀಯ ಆಸ್ತಿಗಳ ಲೂಟಿಯ ವಿರುದ್ಧ; ಎಲ್ಲರಿಗೆ ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ಹಾಗೂ ಜನಗಳ ಜೀವನೋಪಾಯಗಳನ್ನು ಇನ್ನಷ್ಟು ಹಾಳುಗೆಡವುತ್ತಿರುವ ಬೆಲೆಯೇರಿಕೆಯ ವಿರುದ್ಧ ಸ್ವತಂತ್ರ ಪ್ರಚಾರಾಂದೋಲನಗಳನ್ನು ಮತ್ತು ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುವುದು.
2. ನವಂಬರ್ 26-27, 2020 ರ ರೈತ ಪ್ರತಿಭಟನಾ ಕಾರ್ಯಾಚರಣೆಗೆ ಪಕ್ಷದ ಸಂಪೂರ್ಣ ಸೌಹಾರ್ದ ಮತ್ತು ಬೆಂಬಲ
3. ನವಂಬರ್ 26, 2020ರಂದು ಒಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೀಡಿರುವ ಕರೆಗೆ ಸಂಪೂರ್ಣ ಬೆಂಬಲ ಮತ್ತು ಸೌಹಾರ್ದ.
4. ನವಂಬರ್ 26 ರಿಂದ ಜನವರಿ 26, 2021ರ ನಡುವಿನ ಎರಡು ತಿಂಗಳಲ್ಲಿ, ಮಾನವ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳು, ಕಾರ್ಮಿಕರು ಮತ್ತು ರೈತಾಪಿ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಪ್ರಶ್ನೆಗಳ ಮೇಲೆ, ಕರಾಳ ಶಾಸನಗಳಾದ ಯುಎಪಿಎ, ಎನ್‌ಎಸ್‌ಎ ರಾಜದ್ರೋಹದ ಕಾಯ್ದೆ ಮುಂತಾದವುಗಳ ಅಡಿಯಲ್ಲಿ ಬಂಧಿಸಿದ ಎಲ್ಲ ರಾಜಕೀಯ ಬಂಧಿಗಳ ಬಿಡುಗಡೆಯನ್ನು ಆಗ್ರಹಿಸಿ, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ವಿರುದ್ಧ, ಸಂಸತ್ತು, ನ್ಯಾಯಾಂಗ, ಚುನಾವಣಾ ಆಯೋಗ ಮುಂತಾದ ಸ್ವತಂತ್ರ ಸಂವಿಧಾನಿಕ ಸಂಸ್ಥೆಗಳನ್ನು ಶಿಥಿಲಗೊಳಿಸುವುದರ ವಿರುದ್ಧ ಮತ್ತು ಜನತೆಯ ಚುನಾವಣಾ ತೀರ್ಪುಗಳ ನಿರಾಕರಣೆಗೆ ಬಿಜೆಪಿಯ ಹಣಶಕ್ತಿಯ ಬೃಹತ್ ಪ್ರಮಾಣದ ಬಳಕೆಯ ವಿರುದ್ಧ ಜಾತ್ಯತೀತ ಪ್ರಜಾಪ್ರಭುತ್ವವಾದಿ ಪಕ್ಷಗಳು, ಜನತಾ ಆಂದೋಲನಗಳು, ಚಿಂತಕರು ಮತ್ತು ಇತರ ಪ್ರತಿಷ್ಠಿತ ವ್ಯಕ್ತಿಗಳ ಒಂದು ವಿಶಾಲ ರಂಗವನ್ನು ರಚಿಸುವುದು

ಡಿಸೆಂಬರ್ 10 ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ದಿನ ಮತ್ತು ಡಿಸೆಂಬರ್ 18 ಅಂತರ್ರಾಷ್ಟ್ರೀಯ ಅಲ್ಪಸಂಖ್ಯಾತರ ಹಕ್ಕುಗಳ ದಿನ. ಡಿಸೆಂಬರ್ 10ರಿಂದ 18 ನಡುವಿನ ಅವಧಿಯಲ್ಲಿ ದೇಶಾದ್ಯಂತ ಮಾನವ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ವಾರಾಚರಣೆ ನಡೆಸಬೇಕು.

ಈ ಪ್ರತಿಯೊಂದು ಪ್ರಶ್ನೆಯ ಮೇಲೆ ಅಥವ ಕೆಲವು ಪ್ರಶ್ನೆಗಳನ್ನು ಸೇರಿಸಿ ರಾಜ್ಯ ಮಟ್ಟದ ವಿಶಾಲ ರಂಗಗಳನ್ನು ಬೆಸೆಯಬೇಕು, ಇದಕ್ಕಾಗಿ ಸಾದ್ಯವಾದಷ್ಟು ವಿಶಾಲವಾದ ಶಕ್ತಿಗಳನ್ನು ಅಣಿನೆರೆಸಬೇಕು, ಇವು ಗಣತಂತ್ರ ದಿನ, 2021ರಂದು ನಮ್ಮ ಸಂವಿಧಾನ ರಕ್ಷಣೆಯ ಕರೆಯೊಂದಿಗೆ ಪೂರ್ಣಗೊಳ್ಳಬೇಕು.

ಚಿಲಿ: ಹೊಸ ಸಂವಿಧಾನ ರಚನೆಗೆ ಭಾರೀ ಬೆಂಬಲ

ಅಕ್ಟೋಬರ್ 25 ರಂದು ನಡೆದ 'ರಾಷ್ಟ್ರೀಯ ಜನಾಭಿಪ್ರಾಯ ಸಂಗ್ರಹಣೆ'ಯಲ್ಲಿ, 1980 ರಲ್ಲಿ ಜನರಲ್ ಅಗಸ್ಟೊ ಪಿನೋಶೆ (1973–1990) ರ ಮಿಲಿಟರಿ ಸರ್ವಾಧಿಕಾರ ಆಡಳಿತದ ಅಡಿಯಲ್ಲಿ ಹೇರಲಾಗಿದ್ದ ಸಂವಿಧಾನವನ್ನು ರದ್ದು ಮಾಡಿ ಹೊಸ ಸಂವಿಧಾನ ರಚಿಸಲು ಭಾರೀ ಬೆಂಬಲ ವ್ಯಕ್ತವಾಗಿದೆ. ಇದು ಸರ್ವಾಧಿಕಾರದ ವಿರುದ್ಧ ಚಿಲಿಯ ಜನರ ಹಲವು ವರ್ಷಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ವರ್ಣಿಸಲಾಗಿದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಅಕ್ಟೋಬರ್ 25 ರಂದು ನಡೆದ ರಾಷ್ಟ್ರೀಯ ಜನಾಭಿಪ್ರಾಯ ಸಂಗ್ರಹಣೆ'ಯಲ್ಲಿ ಭಾರೀ ಬಹುಮತದೊಂದಿಗೆ ಹೊಸ ಸಂವಿಧಾನದ ರಚಿಸಲು, ಚಿಲಿಯ ಮತದಾರರು ಅನುಮೋದನೆ ನೀಡಿದ್ದಾರೆ. 1980 ರಲ್ಲಿ ಜನರಲ್ ಅಗಸ್ಟೊ ಪಿನೋಶೆ (1973–1990) ರ ಮಿಲಿಟರಿ ಸರ್ವಾಧಿಕಾರ ಆಡಳಿತದ ಅಡಿಯಲ್ಲಿ, ಹೇರಲಾಗಿದ್ದ ಸಂವಿಧಾನವನ್ನು ರದ್ದು ಮಾಡಿ ಹೊಸ ಸಂವಿಧಾನ ರಚಿಸಲು ಭಾರೀ ಬೆಂಬಲ ವ್ಯಕ್ತವಾಗಿದೆ. ಶೇ.78.27 ರಷ್ಟು ಮತಗಳು ಹೊಸ ಸಂವಿಧಾನದ ರಚಿಸುವ ಪರವಾಗಿ ಬಿದ್ದಿದೆ. ಇದು ಸರ್ವಾಧಿಕಾರದ ವಿರುದ್ಧ ಚಿಲಿಯ ಜನರ ಹಲವು ವರ್ಷಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ವರ್ಣಿಸಲಾಗಿದೆ.

ಚುನಾಯಿತ ಸೋಶಲಿಸ್ಟ್ ಅಧ್ಯಕ್ಷ ಅಲೆಂದೆ ಅವರನ್ನು ಕ್ಷಿಪ್ರದಂಗೆಯಲ್ಲಿ ಉರುಳಿಸಿ ಬಂದ ಜನರಲ್ ಪಿನೊಶೆ ಹೇರಿದ ಸಂವಿಧಾನ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಂಡಿತ್ತು. ಹೆಚ್ಚಿನ ಸಾರ್ವಜನಿಕ ಸೇವೆ ಮತ್ತು ಕಲ್ಯಾಣಗಳನ್ನು ಕೊನೆಗೊಳಿಸುವ ಅಥವಾ ಕಡಿತಗೊಳಿಸುವ ಅತ್ಯಂತ ತೀವ್ರವಾದ ಮುಕ್ತ–ಮಾರುಕಟ್ಟೆ ಬಂಡವಾಳಶಾಹಿ ಆಧಾರಿತ ಆರ್ಥಿಕ ಧೋರಣೆಗಳನ್ನು ಹೇರಿತ್ತು. ಆಮೂಲಕ ಆರ್ಥಿಕ ಅಸಮಾನತೆ, ಬಡತನಗಳನ್ನು ಅಗಾಧವಾಗಿ ಹೆಚ್ಚಿಸುವಲ್ಲಿ ಮತ್ತು ಸಾಮಾಜಿಕ ಅತೃಪ್ತಿ ಉಂಟು ಮಾಡುವಲ್ಲಿ ಪ್ರಧಾನ ಪಾತ್ರ ವಹಿಸಿತ್ತು. ಪಿನೋಶೆ ಪದಚ್ಯುತಿಯಾಗಿ ಪ್ರಜಾಪ್ರಭುತ್ವ ಮರುಸ್ಥಾಪನೆಯ ನಂತರ 1990ರಲ್ಲಿ ಆ ಸಂವಿಧಾನದ ಕೆಲವು ಪ್ರಜಾಸತ್ತಾತ್ಮಕ ಹಕ್ಕುಗಳ ವಿರೋಧಿ ಅಂಶಗಳನ್ನು ತೆಗೆದು ಹಾಕಲಾಯಿತಾದರೂ, ಜನ–ವಿರೋಧಿ ಆರ್ಥಿಕ ಅಂಶಗಳು ಉಳಿದುಕೊಂಡಿದ್ದವು.



ಜನಪರ ಆರ್ಥಿಕ–ಸಾಮಾಜಿಕ ಸುಧಾರಣೆಗಳನ್ನು ಜಾರಿ ಮಾಡಲು ಈ ಸಂವಿಧಾನವೇ ಅಡ್ಡಿ ಎಂದು ಗುರುತಿಸಿದ ಸಾಮಾಜಿಕ–ರಾಜಕೀಯ ಚಳುವಳಿಗಳು ಇದರ ವಿರುದ್ಧ ಹೋರಾಡುತ್ತಲೇ ಬಂದಿದ್ದವು. ಕಳೆದ ವರ್ಷ ಮೆಟ್ರೋ ದರಗಳ ವಿರುದ್ಧ ಆರಂಭವಾದ ಪ್ರತಿಭಟನೆ ಆಶ್ಚರ್ಯರೀತಿಯಲ್ಲಿ ಗರಿಗೆದರಿಕೊಂಡು, ಪಿನೊಶೆ ಕಾಲದ ಪಿಂಚಣಿ ಯೋಜನೆಯ ರದ್ದತಿ, ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯಸೇವೆಯಲ್ಲಿ ಹೂಡಿಕೆ, ಆದಿವಾಸಿಗಳ ಹಕ್ಕುಗಳ ಮಾನ್ಯತೆಗಳಿಗೆ ಹಕ್ಕೊತ್ತಾಯಗಳಿಗೆ ವಿಸ್ತರಿಸಿತ್ತು. ಅಂತಿಮವಾಗಿ ಇವೆಲ್ಲ ಜನಪರ ಕ್ರಮಗಳಿಗೆ ತೊಡಕಾಗಿರುವ ಪಿನೊಶೆ ಸಂವಿಧಾನ ರದ್ದತಿ ಮಾಡಬೇಕು ಎಂದು ಒತ್ತಾಯ ಮಾಡಿ ಅದಕ್ಕೆ ಸರಕಾರ ಮಣಿಯುವಂತೆ ಮಾಡಿತ್ತು. ಅದರ ಫಲವೇ ಸಂವಿಧಾನ ಬದಲಿಸುವ ಕುರಿತು ಅಕ್ಟೋಬರ್ 25 ರಂದು ನಡೆದ ಜನಾಭಿಪ್ರಾಯ ಸಂಗ್ರಹಣೆ.

ಐತಿಹಾಸಿಕ ಜನಾದೇಶ

ಈ ಐತಿಹಾಸಿಕ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಇದ್ದ ಎರಡನೆಯ ಪ್ರಶ್ನೆ, ಹೊಸ ಸಂವಿಧಾನವನ್ನು ಬರೆಯಬೇಕಾದ ವಿಧಾನಕ್ಕೆ ಸಂಬಂಧಿಸಿದ್ದಾಗಿತ್ತು.



ಚಿಲಿಯ ನಾಗರಿಕರು "ಸಾಂವಿಧಾನಿಕ ಅಸೆಂಬ್ಲಿ"ಯ ವಿಧಾನವನ್ನು ಶೇ.79.04% ಮತಗಳ ಅಪಾರ ಬಹುಮತದೊಂದಿಗೆ ಆರಿಸಿಕೊಂಡಿದ್ದಾರೆ. ಇದು ಪ್ರಬುದ್ಧವಾದ ಹಾದಿಯೆಂದು ಮೆಚ್ಚುಗೆ ವ್ಯಕ್ತ ಪಡಿಸಲಾಗಿದೆ. ಹೊಸ ಸಂವಿಧಾನವನ್ನು ಬರೆಯುವ ಈ "ಸಾಂವಿಧಾನಿಕ ಅಸೆಂಬ್ಲಿ"ಯ ನಾಗರಿಕರಿಂದ ಚುನಾಯಿತರಾದ ಸದಸ್ಯರನ್ನು ಒಳಗೊಂಡಿರುತ್ತದೆ. ಸಮಾನ ಸಂಖ್ಯೆಯ ಸ್ತ್ರೀ ಮತ್ತು ಪುರುಷರು ಕಡ್ಡಾಯವಾಗಿ ಇದರ ಭಾಗವಾಗಿರುತ್ತಾರೆ.

ಸಂವಿಧಾನದಲ್ಲಿನ ಯಾವುದೇ ಬದಲಾವಣೆಯನ್ನು ತಿರಸ್ಕರಿಸುವ ಆಯ್ಕೆಯು ಕೇವಲ ಶೇ. 21.73% ಮತಗಳನ್ನು ಪಡೆಯಿತು. ಹೊಸ ಸಂವಿಧಾನವನ್ನು "ಮಿಶ್ರ ಸಮಾವೇಶ" ದಿಂದ ಬರೆಯುವ ವಿಧಾನವು ಕೇವಲ ಶೇ 20.96 ಮತಗಳನ್ನು ಪಡೆಯಿತು. "ಮಿಶ್ರ ಸಮಾವೇಶ"ದ ವಿಧಾನದಲ್ಲಿ ಪ್ರಸ್ತುತ ಕಾಂಗ್ರೆಸ್ ಸದಸ್ಯರ ಶೇ. 50 ರಷ್ಟು ಪ್ರಾತಿನಿಧ್ಯ ಮತ್ತು ಶೇ. 50 ರಷ್ಟು ಹೊಸ ಚುನಾಯಿತ ಸದಸ್ಯರಿರುವ ಪ್ರಸ್ತಾವವಿತ್ತು.



ಚಿಲಿಯ ಹೊರಗಿನ 65 ದೇಶಗಳಲ್ಲಿ ವಾಸಿಸುತ್ತಿರುವ 85% ಕ್ಕೂ ಹೆಚ್ಚು ಸಾಗರೋತ್ತರ ಮತದಾರರು ಹೊಸ ಸಂವಿಧಾನದ ಕರಡು ರಚನೆಯನ್ನು ಬೆಂಬಲಿಸಿದ್ದಾರೆ. ಮತದಾನದ ಪ್ರಮಾಣವು 50% ಕ್ಕಿಂತ ಹೆಚ್ಚಿದ್ದು, 1990 ರಲ್ಲಿ ಚಿಲಿಯಲ್ಲಿ ಪ್ರಜಾಪ್ರಭುತ್ವಕ್ಕೆ ಮರಳಿದ ನಂತರದಲ್ಲಿ ಇದು ಅತಿ ಹೆಚ್ಚು ಮತದಾನವಾಗಿದೆ.

ಫಲಿತಾಂಶಗಳ ಘೋಷಣೆಯ ನಂತರ ರಾತ್ರಿ 10:00 ರ ಸುಮಾರಿಗೆ, ರಾಜಧಾನಿ ಸ್ಯಾಂಟಿಯಾಗೊದ ಡಿಗ್ನಿಟಿ ಪ್ಲಾಜಾ' ದಲ್ಲಿ ಜನರು ಜಮಾಯಿಸಿ "ಅನುಮೋದನೆ" ಮತ್ತು "ಸಾಂವಿಧಾನಿಕ ಸಮಾವೇಶ" ಆಯ್ಕೆಗಳ ವಿಜಯೋತ್ಸವವನ್ನು ಘೋಷಣೆಗಳು, ಹಾಡುಗಳು, ಪಟಾಕಿ ಮತ್ತು ಮಡಕೆ ಹೊಡೆಯುವ ಘಟನೆಗಳೊಂದಿಗೆ ಆಚರಿಸಿದರು. ಇದಲ್ಲದೆ, ರಾಜಧಾನಿಯು ಮಧ್ಯದಲ್ಲಿರುವ ಅತ್ಯಂತ ಎತ್ತರದ ಕಟ್ಟಡವಾದ ಟೆಲಿಫೋನ್ ಟವರ್ ನಲ್ಲಿ ವಿಜಯದ ಸಂದೇಶವನ್ನು ಯೋಜಿಸಲಾಗಿತ್ತು. ದೇಶದ ಇತರ ನಗರಗಳಲ್ಲಿಯೂ ನಾಗರಿಕರು, ಸಾಮಾಜಿಕ ಚಳುವಳಿಗಳು ಮತ್ತು ಪ್ರಗತಿಪರ ರಾಜಕೀಯ ಪಕ್ಷಗಳು ಬೀದಿಗಿಳಿದು ಫಲಿತಾಂಶ ಮತ್ತು ಜನರ ವಿಜಯವನ್ನು ಆಚರಿಸಿದ ಸುದ್ದಿಗಳು ಬಂದಿವೆ.

ಮುಂದೇನು?

'ಲಾ ಮೊನೆಡಾ' ಅಧ್ಯಕ್ಷೀಯ ಅರಮನೆಯಿಂದ ಅಧ್ಯಕ್ಷ ಸೆಬಾಸ್ಟಿಯನ್ ಪಿನೆರಾರವರು, ಚುನಾವಣೆಗಳಲ್ಲಿ ನಾಗರಿಕರು ಭಾರಿ ಪ್ರಮಾಣದಲ್ಲಿ ಭಾಗವಹಿಸಿ ಮತ ಚಲಾಯಿಸಿದ್ದನ್ನು ಶ್ಲಾಘಿಸಿದರು ಮತ್ತು ಹೊಸ ಸಂವಿಧಾನದ ಬಗ್ಗೆ ಒಟ್ಟಾಗಿ ಕೆಲಸ ಮಾಡಲು ಏಕತೆಯನ್ನು ಎತ್ತಿಹಿಡಿಯಬೇಕೆಂದು ಕರೆ ನೀಡಿದರು. "ಈ ಜನಾಭಿಪ್ರಾಯ ಸಂಗ್ರಹವು ಚಿಲಿಯ ಹೊಸ ಸಂವಿಧಾನವನ್ನು ಒಪ್ಪಿಕೊಳ್ಳಲು ನಾವು ಒಟ್ಟಾಗಿ ಪ್ರಯಾಣಿಸಬೇಕಾದ ಹಾದಿಯು ಪ್ರಾರಂಭವಾಗಿದೆ. ಇಲ್ಲಿಯವರೆಗೆ ಸಂವಿಧಾನವು ನಮ್ಮನ್ನು ವಿಭಜಿಸಿತ್ತು. ಇಂದಿನಿಂದ, ನಾವೆಲ್ಲರೂ ಸಹಕರಿಸುವ ಮೂಲಕ ಒಗ್ಗಟಿನಿಂದ ಸಜ್ಜಾಗಬೇಕು. ಆದ್ದರಿಂದ ಹೊಸ ಸಂವಿಧಾನವು ಏಕತೆ, ಸ್ಥಿರತೆ ಮತ್ತು ಭವಿಷ್ಯದ ದೊಡ್ಡ ಚೌಕಟ್ಟಾಗಿದೆ "ಎಂದು ಪಿನೆರಾ ಪ್ರಸ್ತಾಪಿಸಿದ್ದು ಮೆಚ್ಚುಗೆಗೆ ಪಾತ್ರವಾಗಿದೆ.

"ಸಾಂವಿಧಾನಿಕ ಅಸೆಂಬ್ಲಿ" ಯ 155 ಸದಸ್ಯರನ್ನು ಆಯ್ಕೆ ಮಾಡಲು ನಾಗರಿಕರು ಮತ್ತೆ ಮತದಾನ ಮಾಡುತ್ತಾರೆ. ಈ ಮತದಾನವು 2021 ರ ಏಪ್ರಿಲ್ 11 ರಂದು ಪ್ರಾದೇಶಿಕ ಮತ್ತು ಪುರಸಭೆಯ ಚುನಾವಣೆಗಳೊಂದಿಗೆ ನಡೆಯಲಿದೆ. ಚುನಾಯಿತ ಸದಸ್ಯರಿಗೆ ಹೊಸ ಸಂವಿಧಾನದ ಬರೆಯುವ ಕೆಲಸ ಮಾಡಲು ಒಂಬತ್ತು ತಿಂಗಳು ಇರುತ್ತದೆ. ಅದು ಸಿಧ್ಧವಾದ ಎರಡು ತಿಂಗಳ ನಂತರ, ಹೊಸ ಸಂವಿಧಾನದ ಅಂತಿಮ ಕರಡನ್ನು ಅಂಗೀಕಾರಕ್ಕಾಗಿ ಹೊಸ ಜನಪ್ರಿಯ ಜನಾಭಿಪ್ರಾಯ ಸಂಗ್ರಹಕ್ಕೆ ತರಲಾಗುವುದು. ಇದು ಕಡ್ಡಾಯ ಮತದಾನ ಪ್ರಕ್ರಿಯೆಯಾಗಲಿದ್ದು, 2022 ರ ದ್ವಿತೀಯಾರ್ಧದಲ್ಲಿ ನಡೆಯಲಿದೆ. ಹೀಗೆ ಎರಡು ವರ್ಷಗಳ ನಂತರ ಚಿಲಿ ಹೊಸ ಸಂವಿಧಾನ ಪಡೆಯಲಿದೆ.

ಅಂತರರಾಷ್ಟ್ರೀಯ ಮೆಚ್ಚುಗೆ

ಸಂವಿಧಾನದ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಚಿಲಿ ಜನರು ತಮ್ಮ ಭಾರಿ ಗೆಲುವು ಸಾಧಿಸಿದ್ದಕ್ಕಾಗಿ ಲ್ಯಾಟಿನ್ ಅಮೆರಿಕದಾದ್ಯಂತ ಹಲವಾರು ಸಾಮಾಜಿಕ ಮತ್ತು ರಾಜಕೀಯ ಮುಖಂಡರು ಮತ್ತು ಸಂಘಟನೆಗಳು ಅಭಿನಂದನೆ ಸಲ್ಲಿಸಿದ್ದಾರೆ. ವೆನೆಜುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಅವರು ಚಿಲಿಯ ಜನರನ್ನು ಅಭಿನಂದಿಸಿದ ಮೊದಲ ನಾಯಕರಲ್ಲಿ ಒಬ್ಬರಾಗಿದ್ದರು ಮತ್ತು 1973 ರಲ್ಲಿ ಮಿಲಿಟರಿ ದಂಗೆಯಿಂದ ಉರುಳಿಸಲ್ಪಟ್ಟ ಚಿಲಿಯ ಮಾಜಿ ಸೋಶಲಿಸ್ಟ್ ಅಧ್ಯಕ್ಷ ಸಾಲ್ವಡಾರ್ ಅಲೆಂಡೆ ಅವರ ಕೊನೆಯ ಭಾಷಣವನ್ನು ನೆನಪಿಸಿಕೊಂಡರು. "ಚಿಲಿ ಜನರಿಗೆ ನನ್ನ ಅಭಿನಂದನೆಗಳು, ಮನ್ನಣೆ ಮತ್ತು ಮೆಚ್ಚುಗೆ ತಮ್ಮ ಸಂವಿಧಾನದ ಭವಿಷ್ಯವನ್ನು ನಿರ್ಧರಿಸಲು ಮತ್ತು ಪಿನೋಶೆಯಿಸಂ ಗೆ ಅಂತ್ಯ ಹಾಡಲು ನೀವುಗಳು ಇಂದು ಬೀದಿಗಳಲ್ಲಿ ಮತ್ತು ಚುನಾವಣಾ ಕೇಂದ್ರಗಳಲ್ಲಿ ತೊಡಗಿದ್ದೀರಿ. ಉತ್ತಮ ಸಮಾಜವನ್ನು ನಿರ್ಮಿಸಲು ದೊಡ್ಡ ಮಾರ್ಗಗಳನ್ನು ತೆರೆಯಲಾಗಿದೆ. ಚಿಲಿ ದೀರ್ಘಕಾಲ ಬದುಕಬೇಕು. ಅಲೆಂದೆ ದೀರ್ಘಕಾಲ ಬದುಕಬೇಕು" ಎಂದು ಮಡುರೊ ಅಭಿನಂದಿಸಿ ಟ್ವೀಟ್ ನಲ್ಲಿ ಬರೆದಿದ್ದಾರೆ.

ಬೊಲಿವಿಯಾದ ಮಾಜಿ ಅಧ್ಯಕ್ಷ ಇವೊ ಮೊರೇಲ್ಸ್ ಕೂಡ ತಮ್ಮ ಶುಭಾಶಯಗಳನ್ನು ಕಳುಹಿಸಿದ್ದಾರೆ. "ಪಿನೋಶೆ ಸಂವಿಧಾನವನ್ನು ರದ್ದು ಮಾಡುವ ಜನಾಭಿಪ್ರಾಯ ಸಂಗ್ರಹಣೆಯಲ್ಲಿನ ದೊಡ್ಡ ವಿಜಯಕ್ಕಾಗಿ ನಾವು ಚಿಲಿಯ ಜನರಿಗೆ ನಮಸ್ಕರಿಸುತ್ತೇವೆ. ಹೊಸ ಸಾಮಾಜಿಕ ಒಪ್ಪಂದವು ನಿಮ್ಮ ದೇಶಕ್ಕಾಗಿ, ನಿಮ್ಮ ಜನರ ಯೋಗಕ್ಷೇಮ ಮತ್ತು ಏಕೀಕರಣಕ್ಕಾಗಿ ಹೆಚ್ಚು ನ್ಯಾಯಯುತವಾದ ಸಮಾಜವನ್ನು ನಿರ್ಮಿಸುತ್ತದೆ"ಎಂದು ಮೊರೇಲ್ಸ್ ಟ್ವೀಟ್ ಮಾಡಿದ್ದಾರೆ.

ಈಕ್ವೆಡಾರ್ ನ ಮಾಜಿ ಅಧ್ಯಕ್ಷ ರಾಫೆಲ್ ಕೊರಿಯಾ ಕೂಡ ಅಲೆಂಡೆ ಅವರ ಪ್ರಸಿದ್ಧ ಮಾತುಗಳನ್ನು ಪ್ರತಿಧ್ವನಿಸಿದರು ಮತ್ತು ಚಿಲಿಯರನ್ನು ಅಭಿನಂದಿಸಿದರು. "ಚಿಲಿಯು ದೀರ್ಘಕಾಲ ಬದುಕಬೇಕು!" ಶೀಘ್ರದಲ್ಲೇ ಉತ್ತಮ ಸಮಾಜವನ್ನು ನಿರ್ಮಿಸಲು ಹಾದು ಹೋಗುವ ದೊಡ್ಡ ಮಾರ್ಗಗಳು ತೆರೆದುಕೊಳ್ಳುತ್ತವೆ ಎಂದಿದ್ದಾರೆ. ■

ಬೈಡನ್ ಏಕೆ ಭಾರೀ ಅಂತರದಿಂದ ಗೆಲ್ಲಲಿಲ್ಲ?...... ಪುಟ 6 ರಿಂದ

ರಾಷ್ಟ್ರೀಯವಾದ) ಮತ್ತು ಅತಾರ್ಕಿಕ (ಕೊವಿದ್ ಅಪಾಯಕಾರಿಯಲ, ಹವಾಮಾನ ಬದಲಾವಣೆ ಬೊಗಳೆ) ವಿಷಯಗಳೇ ಪ್ರಧಾನವಾದವು. ಈ ವಿಷಯಗಳಲ್ಲೂ ಬೈಡನ್ ದೃಢ ನಿಲುವುಗಳನ್ನು ಮುಂದಿಡಲಿಲ್ಲ.

ಇದಕ್ಕೆ ಕಾರಣ ಸ್ಪಷ್ಟ. ಬೈಡನ್ ಅಮೆರಿಕವನ್ನು (ಮಾತ್ರವಲ್ಲ ಜಗತ್ತನ್ನು) ಆಳುತ್ತಿರುವ ಸಣ್ಣ ಅತಿ ಶ್ರೀಮಂತ ದೈತ್ಯ ಕಾರ್ಪೊರೆಟ್ ಕಂಪನಿಗಳ ಪ್ರತಿನಿಧಿಯೇ. ಇದು ಬೈಡನ್ ಎತ್ತಿದ ಅಧ್ಯಕ್ಷೀಯ ಚುನಾವಣಾ ವಂತಿಗೆಯಿಂದಲೇ ಸ್ಪಷ್ಟವಾಗುತ್ತದೆ. ಅಕ್ಟೋಬರ್ 26ರವರೆಗೆ ಟ್ರಂಪ್ 59.6 ಮತ್ತು ಬೈಡನ್ 93.8 ಕೋಟಿ ಡಾಲರುಗಳಷ್ಟು ಖರ್ಚು ಮಾಡಿದ್ದಾರೆ. ಇತರ ಅಧ್ಯಕ್ಷೀಯ (ಪ್ರಾಥಮಿಕ ಚುನಾವಣೆಗಳಲ್ಲಿ ಸೋತ) ಅಭ್ಯರ್ಥಿಗಳು 216 ಕೋಟಿ ಮತ್ತು ಎಲ್ಲ ಅಭ್ಯರ್ಥಿಗಳು ಸೇರಿ ಒಟ್ಟು 369 ಕೋಟಿ ಡಾಲರುಗಳು ಖರ್ಚು ಮಾಡಿದ್ದಾರೆ. ಇದರಲ್ಲಿ ದೊಡ್ಡ ಪಾಲು ಅಮೆರಿಕದ ಎಲ್ಲಾ ಕ್ಷೇತ್ರಗಳ ದೈತ್ಯ ಕಾರ್ಪೊರೆಟುಗಳೇ ಕೊಟ್ಟಿರುವುದು. ಮತ್ತು ಹೆಚ್ಚಿನ ಕಂಪನಿಗಳು ಎರಡೂ ಅಭ್ಯರ್ಥಿಗಳಿಗೆ ವಂತಿಗೆ ಕೊಡುತ್ತವೆ. ಕೆಲವು ಕಂಪನಿಗಳು ಒಬ್ಬರಿಗೆ ಹೆಚ್ಚು, ಇನ್ನೊಬ್ಬರಿಗೆ ಕಡಿಮೆ ಅಷ್ಟೇ. ಆದ್ದರಿಂದ ಬೈಡನ್ ರಿಂದ ಅಮೆರಿಕದಲ್ಲಿ ಅಥವಾ ಜಾಗತಿಕವಾಗಿ ಯಾವುದೇ ಪ್ರಮುಖ ಬದಲಾವಣೆ ನಿರೀಕ್ಷಿಸುವುದು ಸಾಧ್ಯವಿಲ್ಲ. ಟ್ರಂಪ್ ತಮ್ಮ ಧೋರಣೆಗಳನ್ನು ಜನರನ್ನು ಉದ್ದೇಶಿಸಿ ನೇರವಾಗಿ ತಲುಪಿಸಿದಷ್ಟು ಬೈಡನ್ ಗೆ ಸಂವಹನ ಸಾಧ್ಯವಾಗಲಿಲ್ಲ. ಟ್ರಂಪ್ ಮತ್ತು ಬಲಪಂಥೀಯ ಪ್ರಚಾರ ಯಂತ್ರದ ಕಾಲಾಳುಗಳಂತೆ ಅವರಿಗೆ ಸೆಡ್ಡು ಹೊಡೆದು ವ್ಯಾಪಕ ಪ್ರಚಾರವೂ ಸಾಧ್ಯವಾಗಲಿಲ್ಲ.

ಆದರೆ ಟ್ರಂಪ್ ಸೋತರೆ ಅದು ಅದರಷ್ಟಕ್ಕೆ ಒಂದು ಮಹತ್ವದ ರಾಜಕೀಯ ಬೆಳವಣಿಗೆಯೇ. ಜಾಗತಿಕವಾಗಿ ಅಪಾಯಕಾರಿಯಾಗಿ ಫ್ಯಾಸಿಸ್ಟ್ ದಿಕ್ಕಿನಲ್ಲಿ ಬೆಳೆಯುತ್ತಿರುವ ಉಗ್ರ ಬಲಪಂಥೀಯ ರಾಜಕಾರಣಕ್ಕೆ ಒಂದು ಹಿನ್ನಡೆಯೇ. ಬೈಡನ್ ಅಥವಾ ಡೆಮೊಕ್ರಾಟಿಕ್ ಪಕ್ಷದ ಕೇಂದ್ರೀಯ ನಾಯಕತ್ವದ ಸ್ಫೂರ್ತಿ ಅಥವಾ ಉತ್ತೇಜನವಿಲ್ಲದಿದ್ದರೂ, ಉಗ್ರ ಬಲಪಂಥದ ವಿರುದ್ಧ ಹಣಾಹಣಿಗೆ ಸಿದ್ಧವಿರುವ ಎಡ ಮತ್ತು ನಡುಪಂಥೀಯ ಹಾಗೂ ಟ್ರೇಡ್ ಯೂನಿಯನ್ ತಳಮಟ್ಟದ ಕಾರ್ಯಕರ್ತರು ಬೀದಿಗಿಳಿದಿದ್ದರು. ಮುಂದೆಯೂ ಬೀದಿಗಳಿಯಲು ಸಿದ್ಧವಾಗಿದ್ದಾರೆ. ಡೆಮೊಕ್ರಾಟಿಕ್ ಪಕ್ಷದ ಒಳಗೆ ಮತ್ತು ಹೊರಗೆ ಎಡಪಂಥದ ರಾಜಕೀಯ ಪ್ರಭಾವ ಗಣನೀಯವಾಗಿ ಹೆಚ್ಚಿದೆ. ಇದರ ಫಲವಾಗಿ ಡೆಮೊಕ್ರಾಟಿಕ್ ಮತ್ತು ಕೆಲವು ಸ್ವತಂತ್ರ ಎಡಪಂಥೀಯರು ಪಾರ್ಲಿಮೆಂಟಿಗೆ ಆಯ್ಕೆಯಾಗಿದ್ದಾರೆ. ಬಂಡವಾಳಶಾಹಿ–ವಿರೋಧಿ ರಾಜಕಾರಣವನ್ನು ಮುಂದೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ. ಬೈಡನ್ ಆಡಳಿತದ ಮೇಲೆ ನೀತಿ ಬದಲಾವಣೆಗೆ ಒತ್ತಡ ಹೇರಲಿದ್ದಾರೆ. ಎಡಪಂಥದ ತಳಮಟ್ಟ ಗಟ್ಟಿಗೊಳಿಸಲಿದ್ದಾರೆ. ಅಂತಿಮವಾಗಿ ಅದು ಮಾತ್ರ ಬಲಪಂಥೀಯ ಸವಾಲನ್ನು ಎದುರಿಸಬಲ್ಲದು.

ಅಮೆರಿಕದ ಪ್ರಜಾಸತ್ತೆಯ ಅಗಾಧ ನ್ಯೂನತೆಗಳು, ಹುಳುಕುಗಳು ಹಿಂದೆಂದಿಗಿಂತಲೂ ಈ ಚುನಾವಣೆಯಲ್ಲಿ ಢಾಳಾಗಿ ಜಾಗತಿಕವಾಗಿ ಬಯಲಾಗಿವೆ. ಇದೂ ಹೆಚ್ಚು ಪ್ರಜಾಸತ್ತಾತ್ಮಕವಾದ ಚುನಾವಣಾ ವಿಧಾನ, ಹಣ ಮತ್ತು ಮಾಧ್ಯಮ ಬಲದ ಪ್ರಭಾವ ಕಡಿಮೆ ಮಾಡುವಂತಹ ಸುಧಾರಣೆಗಳನ್ನು ತರುವತ್ತ ಒತ್ತಡ ಹೇರಲಿವೆ. ಒಟ್ಟಿನಲ್ಲಿ ಟ್ರಂಪ್ ಸೋಲು ಸಂತೋಷಕರ ಬೆಳವಣಿಗೆಯೇ. ಆದರೆ ಬೈಡನ್ ಜಯದ ಬಗ್ಗೆ ಹಿಗ್ಗುವ ಪರಿಸ್ಥಿತಿ ಇಲ್ಲ. ■

JANASHAKTHI KANNADA VARA PATRIKE November 9-15, 2020 Price: Rs. 10/- Date of Publication: 6 November 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರಾಜ್ಯ, ಕೇಂದ್ರ ಸರ್ಕಾರಗಳ ವಿರುದ್ಧ ರಾಜ್ಯಾದ್ಯಂತ ರೈತ ಸಂಘಟನೆಗಳಿಂದ ಪ್ರತಿಭಟನೆ

ಕಾರ್ಮಿಕ ನೀತಿ, ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಮಸೂದೆ, ಭೂಸ್ವಾಧೀನ ಕಾಯ್ದೆ, ವಿದ್ಯುತ್ ಖಾಸಗೀಕರಣ ನೀತಿಗಳಿಗೆ, ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ವಿರುದ್ಧ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕರೆ ಕೊಟ್ಟಿರುವ ಪ್ರತಿಭಟನೆಗೆ ರಾಜ್ಯದ ರೈತ ಸಂಘಟನೆಗಳಿಂದ ರೈತ ಸಂಘಟನೆಗಳ ತೀವ್ರ ವಿರೋಧ.



ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿ ಇಂದು ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಮುಂತಾದ ರೈತ ಸಂಘಟನೆಗಳು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿವೆ. ಹಲವೆಡೆ ರೈತರು ರಸ್ತೆ ತಡೆ, ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಸರ್ಕಾರದ ಕಾರ್ಮಿಕ ನೀತಿ, ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಮಸೂದೆ, ಭೂಸ್ವಾಧೀನ ಕಾಯ್ದೆ, ವಿದ್ಯುತ್ ಖಾಸಗೀಕರಣ ಇತ್ಯಾದಿ ಕ್ರಮಗಳನ್ನ ರೈತ ಸಂಘಟನೆಗಳು ಬಲವಾಗಿ ವಿರೋಧಿಸಿವೆ.

ಬೆಂಗಳೂರು, ಮೈಸೂರು, ತುಮಕೂರು, ಕೋಲಾರ, ಕಲಬುರ್ಗಿ, ಶಿವಮೊಗ್ಗ, ದಾವಣಗೆರೆ, ರಾಯಚೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ರೈತ ಸಂಘಟನೆಗಳು ಸಾಂಕೇತಿಕ ಪ್ರತಿಭಟನೆ ನಡೆಸಿವೆ. ಎಲ್ಲಿಯೂ ಹಿಂಸಾಚಾರ ಘಟನೆಗಳು ವರದಿಯಾಗಿಲ್ಲ. ಟೈರ್ ಸುಟ್ಟ ಘಟನೆಗಳೂ ನಡೆದಿಲ್ಲ.

ಬೆಂಗಳೂರಿನಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆಗಳ ಸದಸ್ಯರಿಂದ ಪ್ರತಿಭಟನೆ ನಡೆದಿದೆ. ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದ ರೈತರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕೂತಿದ್ದಾರೆ. ಸರ್ಕಾರವು ತನ್ನ ರೈತ ವಿರೋಧಿ ನೀತಿಗಳನ್ನ ಕೈಬಿಡಬೇಕು. ರೈತರ ಬೆಳೆಗೆ ನ್ಯಾಯಯುತ ಬೆಲೆ ನಿಗದಿ ಮಾಡಬೇಕು. ಪಂಜಾಬ್, ಕೇರಳ ಮತ್ತು ರಾಜಸ್ಥಾನದಲ್ಲಿ ಅಳವಡಿಸಲಾಗಿರುವ ಮಾದರಿ ರೈತ ನೀತಿಗಳನ್ನ ರಾಜ್ಯದಲ್ಲೂ ಜಾರಿಗೆ ತರಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ತುಮಕೂರಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಧರಣಿ ನಡೆಸಿದ್ದಾರೆ. ಕ್ಯಾತಸಂದ್ರ ಸರ್ಕಲ್‌ನಿಂದ ಜಾಸ್ ಟೋಲ್‌ವರೆಗೂ ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ.. ನೂರಾರು ರೈತರು ಜಾಸ್ ಟೋಲ್ ಬಳಿ ರಾಷ್ಟ್ರೀಯ ಹೆದ್ದಾರಿ 48 ತಡೆಯಲು ಪ್ರಯತ್ನಿಸಿದ್ದಾರೆ. ಆದರೆ, ರಸ್ತೆ ತಡೆ ಮಾಡುವ ಪ್ರತಿಭಟನಾಕಾರರನ್ನು ಪೊಲೀಸರು ತಡೆದು ಬಂಧಿಸಿದ್ದಾರೆ.

ಶಿವಮೊಗ್ಗದಲ್ಲಿ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆಗಳು ಎಂಆರ್‌ಎಸ್ ವೃತ್ತದ ಬಳಿ ಹೆದ್ದಾರಿ ಬಂದ್ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ. ದಾವಣಗೆರೆಯಲ್ಲೂ ರೈತರು ರಾ.ಹೆ.–4 ಬಂದ್ ಮಾಡಿ, ದಾವಣಗೆರೆ ಜಿ.ಪಂ. ಎದುರು ಪ್ರತಿಭಟನೆ ನಡೆಸಿದ್ದಾರೆ.

ಕಲಬುರ್ಗಿಯಲ್ಲಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ನೇತೃತ್ವದಲ್ಲಿ ರಸ್ತೆ ತಡೆ ನಡೆಸಲಾಯಿತು. ಸಮಿತಿ ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ, ಎಐಎಎಸ್ ಮುಖಂಡ ಮೌಲಾ ಮುಲ್ಲಾ, ಭೀಮಾಶಂಕರ್ ಮಾಡುಯಾಳ ಮೊದಲಾದ ಮುಖಂಡರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ರಾಯಚೂರು ಮತ್ತು ಚಿತ್ರದುರ್ಗದಲ್ಲೂ ರಸ್ತೆ ತಡೆ ಮಾಡುವ ರೈತರ ಪ್ರಯತ್ನವನ್ನು ಪೊಲೀಸರು ವಿಫಲಗೊಳಿಸಿದ್ದಾರೆ.

ಮೈಸೂರಿನಲ್ಲಿ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆಗಳು ಊಟಿಗೆ ಹೋಗುವ ಹೆದ್ದಾರಿ ರಸ್ತೆಯನ್ನು ತಡೆದು ಆಕ್ರೋಶ ವ್ಯಕ್ತಪಡಿಸಿವೆ. ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ನೂರಾರು ರೈತರು ಎಪಿಎಂಸಿ ಬಳಿಯ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಹೆದ್ದಾರಿ ತಡೆ ಹಿಡಿದಿದ್ದಾರೆ. ಕಾಯ್ದೆಗಳ ಗೆಜೆಟ್ ಸುಡುವ ಮೂಲಕ ರೈತರು ಈ ವೇಳೆ ಆಕ್ರೋಶ ಹೊರಹಾಕಿದ್ದಾರೆ.













JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**